ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ


ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 30 | ಜುಲೈ 19–25, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಕಾಮ್ರೇಡ್ ಶಂಕರಯ್ಯ 100



ಮಾತುಕತೆ ಮೂಲಕ ಮೇಕೆದಾಟು




‘ಅಕ್ರಮ ಗಣಿಗಾರಿಕೆ’ ಮತ್ತು ರಾಜಕೀಯ ಕೆಸರೆರಚಾಟ



‘ಜನಸಂಖ್ಯಾ ನಿಯಂತ್ರಣ’ ಬಡವರ ಮೇಲೆ ದಾಳಿ + ಧ್ರುವೀಕರಣದ ಹುನ್ನಾರ



ಅಫಘಾನಿಸ್ತಾನ: ಅಮೆರಿಕಾಕ್ಕೆ ಅವಮಾನ ಮೋದಿ ಸರ್ಕಾರಕ್ಕೆ ಪೇಚು



ಎಂಗೆಲ್ಸ್ 200 ಅನಾವರಣ

ಕ್ಯೂಬಾದ ಮೇಲಿನ ಅಮೆರಿಕನ್ ನಿರ್ಬಂಧಗಳನ್ನು ತೆಗೆಯಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಕ್ಯೂಬನ್ನರ ತಾಯ್ನಾಡು, ಸಾರ್ವಭೌಮತೆ ಮತ್ತು ಸಮಾಜವಾದದ ರಕ್ಷಣೆಯ ಹೋರಾಟಕ್ಕೆ ಬೆಂಬಲ: ಜನತೆಗೆ ಕರೆ

ಕ್ಯೂಬಾದ ಮೇಲೆ ಅಮೆರಿಕಾದ ಆರ್ಥಿಕ ನಿರ್ಬಂಧ ಉಂಟು ಮಾಡಿರುವ ಸಮಸ್ಯೆಗಳ ಮೇಲೆ ಅಲ್ಲಿನ ಒಂದು ಜನವಿಭಾಗ ಮತಪ್ರದರ್ಶನ ನಡೆಸುತ್ತಿದೆ. ಕ್ಯೂಬಾ ಸರಕಾರ ಮತ್ತು ಕ್ಯೂಬಾ ಕಮ್ಯುನಿಸ್ಟ್ ಪಕ್ಷ ಅವರನ್ನು ತಲುಪಿದೆ.

ಈ ಮತಪ್ರದರ್ಶನಗಳಿಗೆ ಅಮೆರಿಕಾದ ಬೆಂಬಲ ಇದೆ. ತನ್ನದೇ ನಿರ್ಬಂಧಗಳು ಮತ್ತು ಮಹಾಸೋಂಕಿನಂದಾಗಿ ಉಂಟಾಗಿರುವ ತೀವ್ರ ಆರ್ಥಿಕ ಸಮಸ್ಯೆಗಳ ಪ್ರಯೋಜನ ಪಡೆಯಲು ಅದು ಪ್ರಯತ್ನಿಸುತ್ತಿದೆ. ಸಮಾಜವಾದಿ ಕ್ಯೂಬಾವನ್ನು ಅಸ್ಥಿರಗೊಳಿಸುವುದು ಇದರ ಉದ್ದೇಶ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕ್ಯೂಬಾದ ಆಂತರಿಕ ವಿಷಯಗಳಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಹಸ್ತಕ್ಷೇಪವನ್ನು ಖಂಡಿಸಿದೆ.

ಕ್ಯೂಬಾ ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳು ಕಳೆದ 60 ವರ್ಷಗಳಗಿಂತಲೂ ಹೆಚ್ಚು ಸಮಯದಿಂದ ಅಮೆರಿಕ ಸಂಯುಕ್ತ ಸಂಸ್ಥಾನ ಹೇರಿರುವ ಅಮಾನವೀಯ ಮತ್ತು ಕ್ರಿಮಿನಲ್ ನಿರ್ಬಂಧದ ಒಂದು ಫಲಿತಾಂಶ. ಹೆಲ್ಮ್ಸ್–ಬರ್ಟನ್ ಕಾಯ್ದೆಯ ಟೈಟಲ್–3 ನ್ನು ಬಳಸಿ ನಿರ್ಬಂಧವನ್ನು ಗಟ್ಟಿಗೊಳಿಸಲಾಗಿದೆ ಮತ್ತು ಅನಿರೀಕ್ಷಿತ ಕಷ್ಟಕೋಟಲೆಗಳನ್ನು ಹೇರಿದೆ. ಕ್ಯೂಬಾವನ್ನು "ಭಯೋತ್ಪಾದನೆಯನ್ನು ಪ್ರಾಯೋಜಿಸುವ ಪ್ರಭುತ್ವ" ಎಂದು ಅನ್ಯಾಯವಾಗಿ ಪಟ್ಟಿ ಮಾಡಿ ಮಹಾಸೋಂಕಿನ ಸಮಯದಲ್ಲಿ ಈ ನಿರ್ಬಂಧಗಳನ್ನು ಮತ್ತಷ್ಟು ಬಿಗಿಗೊಳಿಸಿದೆ. ಟ್ರಂಪ್ ಆಡಳಿತ ಇನ್ನೂ 243 ನಿರ್ಬಂಧಗಳನ್ನು ಹೇರಿತು. ಇವು ಈಗಲೂ ಮುಂದುವರೆಯುತ್ತಿವೆ.

ಇದರ ಫಲಿತಾಂಶವಾಗಿ, ಕ್ಯೂಬಾಕ್ಕೆ ಆಹಾರ, ಔಷದಿ, ಲಸಿಕೆ ಮತ್ತು ವೈದ್ಯಕೀಯ ಸಾಧನಗಳ ಉತ್ಪಾದನೆಗೆ ಬೇಕಾಗುವ ಕಚ್ಚಾ ವಸ್ತುಗಳ ಆಮದನ್ನು ನಿರಾಕರಿಸಲಾಗಿದೆ. ಇದು ಕ್ಯೂಬಾದ ಜನಗಳ ಸಂಕಷ್ಟಗಳನ್ನು ಉಲ್ಬಣಗೊಳಿಸಿದೆ. ಕ್ಯೂಬಾದ ಜನತೆ ತಮ್ಮ ಸರಕಾರದ ವಿರುದ್ಧ ಮತಪ್ರದರ್ಶನ ನಡೆಸಲು ಅಮೆರಿಕಾ ಸಾಮಾಜಿಕ ಮಾಧ್ಯಮಗಳ ಮೂಲಕ ಸುಳ್ಳು ಸುದ್ದಿಗಳನ್ನು ಹರಡುತ್ತಿದೆ.

ಇದರ ಹೊರತಾಗಿಯೂ ಕ್ಯೂಬಾದ ಸರಕಾರ ತನ್ನದೇ ಸ್ವಂತ ಲಸಿಕೆ ಮಾದರಿಗಳನ್ನು ಅಭಿವೃದ್ಧಿ ಪಡಿಸಿದೆ, ಈ ಮೂಲಕ ಜಗತ್ತು ಮಹಾಸೋಂಕಿನ ವಿರುದ್ಧ ಹೋರಾಡಲು ನೆರವಾಗುತ್ತಿದೆ ಹಾಗೂ ಆರ್ಥಿಕ ಅಡಚಣೆಗಳನ್ನು ಮೀರಿ ನಿಲ್ಲಲು ಪ್ರಯತ್ನಿಸುತ್ತಿದೆ.

"ಗಂಭೀರ ಕಷ್ಟ–ಕಾರ್ಪಣ್ಯಗಳ ಈ ಅವಧಿಯಲ್ಲಿ ನಾವು ಕ್ಯೂಬಾದ ಸರಕಾರಕ್ಕೆ ಮತ್ತು ಕ್ಯೂಬಾದ ಜನತೆಗೆ ಸೌಹಾರ್ದವನ್ನು ವ್ಯಕ್ತಪಡಿಸುತ್ತೇವೆ. ಕ್ಯೂಬಾದ ಜನತೆ ಮತ್ತು ಅವರ ಸರಕಾರಕ್ಕೆ, ತಮ್ಮ ತಾಯ್ನಾಡು, ಸಾರ್ವಭೌಮತೆ ಮತ್ತು ಸಮಾಜವಾದವನ್ನು ರಕ್ಷಿಸುವ ಅವರ ಹೋರಾಟದ ಬೆಂಬಲಕ್ಕೆ ನಿಲ್ಲಬೇಕು ಎಂದು ಜನತೆಗೆ ಕರೆ ನೀಡುತ್ತೇವೆ" ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

"ಎಪಿಎಂಸಿಗಳಿಗೆ 1 ಲಕ್ಷ ಕೋಟಿ ರೂ. ನೀಡಿಕೆ"–ಹೊಸ ಕೇಂದ್ರ ಸಂಪುಟದ ಹೊಸ 'ಜುಮ್ಲಾ': ರೈತರನ್ನು ಮರುಳು ಮಾಡಲು ಸಾಧ್ಯವಿಲ್ಲ: ಸಂಯುಕ್ತ ಕಿಸಾನ್ ಮೋರ್ಚಾದ ಕಟು ಟೀಕೆ

ಪುನರ್ರಚನೆಗೊಂಡ ಹೊಸ ಕೇಂದ್ರ ಸಂಪುಟ ಎಪಿಎಂಸಿಗಳಿಗೆ 'ಕೃಷಿ ಹೂಡಿಕೆ ನಿಧಿ'(ಎಐಎಫ್) ಅಡಿಯಲ್ಲಿ ಹಣಕಾಸು ಸೌಲಭ್ಯವನ್ನು ಲಭ್ಯಗೊಳಿಸಲು ತನ್ನ ಮೊದಲ ಸಭೆಯಲ್ಲಿ ನಿರ್ಧರಿಸಿದೆ ಎಂದು ಕೃಷಿ ಮಂತ್ರಿಗಳು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಇದು ಸಾರ್ವಜನಿಕರನ್ನು ತಪ್ಪು ದಾರಿಗೆಳೆಯುವ ಇನ್ನೊಂದು ಜುಮ್ಲಾ, ಅಂದರೆ ಹುಸಿ ಭರವಸೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಬಲವಾಗಿ ಟೀಕಿಸಿದೆ.

'ಕೃಷಿ ಹೂಡಿಕೆ ನಿಧಿ'ಯ ಮಾರ್ಗಸೂಚಿಗಳನ್ನು ಬದಲಿಸಿ ಎಪಿಎಂಸಿಗಳಿಗೆ 1 ಲಕ್ಷ ಕೋಟಿ ರೂ.ಗಳನ್ನು ಕೊಡಮಾಡಲಾಗುತ್ತದೆ ಎಂದು ಸರಕಾರ ಹೇಳಿಕೊಂಡಿದೆ.

ಆದರೆ 'ಕೃಷಿ ಹೂಡಿಕೆ ನಿಧಿ'ಗೆ ಸರಕಾರ 1ಲಕ್ಷ ಕೋಟಿಯೇನು, 1 ಸಾವಿರ ಕೋಟಿ ರೂ. ಕೂಡ ಕೊಡುತ್ತಿಲ್ಲ. ವಾಸ್ತವವಾಗಿ, ಈ ಹೆಸರಿನಲ್ಲಿ ಹೊಸದೊಂದು ಬಾಬ್ತನ್ನು ತೆರೆಯಲಾಗಿದ್ದು, ಇದರ ಅಡಿಯಲ್ಲಿ ಬ್ಯಾಂಕುಗಳು ಸಾಲ ಕೊಡುತ್ತವೆ, ಅದರ ಮೇಲಿನ ಬಡ್ಡಿಯಲ್ಲಿ 3% ದಷ್ಟು ಸರಕಾರ ಕೊಡುತ್ತದೆ. ಇದಕ್ಕಾಗಿ 2020–21ರಲ್ಲಿ ಕೇವಲ 208 ಕೋಟಿ ರೂ. ನೀಡಿದ್ದರೆ, 2021–22ರ ಬಜೆಟಿನಲ್ಲಿ ಕೊಟ್ಟಿರುವುದು ಕೂಡ 990 ಕೋಟಿ ರೂ. ಮಾತ್ರ.

ಈ ನಿಧಿಯ ಅಡಿಯಲ್ಲಿ ಮಾರ್ಚ್ 31, 2021ರ ವರೆಗೆ ಮಂಜೂರಾಗಿರುವ ಸಾಲಗಳ ಮೊತ್ತ ಕೂಡ ಕೇವಲ 3241 ಕೋಟಿ ರೂ.(ಇತ್ತೀಚಿನ ಒಂದು ವರದಿ 4300 ಕೋಟಿ ರೂ. ಎಂದಿದೆ); ವಾಸ್ತವವಾಗಿ ಕೊಟ್ಟಿರುವ ಸಾಲದ ಮೊತ್ತ ಇನ್ನೂ ಕಡಿಮೆ. ಇದು 20ಲಕ್ಷ ಕೋಟಿ ರೂ.ಗಳದ್ದು ಎನ್ನಲಾದ 20 ಲಕ್ಷ ಕೋಟಿ ರೂ. 'ಆತ್ಮನಿರ್ಭರ ಪ್ಯಾಕೆಜಿ'ನ ಭಾಗ. ಅದರಲ್ಲಿಯೂ ಸರಕಾರ ನಿಜವಾಗಿ ಖರ್ಚು ಮಾಡುವ ಹಣ ಅತ್ಯಲ್ಪವಾಗಿದ್ದಂತೆ, ಅದರ ಭಾಗವೇ ಆಗಿರುವ ಈ ನಿಧಿಯಲ್ಲಿಯೂ ಅಷ್ಟೇ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಜನರಿಗೆ ನೆನಪಿಸಿದೆ.

ಅಲ್ಲದೆ, ಮೋದಿ ಸರಕಾರ ಮೂರು ಕೃಷಿ ಕಾಯ್ದೆಗಳ ಮೂಲಕ ಕಾರ್ಪೊರೇಟ್ ಪರ ನಿಲುವು ತಳೆದು ಎಪಿಎಂಸಿ ವ್ಯವಸ್ಥೆಯನ್ನೇ ಕಳಚಿ ಹಾಕಲು ಹೊರಟಿರುವಾಗ ಎಪಿಎಂಸಿಗೆ ಹೆಚ್ಚಿನ ಹಣಕಾಸು ಒದಗಿಸಲಾಗುತ್ತದೆ ಎಂಬದು ಕೇವಲ ವಂಚನೆಯಷ್ಟೇ ಆಗುತ್ತದೆ.

ಕೃಷಿ ಮಂತ್ರಿಗಳು ಮತ್ತು ಕೇಂದ್ರ ಸರಕಾರ ರೈತರು ಬುದ್ಧಿಗೇಡಿಗಳು ಎಂದು ಭಾವಿಸಬಾರದು. ಅವರಿಗೆ ಸರಕಾರದ ಹುನ್ನಾರ ಕಾಣುತ್ತದೆ ಎಂದಿರುವ ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು, **ರೈತರಿಗೆ ಬೇಕಾಗಿರುವುದು ಹೆಚ್ಚಿನ ಸಾಲಗಳಲ್ಲ, ಬದಲಿಗೆ ಸಾಲಗ್ರಸ್ತತೆಯಿಂದ ಮುಕ್ತಿ.** ಅವರು ಕೇಳುತ್ತಿರುವುದು ಕಾನೂನಾತ್ಮಕ ಖಾತ್ರಿ ಇರುವ ಫಲದಾಯಕ ಬೆಲೆಗಳು ಎಂದು ಮತ್ತೊಮ್ಮೆ ನೆನಪಿಸಿದ್ದಾರೆ. ಮೂರು ರೈತ–ವಿರೋಧಿ ಕಾಯ್ದೆಗಳ ಸುತ್ತ ಹುಸಿ ಮಾತು(ಜುಮ್ಲಾ)ಗಳನ್ನು ಕೈಬಿಟ್ಟು ಅವನ್ನು ರದ್ದು ಮಾಡಬೇಕು, ಮತ್ತು ಎಲ್ಲ ರೈತರಿಗೆ ಎಲ್ಲ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಯ ಖಾತ್ರಿ ಕೊಡುವ ಒಂದು ಹೊಸ ಕಾನೂನು ತರಬೇಕು ಎಂದು ಅವರು ಮತ್ತೆ ಆಗ್ರಹಿಸಿದ್ದಾರೆ.

100ನೇ ವರ್ಷಕ್ಕೆ ಕಾಲಿಟ್ಟ ಕಾಂ. ಶಂಕರಯ್ಯ



ಸ್ವಾತಂತ್ರ್ಯ ಹೋರಾಟಗಾರ ಹಾಗೂ ಹಿರಿಯ ಕಮ್ಯುನಿಸ್ಟ್ ನೇತಾರ ಎನ್. ಶಂಕರಯ್ಯ ಜುಲೈ 15ರಂದು ತಮ್ಮ ಜೀವನದ 100ನೇ ವರ್ಷಕ್ಕೆ ಕಾಲಿಟ್ಟಿದ್ದಾರೆ.

ಎಳೆ ವಯಸ್ಸಿನಲ್ಲೇ ತಮಿಳುನಾಡಿನ ಆತ್ಮಗೌರವ ಚಳುವಳಿ ಮತ್ತು ಅದರ ಸಾಮಾಜಿಕ ಸುಧಾರಣೆ ಮತ್ತು ನಾಸ್ತಿಕತೆಯ ತತ್ವಗಳಿಂದ ಆಕರ್ಷಿತರಾಗಿದ್ದ ಅವರು ಸ್ವಾತಂತ್ರ್ಯ ಚಳುವಳಿ ಉತ್ತುಂಗಕ್ಕೇರುತ್ತಿದ್ದ ಆ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷ ಮಾತ್ರವೇ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯನ್ನು ಮುಂದಿಟಿದ್ದನ್ನು ಗಮನಿಸಿದ್ದ ವಿದ್ಯಾರ್ಥಿ. ಆರ್ಥಿಕ ಸಮಾನತೆಯಿರುವ ಒಂದು ಜಾತಿರಹಿತ ಸಮಾಜದತ್ತ ಸಾಗುವ ಸಾಮಾಜಿಕ ಬದಲಾವಣೆ ತರುವುದು ಅಗತ್ಯ, ಈ ನಿಟ್ಟಿನಲ್ಲಿ ಮಾರ್ಕ್ಸ್‌ವಾದ ಮಾತ್ರವೇ ಮಾನವಕುಲವನ್ನು ಈ ಗುರಿಯತ್ತ ಒಯ್ಯಬಲ್ಲದು ಎಂಬ ತೀರ್ಮಾನಕ್ಕೆ ಬಂದು ಅವರು ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಅವರದ್ದು ಮಧುರೈ ಜಿಲ್ಲೆಯ ಮೊದಲ ಪಕ್ಷದ ಶಾಖೆ.

ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಜೈಲುವಾಸವನ್ನು ಅನುಭವಿಸಿದ ಶಂಕರಯ್ಯ ಮುಂದೆ ಕಾರ್ಮಿಕ ವರ್ಗದ ಹೋರಾಟಗಳು ಹಾಗೂ ಆಹಾರಧಾನ್ಯಗಳ ಕಾಳಸಂತೆಯ ವಿರುದ್ಧ ಹೋರಾಟದಿಂದಾಗಿ 1946 ರಲ್ಲಿ ಮಧುರೈ ಪಿತೂರಿ ಮೊಕದ್ದಮೆ ಎಂಬುದರಲ್ಲಿ ಮತ್ತಿತರ ಕಮ್ಯುನಿಸ್ಟ್ ಮುಖಂಡರೊಂದಿಗೆ ಜೈಲುವಾಸ ಅನುಭವಿಸಿದರು, ಸ್ವಾತಂತ್ರ್ಯದ ಹಿಂದಿನ ದಿನ, ಅಂದರೆ ಆಗಸ್ಟ್ 14, 1947ರಂದಷ್ಟೇ ಅವರು ಬಿಡುಗಡೆ ಹೊಂದಿದರು.

1964ರಲ್ಲಿ ಅಗಿನ ಸಿಪಿಐನ ರಾಷ್ಟ್ರೀಯ ಮಂಡಳಿಯಿಂದ ಹೊರನಡೆದು ಸಿಪಿಐ(ಎಂ) ಸ್ಥಾಪಿಸಿದ 2 ಮುಖಂಡರಲ್ಲಿ ವರಲ್ಲಿ ಒಬ್ಬರಾದ ಶಂಕರ್ಯನವರ 100ನೇ ಜನ್ಮ ದಿನಾಚರಣೆಯನ್ನು ತಮಿಳುನಾಡಿನಲ್ಲಿ ಪಕ್ಷದ ಶಾಖೆಗಳ ವಿಶೇಷ ಸಭೆಗಳು, ಧ್ವಜಾರೋಹಣ, ಕೊವಿಡ್ ಸಂತ್ರಸ್ತರಿಗೆ ನೆರವು ಇತ್ಯಾದಿಗಳ ಮೂಲಕ ಆಚರಿಸಲಾಗಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮತ್ತು ತಮಿಳುನಾಡು ಮುಖ್ಯಮಂತ್ರಿಗಳು ಅವರನ್ನು ಭೇಟಿ ಮಾಡಿ ಶುಭಾಶಯ ಕೋರಿದರು.



ಸಿಐಟಿಯು–ಎಐಕೆಎಸ್–ಎಐಎಡಬ್ಲ್ಯುಯು ನಿಂದ ಜುಲೈ 25 ರಿಂದ ಆಗಸ್ಟ್ 9:"ಭಾರತ ರಕ್ಷಿಸಿ"ಚಳುವಳಿ

ಸಿಐಟಿಯು, ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಜುಲೈ25ರಿಂದ "ಬಾರತ ರಕ್ಷಿಸಿ' ಪಕ್ಷಾಚರಣೆ ನಡೆಸಲು ನಿರ್ಧರಿಸಿವೆ. ಕೇಂದ್ರದಲ್ಲಿನ ಸರಕಾರ ಪ್ರತಿಭಟನೆಗಿಳಿದಿರುವ ರೈತರ ಮತ್ತು ಕಾರ್ಮಿಕರ ಆಗ್ರಹಗಳನ್ನು ಪರಿಶೀಲಿಸುವ ಲಕ್ಷಣಗಳೇನೂ ಕಾಣುತ್ತಿಲ್ಲವಾದ್ದರಿಂದ ಈ ಚಳುವಳಿ ನಡೆಸಲು ನಿರ್ಧರಿಸಿರುವುದಾಗಿ ಈ ಸಂಘಟನೆಗಳು ಹೇಳಿವೆ.

ದೇಶದ ವಿವಿಧ ಭಾಗಗಳಲ್ಲಿ ಈ ಸಂಘಟನೆಗಳ ಘಟಕಗಳು ರೈತರ ಮತ್ತು ಕಾರ್ಮಿಕರ ಆಗ್ರಹಗಳ ಬಗ್ಗೆ ಜನಜಾಗೃತಿ ಮೂಡಿಸುತ್ತವೆ ಹಾಗೂ ಇದರ ಕೊನೆಯಲ್ಲಿ ಮಹಾತ್ಮ ಗಾಂಧಿ 80 ವರ್ಷಗಳ ಹಿಂದೆ, 1942ರಲ್ಲಿ ಬ್ರಿಟಿಷರ ವಿರುದ್ಧ "ಕ್ವಿಟ್ ಇಂಡಿಯಾ' ಕರೆ ಕೊಟ್ಟ ದಿನವಾದ ಆಗಸ್ಟ್ 9ರಂದು ದೇಶಾದ್ಯಂತ "ಭಾರತ ರಕ್ಷಿಸಿ" ದಿನಾಚರಣೆ ನಡೆಸಲು ನಿರ್ಧರಿಸಲಾಗಿದೆ.

ನಿಜವಾಗಿಯೂ "ರಾಷ್ಟ್ರದ ಸಂಪತ್ತಿನ ಸೃಷ್ಟಿಕರ್ತರು" ಅಗಿರುವ ರೈತರು, ಕೃಷಿ ಕೂಲಿಕಾರರು ಮತ್ತು ಕಾರ್ಮಿಕರು ಈ ಚಳುವಳಿಯಲ್ಲಿ ಒಟ್ಟು ಗೂಡಿ ನರೇಂದ್ರ ಮೋದಿ ಸರಕಾರದ ವಿರುದ್ಧ ಹೋರಾಟವನ್ನು ತೀವ್ರಗೊಳಿಸುತ್ತಾರೆ. ಇದರ ಉದ್ದೇಶ ನಮ್ಮ ಸದಸ್ಯರಿಗೆ ಮಾತ್ರವಲ್ಲ, ಜನಸಮೂಹಗಳಿಗೆ ನಮ್ಮ ಆಗ್ರಹಗಳ ಬಗ್ಗೆ ವಿವರಿಸುವುದು. ಮೋದಿ ಸರಕಾರದ ಹಠಮಾರಿ ನಿಲುವಿಗೆ ಕಾರಣಗಳನ್ನೂ ನಾವು ತಿಳಿಸುತ್ತೇವೆ" ಎಂದು ಸಿಐಟಯು ಅಧ್ಯಕ್ಷರಾದ ಕೆ. ಹೇಮಲತಾ ಹೇಳಿದ್ದಾರೆ.

ಈ ಚಳುವಳಿ ಏಳು ಬೇಡಿಕೆಗಳನ್ನು ಮುಂದಿಟ್ಟಿದೆ. ಆದಾಯ ತೆರಿಗೆ ವ್ಯಾಪಿಯಲ್ಲಿ ಇಲ್ಲದ ಕುಟುಂಬಗಳಿಗೆ 7500ರೂ.ಗಳ ನಗದು ಬೆಂಬಲ, ಅಗತ್ಯವಿರುವ ಎಲ್ಲರಿಗೂ ರೇಶನ್ ಹಂಚಿಕೆ, ಸಾರ್ವತ್ರಿಕ ಉಚಿತ ಲಸಿಕೆ, ಮೂರು ಕೃಷಿ ಕಾಯ್ದೆಗಳು ಮತ್ತು ಕಾರ್ಮಿಕ ಸಂಹಿತೆಗಳನ್ನು ಹಿಂತೆಗೆದುಕೊಳ್ಳುವುದು ಇವುಗಳಲ್ಲಿ ಸೇರಿದೆ.

ಈ ನಡುವೆ, ದಿಲ್ಲಿ ಗಡಿಗಳಲ್ಲಿ ಏಳು ತಿಂಗಳು ದಾಟಿರುವ ರೈತರ ಹೋರಾಟದ ಮುಂದಿನ ಕಾರ್ಯಕ್ರಮದ ಭಾಗವಾಗಿ ಸಂಯುಕ್ತ ಕಿಸಾನ್ ಮೋರ್ಚಾ **ಜುಲೈ22 ರಿಂದ ಸಂಸತ್ ಭವನದ ಎದುರು ಪ್ರತಿಭಟನೆ ನಡೆಸಲು ನಿರ್ಧರಿಸಿದೆ. ಸಂಯುಕ್ತ ಕಿಸಾನ್ ಮೋರ್ಚಾಕ್ಕೆ ಸೇರಿದ ಪ್ರತಿ ಸಂಘಟನೆಯಿಂದ ಗರಿಷ್ಟ 5 ರಂತೆ ಒಟ್ಟು 200 ಮಂದಿ ಸಂಸತ್ತಿನ ಎದುರು ಮತಪ್ರದರ್ಶನಗಳನ್ನು ನಡೆಸುತ್ತಾರೆ** ಎಂದು ಸಂಘಟಕರು ಹೇಳಿದ್ದಾರೆ. ಜುಲೈ 19 ರಂದು ಸಂಸತ್ತಿನ ಮಳೆಗಾಲದ ಅಧಿವೇಶನ ಆರಂಭವಾಗುತ್ತಿದೆ.

ಈ ಹೋರಾಟ ಆರಂಭವಾದಾಗಿನಿಂದ ರೈತ ಹಾಗೂ ಕಾರ್ಮಿಕ ಸಂಘಟನೆಗಳು ಪರಸ್ಪರರ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದಾರೆ. ಈ ಬಾರಿಯೂ ದಿಲ್ಲಿಯಲ್ಲಿ ರೈತರು ಮತಪ್ರದರ್ಶನ ಮಾಡುವಾಗ ದೇಶದ ಇತರೆಲ್ಲ ಭಾಗಗಳಲ್ಲಿ ಕಾರ್ಮಿಕರ ಸಂಘಟನೆಗಳು ಪ್ರತಿಭಟನೆಗಳನ್ನು ನಡೆಸುತ್ತವೆ ಎಂದು ಎಐಕೆಸ್ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಹೇಳಿದ್ದಾರೆ.

ಸಂಪಾದಕೀಯ

ಮಾತುಕತೆ ಮೂಲಕ ಮೇಕೆದಾಟು

ಮತ್ತೊಮ್ಮೆ ನದಿ ನೀರಿನ ವಿವಾದವೊಂದು ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಎದ್ದು ನಿಂತಿದೆ. ರಾಮನಗರ ಜಿಲ್ಲೆಯ ಮೇಕೆದಾಟುವಿನಲ್ಲಿ ಕರ್ನಾಟಕ ಸರ್ಕಾರ ನಿರ್ಮಿಸಲು ಉದ್ದೇಶಿಸಿರುವ ಅಣೆಕಟ್ಟು ಯೋಜನೆ ಎರಡೂ ರಾಜ್ಯಗಳ ಜನರ ನಡುವೆ ವಿವಾದದ ಹೊಗೆಯಾಡಲಾರಂಭಿಸಿದೆ.

ಕಾವೇರಿ ನೀರಿನ ಕುರಿತು ಕರ್ನಾಟಕ ಮತ್ತು ತಮಿಳುನಾಡು ನಡುವಿನ ವಿವಾದಕ್ಕೆ ಸುದೀರ್ಘ ಇತಿಹಾಸವಿದೆ. ಸುಪ್ರೀಂಕೋರ್ಟ್ ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ಸ್ಪಷ್ಟವಾದ ತೀರ್ಪು ನೀಡಿದೆ. ಅದರ ಪ್ರಕಾರ ತಮಿಳುನಾಡಿಗೆ ಎಷ್ಟು ನೀರು ಬಿಡಬೇಕು ಮತ್ತು ಯಾವಾಗ ಬಿಡಬೇಕು ಎನ್ನುವುದು ನಿರ್ಧಾರವಾಗಿದೆ. ರಾಜ್ಯಕ್ಕೆ ಹಂಚಿಕೆಯಾಗಿರುವ ಕಾವೇರಿ ನದಿ ನೀರಿನ ಪಾಲಿನಲ್ಲಿ ಕುಡಿಯುವ ನೀರು ಹಾಗೂ ವಿದ್ಯುತ್ ಉತ್ಪಾದನೆಗಾಗಿ ಮೇಕೆದಾಟು ಯೋಜನೆಯನ್ನು ರಾಜ್ಯ ಸರ್ಕಾರ ಕೈಗೆತ್ತಿಕೊಂಡಿದೆ. ಆದರೆ ಮೇಕೆದಾಟುವಿನಲ್ಲಿ ಕರ್ನಾಟಕ ನಿರ್ಮಿಸಲು ಉದ್ದೇಶಿಸಿರುವ ಅಣೆಕಟ್ಟು ಯೋಜನೆಗೆ ಅನುಮತಿ ನೀಡಬಾರದೆಂದು ತಮಿಳುನಾಡು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದೆ. ಅದರ ಪ್ರಕಾರ ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಿಸಿದರೆ ತಮ್ಮ ರೈತರ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎನ್ನುವುದು ತಮಿಳುನಾಡಿನ ವಾದ. ಆದರೆ, ಬೆಂಗಳೂರಿಗೆ ಕುಡಿಯುವ ನೀರಿನ ಪೂರೈಕೆ ಮತ್ತು ವಿದ್ಯುತ್ ಉತ್ಪಾದನೆಗಾಗಿ ಮಾತ್ರ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಕರ್ನಾಟಕದ ವಾದ. ಈ ನೀರಿನ ಬಳಕೆಯೂ ಸುಪ್ರೀಂ ಕೋರ್ಟಿನ ನಿರ್ದೇಶನದಂತೆಯೇ ನಡೆಯಬೇಕಾಗಿದೆ.

ಕಾವೇರಿ ನೀರಿನ ಹಂಚಿಕೆಯನ್ನು ಭಾವನಾತ್ಮಕಗೊಳಿಸಿ, ಆದರೆ ರಾಜಕೀಯ ಲಾಭ ಪಡೆಯಲು ಎರಡೂ ರಾಜ್ಯಗಳ ಕೆಲವು ರಾಜಕೀಯ ಪಕ್ಷಗಳು ಪ್ರಯತ್ನಿಸುತ್ತಾ ಬಂದಿವೆ. ಇಂತಹ ರಾಜಕೀಯ ಮೇಲಾಟಗಳಿಂದಾಗಿ ಎರಡೂ ರಾಜ್ಯಗಳ ಜನರ ಮನಸ್ಸಿನಲ್ಲಿ ಅನಗತ್ಯ ದ್ವೇಷದ ಭಾವನೆ ಮೂಡಲು ಕಾರಣವಾಗುತ್ತಾ ಬಂದಿದ್ದು ಅದಕ್ಕೆ ಈಗ ಪುನಃ ಅವಕಾಶ ನೀಡಬಾರದು.

ಕರ್ನಾಟಕದಿಂದ ತಮಿಳುನಾಡಿನತ್ತ ಮಳೆಗಾಲದಲ್ಲಿ ಹರಿಯುವ ನೀರನ್ನು ಹಿಡಿದಿಡಲು ಬೇಕಾದ ಅಣೆಕಟ್ಟು, ಬ್ಯಾರೇಜ್ ಮತ್ತು ಕಾಲುವೆಗಳ ವ್ಯವಸ್ಥೆ ತಮಿಳುನಾಡು ಮಾಡಿಕೊಂಡಿಲ್ಲ. ಹೀಗೆ ಪೋಲಾಗಿ ಹೋಗುವ ನೀರಿನ ಸದ್ಬಳಕೆ ಮಾಡಿಕೊಳ್ಳಲು ಮೇಕೆದಾಟು ಅಣೆಕಟ್ಟು ನಿರ್ಮಾಣ ಪ್ರಯೋಜನಕಾರಿಯಾಗಿದೆ. ಇದರಿಂದ ತಮಿಳುನಾಡಿನ ರೈತರ ಕೃಷಿಗೆ ನೀರಿನ ಕೊರತೆ ಉಂಟಾಗುತ್ತದೆ ಎಂದು ಆತಂಕ ವ್ಯಕ್ತಪಡಿಸುವುದು ಸಮಂಜಸವಲ್ಲ.

ತಮಿಳುನಾಡಿಗೆ ಕಾಲಕಾಲಕ್ಕೆ ಕರ್ನಾಟಕ ಬಿಡುಗಡೆ ಮಾಡಬೇಕಾದ ನೀರಿನಲ್ಲಿ ಯಾವುದೇ ಕಡಿತ ಮಾಡಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟಿನ ತೀರ್ಪಿನಂತೆ ಸ್ಥಾಪನೆ ಮಾಡಲಾದ ಕಾವೇರಿ ನೀರು ಪ್ರಾಧಿಕಾರವೂ ಕೆಲಸ ಮಾಡುತ್ತದೆ. ಹಾಗಿರುವಾಗ ತಮಿಳುನಾಡು ಅಪಸ್ವರ ಎತ್ತುವುದು ಸೂಕ್ತವಲ್ಲ. ನ್ಯಾಯಾಲಯದ ಮಧ್ಯಪ್ರವೇಶದ ನಂತರವೂ ಅನುಮಾನ, ಆತಂಕ ಉಳಿದುಕೊಳ್ಳಬಹುದು. ವಿಷಯವನ್ನು ರಾಜಕೀಯಗೊಳಿಸದೆ ಮಾತುಕತೆಯಿಮದ ಬಗೆ ಹರಿಸಿಕೊಳ್ಳಲು ಎರಡೂ ರಾಜ್ಯಗಳು ಪ್ರಯತ್ನಿಸುವುದು ಸೂಕ್ತ.

ಕೇಂದ್ರದ ಬಿಜೆಪಿ ಸರ್ಕಾರ ಕರ್ನಾಟಕಕ್ಕೆ ನ್ಯಾಯ ಒದಗಿಸುವ ಭರವಸೆ ಕೊಟ್ಟಿದೆ ಎಂದು ಹೇಳಲಾಗುತ್ತದೆ. ತಮಿಳುನಾಡಿನಲ್ಲಿ ಬಿಜೆಪಿಯ ಮಿತ್ರ ಪಕ್ಷ ಅಧಿಕಾರದಲ್ಲಿದ್ದಾಗ ಬಿಜೆಪಿ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಇಂತಹ ಭರವಸೆ ನೀಡಲು ಮುಂದಾಗುತ್ತಿರಲಿಲ್ಲ. ಈಗ ಬಿಜೆಪಿಗೆ ವಿರುದ್ಧವಾದ ಪಕ್ಷದ ಸರ್ಕಾರ ತಮಿಳುನಾಡಿನಲ್ಲಿ ಇರುವುದರಿಂದ ಅದನ್ನು ಕೆಣಕಲು ಕೇಂದ್ರದ ಬಿಜೆಪಿ ಸರ್ಕಾರ ಕರ್ನಾಟಕದ ಬಿಜೆಪಿ ಸರ್ಕಾರಕ್ಕೆ ನ್ಯಾಯದ ಭರವಸೆ ನೀಡುತ್ತಿದೆ. ಇದೆಂತಹ ನ್ಯಾಯ? ತಮ್ಮ ಚುನಾವಣಾ ಲಾಭಕ್ಕಾಗಿ ಎರಡು ರಾಜ್ಯಗಳ ಜನರನ್ನು ಪರಸ್ಪರ ಎತ್ತಿಕಟ್ಟುವ ಕೀಳು ಮಟ್ಟದ ರಾಜಕಾರಣ. ಜನತೆ ಇದರ ಹಿಂದಿನ ಮೋಸವನ್ನು ಅರ್ಥಮಾಡಿಕೊಳ್ಳಲು. ಇಂತಹ ವಿವಾದಗಳ ವಿಷಯದಲ್ಲಿ ಎರಡೂ ರಾಜ್ಯಗಳ ಜನರಿಗೆ ಯಾವುದೇ ರಾಜಕೀಯ ಪಕ್ಷಪಾತ ಮಾಡದೆ ನ್ಯಾಯ ಒದಗಿಸುವುದು ಕೇಂದ್ರ ಸರ್ಕಾರದ ಕರ್ತವ್ಯ.

ಕೋವಿಡ್ ಮತ್ತು ಆರೋಗ್ಯ ಸಂರಕ್ಷಣೆ ಕುರಿತು ಜಾಗೃತಿ ತರಬೇತಿ ಕಾರ್ಯಾಗಾರ



ಆದಿವಾಸಿ ಸಮುದಾಯಗಳಲ್ಲಿ ಕೋವಿಡ್ ಮತ್ತು ಆರೋಗ್ಯ ಸಂರಕ್ಷಣೆ ಕುರಿತು ಜಾಗೃತಿ ತರಬೇತಿ ಕಾರ್ಯಾಗಾರ ಕುಂದಾಪುರ ತಾಲೂಕಿನ ಕೆರಾಡಿ ಗ್ರಾಮದ ಕಾರೆಬೈಲು ಹಸಲರ ಗುಂಪಿನಲ್ಲಿ 11 ಜುಲೈ 2021 ರಂದು ನಡೆಯಿತು. ತರಬೇತಿಯನ್ನು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕರು ಡಾ. ಕೃಷ್ಣಪ್ಪ ಕೊಂಜಾಡಿಯವರು ದೀಪಾ ಬೆಳಗಿಸಿ ಉದ್ಘಾಟನೆಯನ್ನು ನೆರವೇರಿಸಿದರು.

ಕೊರೋನಾವನ್ನು ನಿರ್ಲಕ್ಷಿಸದೇ ಎದುರಿಸೋಣ, ಡಾಕ್ಟರ್ ಅನಿಲ್ ಕುಮಾರ್ ಬಾಗೇಪಲ್ಲಿ ಅವರ ಸೇವೆ ಮತ್ತು ಸಹಕಾರ ನಮ್ಮ ಆದಿವಾಸಿ ಸಮುದಾಯಗಳಲ್ಲಿ ಆರೋಗ್ಯ ಸಂರಕ್ಷಣೆ ಕುರಿತು ಹೊಸ ಭರವಸೆ ಮೂಡಿಸಿದೆ ಎಂದು ತಿಳಿಸಿದರು.

8 ಗ್ರಾಮದಿಂದ ಆಗಮಿಸಿದ ಆದಿವಾಸಿ ಸಮುದಾಯಗಳ ಸ್ವಯಂಸೇವಕರ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು ಕೊರೋನಾ ಸೋಂಕಿನ ಎರಡನೆ ಅಲೆಯು ದೇಶದಲ್ಲಿ ತಲ್ಲಣ ಮೂಡಿಸಿದೆ. ಇದನ್ನು ಎದುರಿಸಲು ಸರ್ಕಾರಗಳ ಜೊತೆಗೆ ಸರ್ಕಾರೇತರ ಸಂಸ್ಥೆಗಳು ಕೈಜೋಡಿಸಬೇಕು ಎಂದರು. ಈ ನಿಟ್ಟಿನಲ್ಲಿ ವೈದ್ಯ ಡಾ. ಎ. ಅನಿಲ್‌ಕುಮಾರ್ ಆದಿವಾಸಿ ಸಮುದಾಯಗಳ ಆರೋಗ್ಯ ಸೇವೆಗೆ ಮುಂದಾಗಿರುವುದು ಶ್ಲಾಘನೀಯ ಎಂದರು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವೈಜ್ಞಾನಿಕವಾಗಿ ಕೊರೋನಾ ಸೋಂಕನ್ನು ಎದುರಿಸಬೇಕಿದೆ. ಮುಗ್ಧ ಜನರಲ್ಲಿ ಭಯವನ್ನುಂಟು ಮಾಡದೇ ಧೈರ್ಯವಾಗಿ ಕೊರೋನಾ ಸೋಂಕು ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸೋಣ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಡಾ. ಎಸ್. ವೈ. ಗುರುಶಾಂತ್ ಆದಿವಾಸಿ ಸಮುದಾಯಗಳು ಅತ್ಯಂತ ಆರೋಗ್ಯದಾಯಕ ಬದುಕು ನಡೆಸಿದವರು. ಆದರೆ ಇಂದಿನ ದಿನಗಳಲ್ಲಿ ಅತ್ಯಂತ ಅಪೌಷ್ಠಿಕತೆ, ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಕೆಲವು ಸಮುದಾಯಗಳು ಅಳಿವಿನ ಅಂಚಿನಲ್ಲಿ ಇವೆ. ಇದಕೆ ಸರಕಾರದ ಅರಣ್ಯ ನೀತಿಗಳು, ಜೀವ ವೈವಿಧ್ಯತೆ ಉಳಿಸುವ ಹೆಸರಿನಲ್ಲಿ ನಡೆಯುತ್ತಿರುವ ನಿರ್ಬಂಧಗಳು ಕೂಡ ಕಾರಣವಾಗಿವೆ. ಆದಿವಾಸಿ ಸಮುದಾಯಗಳ ಬದುಕು ಉಳಿಯಲು ಒಟ್ಟು ವೆವಸ್ಥೆಗೆ ಇವರ ಕುರಿತು ಸಂವೇದನೆ ಅಗತ್ಯವಿದೆ. ಆದಿವಾಸಿ ಸಮುದಾಯಗಳ ಆರೋಗ್ಯ ಸಂರಕ್ಷಣೆಗಾಗಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ರಾಜ್ಯದಲ್ಲಿ ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು ಜಿಲ್ಲೆಗಳಲ್ಲಿ ಡಾ. ಎ. ಅನಿಲ್ ಕುಮಾರ್ ಮಾರ್ಗದರ್ಶನದೊಂದಿಗೆ ತರಬೇತಿ ಕಾರ್ಯಾಗಾರ ಆಯೋಜಿಸಿದೆ ಎಂದರು.

ಮುಖ್ಯ ಅತಿಥಿಗಳಾದ ಡಾ. ಶ್ರೀಕಾಂತ ಕೊಲ್ಲೂರು ರವರು ಮಾತನಾಡಿ ಆದಿವಾಸಿ ಸಮುದಾಯಗಳ ಆರೋಗ್ಯ ಸಂರಕ್ಷಣೆಗಾಗಿ ಪ್ರತಿ ಗ್ರಾಮದಲ್ಲಿ ಸ್ವಯಂಸೇವಕರ ತಂಡ ರಚಿಸಿ ಅವರ ಮೂಲಕ ಜನರ ಆರೋಗ್ಯ ರಕ್ಷಣೆಗೆ ಮುಂದಾಗಿರುವುದು ಮಹತ್ವದ ಕೆಲಸವಾಗಿದೆ. ಮುಂದಿನ ದಿನಗಳಲ್ಲಿ ಆದಿವಾಸಿಗಳ ಆರೋಗ್ಯ ಸಂರಕ್ಷಣೆಗೆ ನಿರಂತರವಾಗಿ ಸದಾ ಬೆಂಬಲಿಸಿ ಅವರಿಗೆ ಬೇಕಾದ ಆರೋಗ್ಯ ಚಿಕಿತ್ಸೆ, ಅಗತ್ಯ ಔಷಧಿ ಒದಗಿಸುವುದಾಗಿ ತಿಳಿಸಿದರು.

ನಂತರ ಮಾತನಾಡಿದ ಡಾ. ಎ. ಅನಿಲ್ ಕುಮಾರ್ ಬಾಗೇಪಲ್ಲಿ ಕೋವಿಡ್ ಗುಣಲಕ್ಷಣಗಳು ಇದ್ದರೂ ಗ್ರಾಮೀಣ ಜನರು ಆರಂಭದಲ್ಲಿಯೇ ವೈದ್ಯರ ಬಳಿಗೆ ತೆರಳದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎನ್ನುವ ದೂರುಗಳಿವೆ. ರಕ್ತದಲ್ಲಿ ಆಮ್ಲಜನಕ ಪ್ರಮಾಣದ ಬಗ್ಗೆಯೂ ಅರಿವು ಇರುವುದಿಲ್ಲ. ಈ ಎಲ್ಲ ದೃಷ್ಟಿಯಿಂದ ಪ್ರಾಥಮಿಕ ಹಂತದಲ್ಲಿಯೇ ರೋಗಿಗಳನ್ನು ಗುರುತಿಸುವ ಕೆಲಸವನ್ನು ಆದಿವಾಸಿ ಆರೋಗ್ಯ ಸಂರಕ್ಷಣೆ ಸ್ವಯಂ ಸೇವಕರು ಮಾಡುತ್ತಾರೆ ಎಂದು ತಿಳಿಸಿದರು.

ಕನಿಷ್ಠ ಶಿಕ್ಷಣ ಪಡೆದಿರುವ, ಪಲ್ಸ್ ಆಕ್ಸಿಮೀಟರ್ ಮತ್ತು ಥರ್ಮಾಮೀಟರ್ ಬಗ್ಗೆ ತಿಳಿವಳಿಕೆಯುಳ್ಳ ಆಯಾ ಗ್ರಾಮಗಳ ಇಬ್ಬರು ಅಥವಾ ಮೂವರು ಸ್ವಯಂಸೇವಕರು ಕಾರ್ಯ ನಿರ್ವಹಿಸುವರು. ಹಾಗೂ ಕೋವಿಡ್‌ನ ಪ್ರಾಥಮಿಕ ಗುಣಲಕ್ಷಣಗಳ ಚಿಕಿತ್ಸೆಗೆ ಅಗತ್ಯವಿರುವ ಮಾತ್ರೆಗಳು ಇವರ ಬಳಿ ಇರಲಿವೆ' ಎಂದು ಡಾ. ಅನಿಲ್‌ಕುಮಾರ್ ತಿಳಿಸಿದರು.

ಆದಿವಾಸಿ ಜನರು ಸೋಂಕಿನ ಲಕ್ಷಣಗಳು ಕಾಣಿಸಿಕೊಂಡ ತಕ್ಷಣವೇ ಚಿಕಿತ್ಸೆಗೆ ಬರುವ ಮನಸ್ಸು ಮಾಡುತ್ತಿಲ್ಲ. ಲಕ್ಷಣಗಳು ಕಾಣಿಸಿಕೊಂಡ ಐದಾರು ದಿನಗಳ ತರುವಾಯ ಆಸ್ಪತ್ರೆಗೆ ಬರುತ್ತಾರೆ. ಅಷ್ಟರಲ್ಲಿ ರೋಗ ತೀವ್ರವಾಗಿರುತ್ತದೆ. ಸಾವುಗಳು ಸಂಭವಿಸುವ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ಪ್ರಾಥಮಿಕ ಹಂತದಲ್ಲಿಯೇ ರೋಗವನ್ನು ಗುರುತಿಸಿ ಚಿಕಿತ್ಸೆ ನೀಡಲು ಈ ಮಹತ್ವದ ಯೋಜನೆಯನ್ನು ಆರಂಭಿಸುತ್ತಿರುವುದಾಗಿ ಹೇಳಿದ್ದಾರೆ.

ತರಬೇತಿ ಪಡೆದ ಸ್ವಯಂಸೇವಕರು ಜನರ ಆಮ್ಲಜನಕ, ಜ್ವರವನ್ನು ನಿರಂತರವಾಗಿ ಪರೀಕ್ಷಿಸುತ್ತಾರೆ. ರೋಗ ಲಕ್ಷಣಗಳಿದ್ದವರ ಬಗ್ಗೆ ದೂರವಾಣಿ ಮೂಲಕ ಸ್ವಯಂ ಸೇವಕರು ನಮಗೆ ಮಾಹಿತಿ ನೀಡುವರು. ಯಾವ ಮಾತ್ರೆಗಳನ್ನು ನೀಡಬೇಕು ಎಂದು ಸೂಚಿಸುತ್ತೇವೆ. ಅವರ ಮಾಹಿತಿಯನ್ನು ಪುಸ್ತಕದಲ್ಲಿ ನೋಂದಾಯಿಸಿಕೊಳ್ಳುತ್ತೇವೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಸರಿಯಾದ ಸಮಯಕ್ಕೆ ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸ್ವಯಂಸೇವಕರು ಸಹಕಾರ ನೀಡುತ್ತಾರೆ.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಜಲಜ ಕತ್ತಲಕೊಡು ರವರು ಡಾ.ಅನಿಲ್ ಕುಮಾರ್ ರವರು ಮಾಡುತ್ತಿರುವ ಸೇವೆಯನ್ನು ಪ್ರತಿ ಆದಿವಾಸಿಗಳ ಕುಟುಂಬಕ್ಕೆ ತಲುಪಿಸಲು ಸದಾ ಸಿದ್ದರಾಗಿರುತ್ತೇವೆ. ನಮ್ಮ ಕಡೆಯಿಂದ ವಿವಿಧ ರೂಪದಲ್ಲಿ ಬೆಂಬಲ ಹಾಗೂ ಸಹಕಾರ ನೀಡುತ್ತೇವೆ ಎಂದರು.

ಸಭೆಯಲ್ಲಿ ಆದಿವಾಸಿ ಆರೋಗ್ಯ ಸ್ವಯಂ ಸೇವಕರಿಗೆ ಅಗತ್ಯ ಔಷಧಿ ಮತ್ತು ತಪಾಸಣೆ ಪರಿಕರಗಳ ವಿತರಣೆಯನ್ನು ಡಾ. ಎ. ಅನಿಲ ಕುಮಾರ್ ನೆರವೇರಿಸಿದರು.

ತರಬೇತಿ ಕಾರ್ಯಾಗಾರದಲ್ಲಿ ಮೂರ್ತಿಕಬ್ಬಿನಾಲೆ, ರವಿ ದೇವರಬಾಳು, ರಾಜೇಶ್ ಕೊಟುಗುಳಿ, ಸುಧಾಕರ ಕಾರೆಬೈಲು, ಸಂಜು ಕಾರೆಬೈಲು, ಬೇಬಿ ಕತ್ತಲಕೊಡು, ಶಿವರಾಜ್ ನಾಡ, ಗಣೇಶ ಆಲೂರು, ಉಪಸ್ಥಿತಿ ಇದ್ದರು. ಶ್ರೀಧರ ನಾಡ ಕಾರ್ಯಕ್ರಮ ನಿರೂಪಿಸಿದರು, ಕವಿತಾ ಸ್ವಾಗತಿಸಿದರು, ಸುಧಾ ವಂದಿಸಿದರು.

ವರದಿ: ಶ್ರೀಧರ ನಾಡ

ವರದಿ: ವಾ. ಉಚ್ಚಿಲ್.

ಉಡುಪಿಯಲ್ಲಿ ಅಂಗನವಾಡಿ ನೌಕರರ ಪ್ರತಿಭಟನೆ:

ಕೊರೋನಾ ಮುಂಚೂಣಿ ಯೋಧರಾಗಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ವಿಮಾ ಪರಿಹಾರ ಹಣದಲ್ಲಿ ವ್ಯತ್ಯಾಸ ಮಾಡಲಾಗಿದೆ. ಇದನ್ನು ಕೂಡಲೇ ಸರಿಪಡಿಸಬೇಕು. ಅದೇ ರೀತಿ ನೌಕರರಿಗೆ ಸುರಕ್ಷತಾ ಸಾಧನಗಳು, ಅಪಾಯ ಭತ್ಯೆ ಮತ್ತು ಸೋಂಕಿಗೆ ಒಳಗಾದವರಿಗೆ ಮತ್ತು ಅವರ ಕುಟುಂಬಗಳಿಗೆ ಪರಿಹಾರ ಮತ್ತು ಚಿಕಿತ್ಸಾ ವೆಚ್ಚವನ್ನು ನೀಡಬೇಕೆಂದು ರಾಜ್ಯ ಅಂಗನವಾಡಿ ನೌಕರರ ಸಂಘದ ಉಡುಪಿ ಜಿಲ್ಲಾ ಕಾರ್ಯದರ್ಶಿ ಸುಶೀಲಾ ನಾಡ ಒತ್ತಾಯಿಸಿದ್ದಾರೆ.

ಅಂಗನವಾಡಿ ನೌಕರರ ಇತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ತಾ.12-07-2021 ರಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಹಮ್ಮಿಕೊಳ್ಳಲಾದ ಧರಣಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷೆ ಭಾರತಿ, ಕೋಶಾಧಿಕಾರಿ ಯಶೋಧಾ, ಉಡುಪಿ ತಾಲೂಕು ಅಧ್ಯಕ್ಷೆ ಎ.ಅಂಬಿಕಾ, ಕಾರ್ಯದರ್ಶಿ ಪ್ರಮೀಳಾ, ಬ್ರಹ್ಮಾವರ ತಾಲೂಕು ಕಾರ್ಯದರ್ಶಿ ಸವಿತಾ, ಕಾಪು ಅಧ್ಯಕ್ಷೆ ಲೀಲಾ, ಕಾರ್ಯದರ್ಶಿ ಜಯಂತಿ, ಕೋಶಾಧಿಕಾರಿ ಗೀತಾ ಪಾಂಗಳ, ಸಿಐಟಿಯು ಮುಖಂಡ ಕವಿರಾಜ್ ಮತ್ತಿತರರು ಉಪಸ್ಥಿತರಿದ್ದರು.

ಮಂಗಳೂರಿನಲ್ಲಿ ಕಟ್ಟಡ ಕಾರ್ಮಿಕರ ಧರಣಿ



ಕೊರೋನಾ ಲಾಕ್‌ಡೌನ್ ಸಂದರ್ಭದಲ್ಲಿ ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ಮಂಡಳಿಯಿಂದ ನೀಡುವ ಆಹಾರಧಾನ್ಯ ಕಿಟ್ ವಿತರಣೆಯಲ್ಲಿ ವ್ಯಾಪಕವಾದ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಮತ್ತು ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಅರ್ಹ ಕಾರ್ಮಿಕರಿಗೆ ನ್ಯಾಯ ಒದಗಿಸಿ ಕೊಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್(ಸಿಐಟಿಯು) ದ.ಕ.ಜಿಲ್ಲಾ ಸಮಿತಿಯ ವತಿಯಿಂದ ನಗರದ ಸಹಾಯಕ ಆಯುಕ್ತರ ಕಚೇರಿಯ ಮುಂದೆ 12 ಜುಲೈ 2021 ರಂದು ಧರಣಿ ನಡೆಸಲಾಯಿತು.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ 2020 ರಲ್ಲೂ ಕೋಟ್ಯಾಂತರ ಹಣ ಬಿಡುಗಡೆ ಮಾಡಿ ಯಾವುದೇ ಕಟ್ಟಡ ಕಾರ್ಮಿಕರಿಗೆ ಆಹಾರ ಧಾನ್ಯ ನೀಡದೆ ಬಿಜೆಪಿ ಮತ್ತು ಇತರ ಶಾಸಕರ ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರಲ್ಲದ ಜನರಿಗೆ ವಿತರಣೆ ಮಾಡಿ ವ್ಯಾಪಕ ಭ್ರಷ್ಟಾಚಾರ ಎಸಗಲಾಗಿದೆ. ಈ ಬಾರಿಯೂ ಆಹಾರ ಧಾನ್ಯ ವಿತರಣೆಯ ಹೆಸರಿನಲ್ಲಿ ದಂಧೆ ನಡೆಸಲಾಗಿದೆ. ಆಹಾರ ಕಿಟ್‌ನಲ್ಲಿ ಕಳಪೆ ಆಹಾರ ಸಾಮಾಗ್ರಿಗಳಲ್ಲದೆ ವ್ಯತ್ಯಾಸಭರಿತ ಆಹಾರಧಾನ್ಯಗಳನ್ನು ನೀಡಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ವಸಂತ ಆಚಾರಿ ಆರೋಪಿಸಿದರು.

ಧರಣಿಯಲ್ಲಿ ಸಿಐಟಿಯು ಮುಖಂಡರಾದ ಪಾಂಡುರಂಗ, ಅಶೋಕ್ ಶ್ರೀಯಾನ್, ಉಮೇಶ್ ಶಕ್ತಿನಗರ, ಮನೋಜ್ ಉರ್ವಸ್ಟೋರ್, ಜನಾರ್ಧನ ಕುತ್ತಾರ್, ರೋಹಿದಾಸ್ ತೊಕ್ಕೊಟ್ಟು, ದಯಾನಂದ ಕೊಪ್ಪಲಕಾಡು, ಮೋಹನ್ ಜಲ್ಲಿಗುಡ್ಡೆ, ರವಿಚಂದ್ರ ಕೊಂಚಾಡಿ, ದಿನೇಶ್ ಶೆಟ್ಟಿ ಜಪ್ಪಿನಮೊಗರು ಮತ್ತಿತರರು ಪಾಲ್ಗೊಂಡಿದ್ದರು.

ಜನವಿರೋಧಿ, ಫ್ಯಾಸಿಸ್ಟ್ ಮೋದಿ ಸರಕಾರದಿಂದ ಅಘೋಷಿತ ತುರ್ತು ಪರಿಸ್ಥಿತಿ

ಕೇಂದ್ರ ಸರಕಾರ ಜ್ಯಾರಿಗೊಳಿಸಿರುವ ರೈತ ವಿರೋಧಿ ಮೂರು ಕರಾಳ ಕೃಷಿ ಕಾಯಿದೆಗಳನ್ನು ವಿರೋಧಿಸಿ, ಕೃಷಿಯನ್ನು ಉಳಿಸಿ, ಪ್ರಜಾತಂತ್ರ ರಕ್ಷಿಸಿ, ಕನಿಷ್ಟ ಬೆಂಬಲ ಬೆಲೆ ಖಾತ್ರಿ ಕಾಯಿದೆ ಹಾಗೂ ಋಣ ಮುಕ್ತ ಕಾಯಿದೆ ಜ್ಯಾರಿಗೊಳಿಸಲು ಒತ್ತಾಯಿಸಿ ಭಾರತ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಸಂಯುಕ್ತ ಕರ್ನಾಟಕ ಕಿಸಾನ್ ಮೋರ್ಚಾ ಸಂಘಟನೆಗಳು ದೇಶವ್ಯಾಪಿ ರಾಜಭವನ ಚಲೋ ಹೋರಾಟದ ಕರೆಯ ಮೇರೆಗೆ ಉಡುಪಿ ಜಿಲ್ಲಾ ಕೇಂದ್ರ ಅಜ್ಜರಕಾಡು ಹುತಾತ್ಮ ಚೌಕದ ಬಳಿ ರೈತ, ಕೃಷಿಕೂಲಿ, ಕಾರ್ಮಿಕ, ದಲಿತ, ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ಯಶಸ್ವಿ ಧರಣಿ ಮುಷ್ಕರದ ಪ್ರತಿಭಟನೆ ಜರಗಿತು. ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಪ್ರತಿಭಟಯನ್ನು ಉದ್ದೇಶಿಸಿ ಮಾತನಾಡುತ್ತಾ ರೈತ ವಿರೋಧಿ ಕರಾಳ ಕೃಷಿ ಕಾಯಿದೆ ವಾಪಾಸ್ಸಾಗಲಿ, ಕನಿಷ್ಟ ಬೆಂಬಲ ಬೆಲೆ ಖಾತ್ರಿ ಕಾಯಿದೆ ಜ್ಯಾರಿಯಾಗಬೇಕು ಇತ್ಯಾದಿ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ದೆಹಲಿಯ ಗಡಿ ಭಾಗದಲ್ಲಿ ನಡೆಯುತ್ತಿರುವ ರೈತರ ಹೋರಾಟಕ್ಕೆ 200 ದಿನಗಳು ಸಂದಿದೆ. ಸುಮಾರು 550 ರೈತರ ಜೀವ ಬಲಿಯಾಗಿದೆ.42 ಸಂಘಟನೆಗಳು ಪಾಲ್ಗೊಂಡ ಈ ಸಮರ ಧೀರ ಹೋರಾಟ ಯಶಸ್ವಿಯಾಗಲಿ ಎಂದು ಹೇಳಿದರು. ಮುಂದುವರಿದು 26 ಜೂನ್ 1975 ಅಂದಿನ ಪ್ರಧಾನಿ ಇಂದಿರಾ ಗಾಂಧಿ ದೇಶದಲ್ಲಿ ಕರಾಳ ತುರ್ತು ಪರಿಸ್ಥಿತಿ ಹೇರಿ ಇಂದಿಗೆ 46 ವರ್ಷ ಕಳೆದಿದೆ. ಅಂತೆಯೆ ಇದೀಗ ಜನ ವಿರೋಧಿ ಫ್ಯಾಸಿಸ್ಟ್ ಮೋದಿ ಸರಕಾರದಿಂದ ಪರ್ಯಾಯ ಅಘೋಷಿತ ತುರ್ತು ಪರಿಸ್ಥಿತಿ ಹೇರುವ ವಿಪರ್ಯಾಸದ ಎಲ್ಲಾ ಲಕ್ಷಣಗಳು ಎದ್ದು ತೋರುತ್ತದೆ ಎಂದು ಅವರು ವಾಗ್ದಾಳಿ ನಡೆಸಿದರು.

ರೈತ, ಕಾರ್ಮಿಕ ಮುಖಂಡ ಕೆ. ಶಂಕರ್, ಸಿಐಟಿಯು ಜಿಲ್ಲಾ ಮುಖಂಡ ಎಚ್. ನರಸಿಂಹ, ದಲಿತ ಹಕ್ಕುಗಳ ಸಮಿತಿಯ ಸಂಜೀವ ಬಳ್ಕೂರು, ಅಖಿಲ ಭಾರತ ಕೃಷಿಕೂಲಿಕಾರರ ಸಂಘ(**AIAWU**)ದ ವೆಂಕಟೇಶ್ ಕೋಣಿ ಸಭೆಯಲ್ಲಿ ಮಾತನಾಡಿದರು. ವಿದ್ಯುತ್ ದರ, ತೈಲ ಬೆಲೆ ಹಾಗೂ ದಿನಬಳಕೆ ಅಹಾರ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟಬೇಕು ಎಂದು ಸರಕಾರವನ್ನು ಆಗ್ರಹಿಸಿದರು. ಮುಖಂಡರಾದ ಸುರೇಶ ಕಲ್ಲಾಗರ, ಮಹಾಬಲ ವಡೇರಹೋಬಳಿ, ಶಶಿಧರಗೊಲ್ಲ, ಕವಿರಾಜ್ ಎಸ್., ಉಮೇಶ ಕುಂದರ್, ಬಲ್ಕೀಸ್, ಸದಾಶಿವ ಬ್ರಹ್ಮಾವರ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬೆಲೆ ಏರಿಕೆ ವಿರುದ್ಧದ ವಾರಾಚರಣೆ ಸಮಾರೋಪ



ಬೆಲೆ ಏರಿಕೆ ವಿರುದ್ಧ ಸಿಪಿಐ(ಎಂ) ನೇತೃತ್ವದಲ್ಲಿ ಮಂಗಳೂರು ನಗರದಾದ್ಯಂತ ಜರಗಿದ ವಾರಾಚರಣೆಯ ಸಮಾರೋಪವು ಜುಲೈ 14 ರಂದು ಕಸ್ಬಾ ಬೆಂಗರೆಯಲ್ಲಿ ನಡೆದಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟು, ಜನರಲ್ಲಿ ದೇಶ ಪ್ರೇಮದ ಉನ್ಮಾದವನ್ನು ಸೃಷ್ಟಿಸಿ ದೇಶದ ಅಮೂಲ್ಯ ಸಂಪತ್ತನ್ನು ಕಾರ್ಪೊರೇಟ್ ಕಂಪೆನಿಗಳ ಕೈಗೊಪ್ಪಿಸಿದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ನಿಜಕ್ಕೂ ದೇಶದ್ರೋಹಿ ಎಂದು ಆರೋಪ ಮಾಡಿದರು.

ಸಿಪಿಎಂ ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಪಕ್ಷದ ಸ್ಥಳೀಯ ನಾಯಕರಾದ ನೌಶಾದ್, ಹನೀಫ್, ರಿಜ್ವಾನ್, ರಫೀಕ್, ನಾಸೀರ್ ಮಯ್ಯದ್ದಿ, ಯಹ್ಯಾ ಮುಂತಾದವರು ಭಾಗವಹಿಸಿದ್ದರು.

ಅಪಾಯಕ್ಕೆ ಆಹ್ವಾನ ನೀಡುತ್ತಿವೆ ರಸ್ತೆಗುಂಡಿಗಳು!, ಬಿಬಿಎಂಪಿ ಕಚೇರಿ ಮುಂದಿದೆ ದೊಡ್ಡದಾದ ರಸ್ತೆಗುಂಡಿ

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಅಪಾಯಕ್ಕೆ ಆಹ್ವಾನಿಸುತ್ತಿವೆ ರಸ್ತೆಗುಂಡಿಗಳು. ಬಿಬಿಎಂಪಿ ಕಚೇರಿ ಮುಂಭಾಗದಲ್ಲೇ ಇದೆ ದೊಡ್ಡದಾದ ರಸ್ತೆಗುಂಡಿ. ಹೊಂಡಗಳ ಮಧ್ಯೆ ರಸ್ತೆ ಹುಡಕಬೇಕಿದೆ ವಾಹನ ಸವಾರರರು? ಮಳೆಗಾಲದಲ್ಲಿ ಬೆಂಗಳೂರಿನ ಸವಾರರ ಕಥೆ ಕೇಳುವವರು ಯಾರು? ಬಿಬಿಎಂಪಿ ಏನು ಮಾಡುತ್ತಿದೆ ಎಂಬ ಪ್ರಶ್ನೆಗಳು ಹುಟ್ಟಿಕೊಂಡಿವೆ.

ಬೆಂಗಳೂರು ನಗರದ ರಸ್ತೆಗಳಲ್ಲಿ ಗುಂಡಿಗಳದ್ದೆ ಆರ್ಭಟ, ಹೊಂಡಗಳ ಮಧ್ಯೆ ರಸ್ತೆಯನ್ನು ಹುಡುಕಬೇಕು. ಮಳೆ ಬಂದರಂತೂ ಆಳದ ಗುಂಡಿಗಳು ನೀರು ಕುಡಿದು ಕುಳಿತು ಬಿಡುತ್ತವೆ. ಬೈಕ್ ಟೈಯರ್ ಇಳಿದ ನಂತರವೇ ಆ ಗುಂಡಿಯ ಅಸಲಿ ಮುಖ ಬಯಲಾಗುತ್ತದೆ. ಈ ವಿಚಾರದಲ್ಲಿ ಬಿಬಿಎಂಪಿಗೆ ಜನರು ಶಪಿಸುತ್ತಲೇ ಇದ್ದಾರೆ. ಆದರೆ ಬಿಬಿಎಂಪಿ ಇನ್ನೂ ಎಚ್ಚೆತ್ತುಕೊಂಡಿಲ್ಲ. ಮುಖ್ಯ ಕಛೇರಿ ಎದುರಿಗೆ ದೊಡ್ಡದಾದ ಗುಂಡಿ ಬಿದ್ದು ನಾಲ್ಕು ತಿಂಗಳಾಗಿದೆ. ಅದಕ್ಕೆ ಕಳೆದ ವಾರವಷ್ಟೆ ಜಲ್ಲಿ ಕಲ್ಲು ಹಾಕಿ ಹಾಗೆ ಬಿಡಲಾಗಿದೆ. ಅಲ್ಲಿನ ಜಲ್ಲಿಕಲ್ಲು ರಸ್ತೆಯ ತುಂಬೆಲ್ಲ ಹರಡಿ ವಾಹನಸವಾರರಿಗೆ ಕಿರಿಕಿರಿ ಮಾಡುತ್ತಿವೆ.

ಬಿಬಿಎಂಪಿ ಮುಖ್ಯ ಕಚೇರಿಯ ಬಳಿ ಇರುವ ಕಾರ್ಪರೇಷನ್ ವೃತ್ತ ಹೆಚ್ಚು ಟ್ರಾಫಿಕ್ ಇರುವ ಪ್ರದೇಶ್ ಈ ಗುಂಡಿಯ ಸುತ್ತ 15 ಮೀಟರ್‌ನಷ್ಟು ಬ್ಯಾರಿಕಾಡಿ ಹಾಕಿ ಮುಂಜಾಗೃತೆ ವಹಿಸಲಾಗಿದೆ ಎಂಬುದನ್ನು ಬಿಟ್ಟರೆ ಇದರಿಂದಾಗಬಹುದಾದ ಅಪಾಯಗಳ ಬಗ್ಗೆ ಇನ್ನು ಬಿಬಿಎಂಪಿ ತಲೆ ಕಡೆಸಿಕೊಂಡಂತೆ ಕಾಣುತ್ತಿಲ್ಲ. ಜಲ್ಲಿ ಕಲ್ಲು ಹರಡಿ ಗಾಡಿಗಳು ಸ್ಕಿಡ್ ಆದ್ರೆ ಯಾರೂ ಹೊಣೆ? ವಿಧಾನಸೌಧ ಮುಂಭಾಗ ಇದೇರೀತಿ ರಸ್ತೆಗುಂಡಿ ಇದ್ದಿದ್ದರೆ ಇಷ್ಟು ದಿನ ಸಮಯ ತೆಗೆದುಕೊಳ್ತಾ ಇದ್ರಾ ಅಂತಾ ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ. ಹೈಕೋರ್ಟ್ ಕೂಡ ಹಲವು ಬಾರಿ ಎಚ್ಚರಿಸುತ್ತಿದೆ. ಆದರೆ ಬಿಬಿಎಂಪಿ ಎಚ್ಚೆತ್ತುಕೊಂಡಿಲ್ಲ. ಅನೇಕ ಜನ ಮೃತರಾದ ವರದಿಗಳಿವೆ. ಇತ್ತೀಚೆಗೆ ರಸ್ತೆ ಗುಂಡಿ ತಪ್ಪಿಸಲು ಹೋಗಿ ಸಂಭವಿಸಿದ ಅಪಘಾತದಲ್ಲಿ ವೈದ್ಯ ವಿದ್ಯಾರ್ಥಿನಿಯೊಬ್ಬಳು ಸಾವಿಗೀಡಾಗಿರುವ ಘಟನೆ ಲಿಂಗರಾಜಪುರಂ ಮುಖ್ಯ ರಸ್ತೆಯಲ್ಲಿ ನಡೆದಿತ್ತು. ರಸ್ತೆ ಗುಂಡಿಗಳ ಸಮರ್ಪಕ ಭರ್ತಿಗೆ ಬಿಬಿಎಂಪಿ ಅಧಿಕಾರಿಗಳು ಕಾಳಜಿ ತೋರುತ್ತಿಲ್ಲ. ಈ ವಿಚಾರದಲ್ಲಿ ಅವರ ತಲೆಯಲ್ಲಿ ಸ್ಪಷ್ಟಕಾರ್ಯ ಯೋಜನೆಗಳೇ ಇಲ್ಲವಾಗಿದೆ. ಸಾರ್ವಜನಿಕ ಕೆಲಸಗಳನ್ನು ಮಾಡಿ ಮುಗಿಸುವ ಸ್ಪಷ್ಟತೆ ಹಾಗೂ ನಿಖರತೆ ಇಲ್ಲವಾಗಿದ್ದು, ಅವರಿಗೆ ನಾಚಿಕೆ ಆಗಬೇಕು ಎಂದು ಹೈಕೋರ್ಟ್ ಇತ್ತೀಚೆಗೆ ಚಾಟಿ ಬೀಸಿತ್ತು.

ಇನ್ನೊಂದು ಅಚ್ಚರಿಯ ವಿಷಯ ಏನೆಂದ್ರೆ, ರಸ್ತೆ ಗುಂಡಿಗಳ ದುರಸ್ತಿಗಾಗಿಯೇ ಬಿಬಿಎಂಪಿ 7. ಕೋಟಿ ರು. ವೆಚ್ಚದಲ್ಲಿ ಸ್ವಂತ ಡಾಂಬರು ಮಿಶ್ರಣ ಘಟಕ ನಿರ್ಮಿಸಿದೆ. ಇದು ಗಂಟೆಗೆ 120 ಟನ್ ನಂತೆ 10 ತಾಸಿಗೆ 50 ಟ್ರಕ್‌ಗಳಷ್ಟು ಹಾಟ್‌ಮಿಕ್ಸ್ ಸಿದ್ಧಪಡಿಸುವ ಸಾಮರ್ಥ್ಯ ಹೊಂದಿದ್ದರೂ, ದಿನಕ್ಕೆ 10 ಲೋಡ್‌ನಷ್ಟು ಮಾತ್ರ ಡಾಂಬರು ಪೂರೈಕೆಯಾಗುತ್ತಿದೆ. ಇಷ್ಟೊಂದು ವಿಳಂಭ ಯಾಕೆ? ಇಷ್ಟಾದರೂ ಸವಾರರ ಜೀವಕ್ಕೆ ➚

‘ಸುಮಲತಾ – ಕುಮಾರಸ್ವಾಮಿ’ ರಾಜಕೀಯ ಕೆಸರೆರಚಾಟದಲ್ಲಿ ಸ್ಫೋಟಗೊಂಡಿದ್ದು “ಅಕ್ರಮ ಗಣಿಗಾರಿಕೆ”

ಗುರುರಾಜ ದೇಸಾಯಿ

ಕಳೆದ ಕೆಲವು ದಿನಗಳಿಂದ ರಾಜ್ಯ ರಾಜಕೀಯದಲ್ಲಿ ಮೈಸೂರು ಜಿಲ್ಲೆಯ ಕೆಆರ್‌ಎಸ್ ಅಣೆಕಟ್ಟೆಯದ್ದೆ ಸುದ್ದಿ. ಅಲ್ಲಿ ಅಕ್ರಮ ಗಣಿಗಾರಿಕೆ ನಡೀತಾ ಇದೆ ಎಂದ ಸುಮಲತಾರ ಹೇಳಿಕೆ ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿದೆ. ಮಂಡ್ಯದ ಗಣಿಗಾರಿಕೆಯ ಒಳ ಹೊಕ್ಕಿ ನೋಡಿದಾಗ ಸಿಕ್ಕ ಮಾಹಿತಿಗಳು ಹುಬ್ಬೇರಿಸುತ್ತಿವೆ. ಈ ಗಣಿಗಾರಿಕೆಯ ಹಿಂದೆ ರಾಜಕರಣಿಗಳ ಹಿಡಿತವೇ ಹೆಚ್ಚಿದೆಯಾ? ಗಣಿಗಾರಿಕೆಯಿಂದ ಕೆಎಸ್‌ಆರ್ ಧಕ್ಕೆ ಇದೆಯಾ? ‘ಸುಮಲತಾ – ಕುಮಾರಸ್ವಾಮಿ’ ರಾಜಕೀಯ ಕೆಸರೆರಚಾಟದಲ್ಲಿ ಸ್ಫೋಟಗೊಂಡಿದ್ದು “ಅಕ್ರಮ ಗಣಿಗಾರಿಕೆ”ಯ ಬುತ್ತಿ ಬಿಚ್ಚಿದಾಗ ಗೊತ್ತಾದ ಸತ್ಯಗಳು ಹುಬ್ಬೇರಿಸುವಂತೆ ಮಾಡಿವೆ.

ಕಳೆದ ಕೆಲ ದಿನಗಳಿಂದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಹಾಗೂ ಸಂಸದೆ ಸುಮಲತಾರವರು ಪರಸ್ಪರ ರಾಜಕೀಯ ಕೆಸರೆರಚಾಟ ನಡೆಸಿದ್ದು ನಿಮಗೆಲ್ಲ ಗೊತ್ತಿದೆ. ನಾನು ಅವರು ರಾಜಕೀಯ ಕೆಸರೆರಚಾಟದ ಬಗ್ಗೆ ಮಾತಾಡ್ತಾ ಇಲ್ಲ. ಆದರೆ ಅದರಿಂದ ಸ್ಫೋಟಗೊಂಡ ಗಣಿಗಾರಿಕೆಯ ಬಗ್ಗೆ ಅನೇಕ ಕಥಾನಕಗಳಿವೆ. ಸತ್ಯದ ಬುತ್ತಿ ಈಗ ತಾನೆಗೆ ತೆರದುಕೊಂಡಿದೆ. ಕೆಆರ್‌ಎಸ್ ಜಲಾಶಯದ ಆಸುಪಾಸಿನಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯಿಂದ, ಸುತ್ತಮುತ್ತಲಿನ ಜನ ಬೆಚ್ಚಿ ಬಿದ್ದಿದ್ದಾರೆ.

ಮಂಡ್ಯದಲ್ಲಿ ಅಕ್ರಮ ಗಣಿಗಾರಿಕೆ ಆರಂಭವಾಗಿದ್ದು ಇವತ್ತು ನಿನ್ನೆಯ ವಿಚಾರ ಅಲ್ಲ, ಅದಕ್ಕೆ 50 ವರ್ಷದ ಇತಿಹಾಸ ಇದೆ. ಶ್ರೀರಂಗಪಟ್ಟಣ ತಾಲ್ಲೂಕಿನ ಹಂಗರಹಳ್ಳಿ, ಚೆನ್ನಕೆರೆ, ಕೋಡಿಶೆಟ್ಟಿಪುರ, ಟಿಎಂ ಹೊಸರು, ಸೇರಿದಂತೆ ಸುತ್ತಮುತ್ತಲ ಹಳ್ಳಿಗಳಲ್ಲಿ ಹಿಂದಿನಿಂದಲೂ ಗಣಿಗಾರಿಕೆ ನಡೆಯುತ್ತಿದೆ. ಇತ್ತೀಚೆಗೆ ಮೆಗ್ಗರ್ ಸ್ಫೋಟದಿಂದ ಗಣಿಗಾರಿಕೆಗೆ ಬಲ ಬಂದಿದೆ. ಈ ಹಿಂದೆ ಕೂಕುಳಿಯಿಂದ ಮೂರ್ನಾಲ್ಕು ಅಡಿ ಸ್ಫೋಟಕ ಸಿಡಿಸಿ ಜಲ್ಲಿಕಲ್ಲು ತಯಾರು ಮಾಡುತ್ತಿದ್ದರು. ಆಗ ಯಾವುದೇ ಗಂಬೀರ ಸಮಸ್ಯೆ ಆಗುತ್ತಿರಲಿಲ್ಲ. 2010 ರ ನಂತರ ಬ್ಲಾಸ್ಟರ್ ಮೂಲಕ 30 ರಿಂದ 40 ಅಡಿ ಆಳದ ವರೆಗೆ ಸ್ಫೋಟ ಮಾಡುತ್ತಿರುವುದರಿಂದ ಅಪಾಯಗಳು ಆರಂಭವಾಗಿವೆ ಎನ್ನುತ್ತಾರೆ ಸುತ್ತಮುತ್ತಲಿನ ಗ್ರಾಮಸ್ಥರು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪ್ರಕಾರ ಪಾಂಡವಪುರ ಹಾಗೂ ಶ್ರೀರಂಗಪಟ್ಟಣದಲ್ಲಿ ಅಕ್ರಮಗಣಿಗಾರಿಕೆ ನಡೆಯುತ್ತಿದೆ. ಸಾವಿರಕ್ಕೂ ಹೆಚ್ಚು ಗಣಿಗಳಿವೆ ಎಂಬ ಮಾಹಿತಿಯೂ ಇದೆ. ಸರಕಾರಕ್ಕೆ ಕೋಟ್ಯಾಂತರ ರೂ ಆದಾಯ ಬರುತ್ತಿರುವ ಕಾರಣ ಅವರು ಈ ಅಕ್ರಮವನ್ನು ತಡೆಯದೆ ಸುಮ್ಮನಾಗುತ್ತಿದ್ದಾರೆ. ಹಾಗಾಗಿ ಅಕ್ರಮ ಗಣಿಗಾರಿಕೆಯಲ್ಲಿ ರಾಜಕಾರಣಿಗಳ ಹಿಡಿತ ಹೆಚ್ಚಾಗುತ್ತಲೆ ಇದೆ. ಈ ಅಕ್ರಮ ಗಣಿಗಾರಿಕೆಯಿಂದ ಕೆಆರ್‌ಎಸ್ ಗೆ ಧಕ್ಕೆಯಾಗಲಿದೆ ಎಂಬುದು ತಜ್ಞರ ಅಬಿಪ್ರಾಯವಾಗಿದೆ.

ಸ್ಫೋಟಕ ಬಳಕೆಯಿಂದ ಕನ್ನಂಬಾಡಿ ಕಟ್ಟೆಗೆ ಅಪಾಯ ಇರುವ ಬಗ್ಗೆ ರಾಜ್ಯ ನೈಸರ್ಗಿಕ ವಿಕೋಪಗಳ ನಿರ್ವಹಣಾ ಸಂಸ್ಥೆಯ ವಿಜ್ಞಾನಿಗಳು ವರದಿ ನೀಡಿರುವ ಉಲ್ಲೇಖಗಳಿವೆ. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಬೇಬಿ ಬೆಟ್ಟ, ಕೆ. ಆರ್. ಪೇಟೆ, ಶ್ರೀರಂಗಪಟ್ಟಣ, ಕೆ. ಆರ್. ನಗರದ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದ್ದು, ನಿಷೇಧಿತ ಸ್ಫೋಟಕಗಳನ್ನು ಬಳಕೆ ಮಾಡಿ ಗಣಿಗಾರಿಕೆ ಮಾಡುತ್ತಿರುವುದರಿಂದ ಜಲಾಶಯಕ್ಕೆ ಅಪಾಯವಿದೆ ಎಂಬುದನ್ನು ವಿವರಿಸಿದ್ದರು. ಕೆಆರ್‌ಎಸ್ ಜಲಾಶಯದ ಆಸುಪಾಸಿನಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ಉಂಟಾದ ನಷ್ಟದ ಅಂದಾಜು ನಡೆಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ನಡೆಸಲು ಉದ್ದೇಶಿಸಿದ್ದ ‘ಡ್ರೋಣ್ ಸರ್ವೆ’ ನನೆಗುದಿಗೆ ಬಿದ್ದಿದೆ.

ಅಕ್ರಮ ಗಣಿಗಾರಿಕೆಯಿಂದಾಗಿ ಬೇಬಿಬೆಟ್ಟ ದಿನೇದಿನೇ ಕರಗುತ್ತಿದೆ. ಆದರೆ, ಗಣಿ ಮಾಲೀಕರು ಉಳಿಸಿಕೊಂಡಿರುವ ರಾಜಧನ ಹಾಗೂ ದಂಡದ ಬಾಕಿ ಮೊತ್ತ ಬೆಟ್ಟಕ್ಕಿಂತ ಎತ್ತರಕ್ಕೆ ಏರತೊಡಗಿದೆ. ಬೆಟ್ಟದಲ್ಲಿ ಗಣಿ ಚಟುವಟಿಕೆ ನಡೆಸಿರುವ 30 ಕಂಪನಿಗಳು 2017ರಿಂದ ಇಲ್ಲಿವರೆಗೆ ಪರಿಸರ ಅನುಮೋದನೆ ಪಡೆಯದೆ ಲಕ್ಷಾಂತರ ಮೆಟ್ರಿಕ್ ಟನ್ ಕಲ್ಲು ಹೊರತೆಗೆದಿವೆ. ಪರಿಸರ ಅನುಮೋದನಾ ಸಮಿತಿ ನಿಗದಿಗೊಳಿಸಿದ ಮಿತಿಯಂತೆ ವರ್ಷಕ್ಕೆ ಗರಿಷ್ಠ 25 ಸಾವಿರ ಮೆಟ್ರಿಕ್ ಟನ್ ಗಣಿಗಾರಿಕೆ ನಡೆಸಬಹುದು. ಬೇಬಿಬೆಟ್ಟದ ವ್ಯಾಪ್ತಿಯಲ್ಲಿ ಅಕ್ರಮವಾಗಿ ಚಟುವಟಿಕೆ ನಡೆಸುತ್ತಿದ್ದ 35ಕ್ಕೂ ಹೆಚ್ಚು ಕಂಪನಿಗಳಿಗೆ ವರ್ಷದಿಂದೀಚೆಗೆ ದಂಡ ವಿಧಿಸಲಾಗಿದೆ ಎಂದು ಕಾರ್ಮಿಕ ಮುಖಂಡ ಶಿವಕುಮಾರ್ ಆತಂಕ ವ್ಯಕ್ತಪಡಿಸಿದ್ದಾರೆ.

ಹಾಗಾದ್ರೆ ಅಕ್ರಮಗಣಿಗಾರಿಕೆ ನಡೆಯುತ್ತಿದೆ ಎಂದಾದ ಮೇಲೆ ಅಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿರಲೇಬೇಕು ಈ ಅಂಶವನ್ನು ಬೆನ್ನು ಹತ್ತಿದಾಗ ಸಿಕ್ಕ ಮಾಹಿತಿಗಳು ಅಚ್ಚರಿ ಮೂಡಿಸುತ್ತವೆ. ಸರಕಾರಿ ಜಮೀನಿನಲ್ಲಿ 90, ಪಟ್ಟಾ ಜಮೀನಿನಲ್ಲಿ 16 ಸೇರಿದಂತೆ



ಒಟ್ಟು 106 ಕಲ್ಲಕ್ವಾರಿಗಳಿಗೆ ಗಣಿಭೂವಿಜ್ಞಾನ ಇಲಾಖೆಯ ಪ್ರಕಾರ ಅನುಮತಿಯನ್ನು ನೀಡಲಾಗಿದೆ. ಅದರಲ್ಲಿ ನಾಲ್ಕು ಕ್ವಾರಿಗಳು ಗ್ರ್ಯಾನೈಟ್ ಗೆ ಸೇರಿವೆ. 106 ಕಲ್ಲು ಕ್ವಾರಿಯಲ್ಲಿ ಬ್ಲಾಸ್ಟಿಂಗ್ ಮಾಡಲು ಅನುಮತಿ ಇರುವ ಕಲ್ಲು ಕ್ವಾರಿಗಳ ಸಂಖ್ಯೆ 46. ಉಳಿದ 60 ಕ್ವಾರಿಗಳು ಕೂಕುಳಿ ಮೂಲಕ ಕ್ವಾರಿಯನ್ನು ನಡೆಸಬೇಕು ಎಂದಿದೆ.

ಆದರೆ ಇವು ನಿಯಮಗಳನ್ನು ಉಲ್ಲಂಗಿಸಿ ಬ್ಲಾಸ್ಟಿಂಗ್ ವ್ಯವಸ್ಥೆ ನಡೆಸುತ್ತಿವೆ. ಸರಕಾರಕ್ಕೆ ಹಾಗೂ ಜಿಲ್ಲಾಡಳಿತಕ್ಕೆ ಇದೆಲ್ಲ ಗೊತ್ತಿದ್ದರೂ ಮೌನವಹಿಸಿ ಕುಳಿತಿದೆ. ಅಕ್ರಮ ಗಣಿಗಾರಿಕೆ ನಿಲ್ಲಬೇಕಾದರೆ ರಾಷ್ಟ್ರೀಕರಣವೇ ಇದಕ್ಕಿರುವ ದಾರಿ ಎಂದು ಕೃಷಿಕೂಲಿಕಾರ ಸಂಘಟನೆಯ ಮುಖಂಡ ಸುರೇಂದ್ರ ನರಹಳ್ಳಿ ಆಗ್ರಹಿಸಿದ್ದಾರೆ.

ಇನ್ನೊಂದು ಮಾಹಿತಿಯ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ನಡೆಸಲಾಗುತ್ತಿರುವ ಅಕ್ರಮ ಗಣಿಗಾರಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಅತ್ಯಾಧುನಿಕ ಯಂತ್ರ, ಸ್ಫೋಟಕಗಳನ್ನ ಬಳಸಿ ನಿಗದಿಪಡಿಸಿದಕ್ಕಿಂತ 100 ಪಟ್ಟು ಹೆಚ್ಚು ಕಲ್ಲು ತೆಗೆದಿರುವುದು ಹಾಗೂ ಅದಕ್ಕೆ ನೂರಾರು ಕೋಟಿ ರೂಪಾಯಿ ದಂಡ ವಿಧಿಸಿರುವ ವಿಚಾರ ವರದಿಯಾಗಿದೆ. ಜಿಲ್ಲೆಯಲ್ಲಿ ಅನಧಿಕೃತವಾಗಿ ನಡೆಯುತ್ತಿದ್ದ ಗಣಿಗಾರಿಕೆಗಳಿಗೆ ಒಟ್ಟು 320 ಕೋಟಿ ರೂಪಾಯಿ ದಂಡ ವಿಧಿಸಲಾಗಿದ್ದು, ಈ ಪೈಕಿ ಬೇಬಿ ಬೆಟ್ಟ ವ್ಯಾಪ್ತಿಯಲ್ಲೇ ಸುಮಾರು 280 ಕೋಟಿ ರೂಪಾಯಿ ದಂಡ ಹಾಕಿರುವುದು ತಿಳಿದುಬಂದಿದೆ.

"ಗಣಿ ಇಲಾಖೆಯ ಮೂಲ ರಾಜಧನ ಮೆಟ್ರಿಕ್ ಟನ್‌ಗೆ 60 ರೂಪಾಯಿಯಂತೆ ಇದ್ದು, ಅಕ್ರಮವಾಗಿ ತೆಗೆಯಲಾದ ಮೆಟ್ರಿಕ್ ಟನ್ ಕಲ್ಲಿಗೆ 300 ರೂಪಾಯಿ ದಂಡ ವಿಧಿಸಲಾಗಿದೆ. ಅಲ್ಲಿಗೆ ರಾಜಧನ ಹಾಗೂ ದಂಡ ಇವೆರಡನ್ನೂ ಸೇರಿಸಿದ ಮೆಟ್ರಿಕ್ ಟನ್ ಕಲ್ಲಿಗೆ 360 ರೂಪಾಯಿಯಂತೆ ದಂಡ ವಿಧಿಸಲಾಗಿದ್ದು, ಲಕ್ಷಾಂತರ ಟನ್‌ಗೆ 320 ಕೋಟಿ ರೂಪಾಯಿ ದಂಡ ವಿಧಿಸಲಾಗಿದೆ. ಅದರಲ್ಲಿ ಬೇಬಿ ಬೆಟ್ಟವೊಂದರಲ್ಲೇ 280 ಕೋಟಿ ರೂಪಾಯಿ ದಂಡ ಹಾಕಲಾಗಿದೆ. ಆದರೆ, ಆ ಪೈಕಿ ಕೇವಲ 1.60 ಕೋಟಿ ರೂಪಾಯಿ ದಂಡ ವಸೂಲಿಯಾಗಿದೆ ಎಂದು ವಿಧಾನಸೌಧದ ದಾಖಲೆಗಳು ಹೇಳುತ್ತಿವೆ."

ಇನ್ನೂ ಅಕ್ರಮಗಣಿಗಾರಿಕೆ ವಿಚಾರವಾಗಿ ಹಿಂದೆ ಸರಿಯುವ ಮಾತೇ ಇಲ್ಲ. ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ್ ನಿರಾಣಿ ಭೇಟಿ ಮಾಡಿ ಮಾಹಿತಿಯನ್ನು ನೀಡಿದ್ದೇನೆ, ಲೋಕಸಭೆಯಲ್ಲಿ ಈ ಕುರಿತಾಗಿ ಚರ್ಚಿಸುತ್ತೇನೆ ಎಂದು ಸಂಸದೆ ಸಮುಲತಾರವರು ಹೇಳಿಕೆ ನೀಡುತ್ತಿದ್ದಾರೆ. ಒಂದು ರಾಜಕೀಯ ಕೆಸರೆರಚಾಟ ಅಂತಿಮವಾಗಿ ಅಕ್ರಮ ಗಣಿಗಾರಿಕೆಯನ್ನು ಸ್ಫೋಟಗೊಳಿಸಿದ್ದು ಸುಳ್ಳಂತು ಅಲ್ಲ, ಸರಕಾರ ಇನ್ನದಾರೂ ಎಚ್ಚೆತ್ತು ಕೆ.ಆರ್.ಎಸ್. ಗೆ ಹಾಗೂ ಸುತ್ತ ಮುತ್ತಲಿನ ಸಾರ್ವಜನಿಕರಿಗೆ ಆಗುವ ಅಪಾಯಗಳನ್ನು ತಪ್ಪಿಸಲು ಮುಂದಾಗಬೇಕಿದೆ.

ಕಂಟಕವಾಗಿರುವ ಗುಂಡಿಗಳನ್ನು ಮುಚ್ಚಲು ಮನಸ್ಸು ಮಾಡುತ್ತಿಲ್ಲ. ಅವೈಜ್ಞಾನಿಕ ಕಾಮಗಾರಿ ಪರಿಣಾಮ ದುರಸ್ತಿ ಮಾಡಿದಷ್ಟೇ ಬೇಗ ರಸ್ತೆಗಳ ಡಾಂಬರು ಕಿತ್ತು ಬರುತ್ತಿದ್ದು, ರಸ್ತೆಗಳೆಲ್ಲ ಗುಂಡಿಮಯವಾಗಿದೆ. ಸಮರ್ಪಕವಾಗಿ ಗುಂಡಿಗಳನ್ನು ಮುಚ್ಚದೇ ನಿರ್ಲಕ್ಷ್ಯವಹಿಸುವ ಅಧಿಕಾರಿಗಳಿಗೆ ದಂಡ ವಿಧಿಸುವ ಮತ್ತು ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ನಿಯಮವನ್ನು ಮಾತ್ರ ಎಂಜಿನಿಯರ್‌ಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂಬ ಆರೋಪಗಳು ಕೂಡ ಕೇಳಿ ಬರುತ್ತಿವೆ.

ಬಿಬಿಎಂಪಿ ವ್ಯಾಪ್ತಿಯ 401 ಕಿ.ಮೀ. ಉದ್ದದ ರಸ್ತೆಯಲ್ಲಿ ಗುಂಡಿಗಳಿವೆ ಎಂದು ಇತ್ತೀಚೆಗೆ ಹೈಕೋರ್ಟ್ ಗೆ ಬಿಬಿಎಂಪಿ ಮಾಹಿತಿ ನೀಡಿತ್ತು. ಆದರೆ ಬಿಬಿಎಂಪಿ ಈವರೆಗೂ ಎಷ್ಟು ಗುಂಡಿ ಮುಚ್ಚಲಾಗಿದೆ ಎಂಬ ಅಂಕಿ ಅಂಶಗಳನ್ನು ಬಹಿರಂಗಗೊಳಿಸುತ್ತಿಲ್ಲ. ಅಧಿಕಾರಿಗಳನ್ನು ವಿಚಾರಿಸಿದರೆ ಬಿಬಿಎಂಪಿ ವೆಬ್‌ಸೈಟ್‌ನಲ್ಲಿದೆ ಎಂದು ಹೇಳಿ ಕೈತೆಣಟಿಜಜಜಿ ುಟಿಜಜಳೆದುಕೆಣಟಿಜಜಜಿಟಿಜಜಳ್ಳುತ್ತಾರೆ. ಆದರೆ ವೆಬ್‌ಸೈಟ್‌ನಲ್ಲಿ ಯಾವುದೋ ಹಳೆ ವರ್ಷಗಳ ಅಂಕಿ ಅಂಶ ಹಾಕಿದ್ದು, ಇದೇ ವರ್ಷದ ಮಾಹಿತಿ ಎಂದು ಬಿಂಬಿಸಿದೆ. ಜತೆಗೆ ಕೆಲವು ವಲಯಗಳ ರಸ್ತೆಗಳಲ್ಲಿ ಗುಂಡಿಗಳೇ ಇಲ್ಲ ಎಂದು ವೆಬ್‌ಸೈಟ್‌ನಲ್ಲಿ ಮಾಹಿತಿ ಹಾಕಲಾಗಿದೆ.

ಒಂದು ಅಂದಾಜಿನ ಪ್ರಕಾರ 2021 ರ ಏಪ್ರಿಲ್ ವರೆಗೆ ಬೆಂಗಳೂರಿನಲ್ಲಿ 7272 ರಸ್ತೆಗುಂಡಿಗಳಿವೆ, ಅದರಲ್ಲಿ 4034 ಗುಂಡಿಗಳನ್ನು ಮುಚ್ಚಲಾಗಿದೆ. ಆದರೆ ನಗರದಲ್ಲಿರುವ ಎಲ್ಲ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಕೊಚ್ಚಿಕೊಳ್ಳುತ್ತಿರುವ ಬಿಬಿಎಂಪಿ ವಿರುದ್ಧ ಕಳಪೆ ಕಾಮಗಾರಿಯ ಆರೋಪಗಳು ಕೇಳುತ್ತಿವೆ. ಈ ಸಂಬಂಧ ರಸ್ತೆ ಗುಂಡಿಗಳು ಹೆಚ್ಚಿವೆ ಎಂಬ ದೂರುಗಳು ಬಂದಿವೆ. ಅಲ್ಲದೆ ಬಿಬಿಎಂಪಿ ರಸ್ತೆಗುಂಡಿಗಳನ್ನು ಮುಚ್ಚಿದ ಬಳಿಕ, ಕಾಮಗಾರಿ ಗುಣಮಟ್ಟದ್ದಾಗಿದೆಯೇ ಎಂದು ಪರಿಶೀಲನೆ ಕೂಡ ನಡೆಸುತ್ತಿಲ್ಲ. ಹೀಗಾಗಿ ರಸ್ತೆಗುಂಡಿಗಳು ಮತ್ತೆ ಯಥಾಸ್ಥಿತಿಗೆ ತಲುಪಿವೆ. ಇದರಿಂದಾಗಿ ದೂಳು, ಗುಂಡಿಗಳಿಂದಾಗಿ ಸಾರ್ವಜನಿಕರು ಕಿರಿಕಿರಿ ಅನುಭವಿಸುವಂತಾಗಿದೆ.



ಬಿಬಿಎಂಪಿಯ ವ್ಯಾಪ್ತಿಯಲ್ಲಿ 470 ಪ್ರಮುಖ ರಸ್ತೆಗಳಿದ್ದು, 1344 ಕಿ.ಮೀ ಉದ್ದವಿದೆ. ಇದರಲ್ಲಿ 401ಕಿ.ಮೀ ಉದ್ದದ 108 ರಸ್ತೆಗಳು ರಸ್ತೆಗುಂಡಿಗಳಿಂದ ಕೂಡಿವೆ. 106.68 ಕಿ.ಮೀ ರಸ್ತೆಯಲ್ಲಿ ಬೆಸ್ಕಾಂ, ಗೇಲ್, ಜಲಮಂಡಳಿ ಹಾಗೂ ಕೆಪಿಟಿಸಿಎಲ್ ಸಂಸ್ಥೆಗಳು ವಿವಿಧ ಅಭಿವೃದ್ಧಿ ಕಾರಣಕ್ಕಾಗಿ ರಸ್ತೆಗಳನ್ನು ಅಗೆದಿವೆ. ಇನ್ನು 943.74 ಕಿ.ಮೀ ರಸ್ತೆಗಳು ಗುಂಡಿ ಮುಕ್ತವಾಗಿವೆ ಎಂಬ ಮಾಹಿತಿ ಲಭ್ಯವಾಗಿದೆ. ಕೆಲವೆಡೆಗಳಲ್ಲಿ ಇದು ನನಗೆ ಸಂಬಂಧಿಸದ ವಿಚಾರ ಅಂತಾ ಬಿಬಿಎಂಪಿ ಮೌನ ವಹಿಸುತ್ತಿದೆ, ಇದು ಸರಿಯಾದ ವಿಧಾನ ಅಲ್ಲ. ಬಿಬಿಎಂಪಿ ತನ್ನ ಜವಬ್ದಾರಿಯನ್ನು ಅರಿಯಬೇಕಿದೆ. ಕಳಪೆ ಕಾಮಗಾರಿಗಳಾಗದಂತೆ ಎಚ್ಚರಿಕೆ ವಹಿಸಬೇಕಿದೆ.

ಪ್ಯಾನಾಪ್ಟಿಕನ್ ಎಂಬ ಡಿಜಿಟಲ್ ಬಂಡವಾಳಶಾಹಿ ವ್ಯವಸ್ಥೆ



ಪ್ರೊ.ವಿ.ಎನ್ ಲಕ್ಷ್ಮೀನಾರಾಯಣ



1984 ಎಂಬ ಕಾದಂಬರಿಯಲ್ಲಿ ಜಾರ್ಜ್ ಆರ್ವೆಲ್ ನ ತೀಕ್ಷ್ಣ ವ್ಯಂಗ್ಯ, ಕಟಕಿ ಮತ್ತು ವಿಡಂಬನೆಗೆ ಗುರಿಯಾಗಿರುವ ಆ 'ಬಿಗ್ ಬ್ರದರ್' ಪಾತ್ರಕ್ಕೆ ಆಗಿನ ಸೋವಿಯತ್ ರಷ್ಯಾದ ಆಡಳಿತಗಾರ ಸ್ಟಾಲಿನ್ ಮಾದರಿ ಎಂದು ಈ ಕಾದಂಬರಿಯನ್ನು ಮೆಚ್ಚುವ ಬಹುಮಂದಿ 'ಪ್ರಜಾತಂತ್ರ-ಪ್ರಿಯರು' ನಂಬುತ್ತಾರೆ. 'ಶೀತಲ ಸಮರೋತ್ತರ' ಆಧುನಿಕ ಜಗತ್ತಿನ ದೊಡ್ಡಣ್ಣ, 'ಬಿಗ್ ಬ್ರದರ್' ಆರ್ವೆಲ್ ಹೇಳುವಂಥಾ ಸರ್ವಾಧಿಕಾರಿ ವ್ಯಕ್ತಿ ರೂಪದ ರಾಷ್ಟ್ರಾಧ್ಯಕ್ಷನೋ, ಪ್ರಧಾನಿಯೋ ಆಗಿರುವ ಬದಲು ಅಮೆರಿಕಾದ ಬಂಡವಾಳಶಾಹೀ ಆಳುವ ವರ್ಗವೇ ಆಗಿದೆ. ಪ್ಯಾನಾಪ್ಟಿಕನ್ ಹೇಗೆ ಒಂದು ಕಟ್ಟಡ ವಿನ್ಯಾಸವಾಗದೆ ಒಂದು ನಿಯಂತ್ರಕ ಸಮಾಜದ ಪರಿಕಲ್ಪನೆಯಾಗಿದೆಯೋ ಹಾಗೆ, ಎಲ್ಲರನ್ನೂ, ಎಲ್ಲವನ್ನೂ ಗಮನಿಸಿ ನಿರ್ದೇಶಿಸಿ ನಿಯಂತ್ರಿಸಬಯಸುವ ಸರ್ವಾಧಿಕಾರಿ – ಬಿಗ್ ಬ್ರದರ್ ಒಬ್ಬ ವ್ಯಕ್ತಿಯಾಗಿರದೆ, ಒಂದು ಕರಾಳ ಶೋಷಕ ವ್ಯವಸ್ಥೆಯಾಗಿದೆ.

1984 ಎಂಬ ಕಾದಂಬರಿಯನ್ನು ಜಾರ್ಜ್ ಆರ್ವೆಲ್ ಬರೆದದ್ದು 1948–49 ರಲ್ಲಿ. ಕತೆ ನಡೆಯುವ ಕಾಲ ಆಗ ಭವಿಷ್ಯದ ಒಂದು ಕಾಲಘಟ್ಟವಾಗಿದ್ದ 1984. ಅದೇ ಈ ಕಾದಂಬರಿಯ ಶೀರ್ಷಿಕೆ. ತನ್ನ ದೇಶದ ಜನರನ್ನು ಪರದೆಯ ಮೇಲೆ ಸದಾ ಗಮನಿಸಬಲ್ಲ ತಾಂತ್ರಿಕ ನಿಯಂತ್ರಣವನ್ನು ಹೊಂದಿದ್ದ ಸರ್ವಾಧಿಕಾರಿಯೊಬ್ಬನ ಕಟು ವಿಡಂಬನೆ ಆ ಕಾದಂಬರಿ. 'ಪ್ರಜಾಪ್ರಭುತ್ವ' ಎಂಬ ಪದದ ಅರ್ಥವನ್ನೇ ತಿಳಿಯದೆ, ಸಮಾಜವಾದವನ್ನು ಕುರುಡಾಗಿ ದ್ವೇಷಿಸುವ ಬಹುಮಂದಿಗೆ ತುಂಬಾ ಪ್ರಿಯವಾದ ಕಾದಂಬರಿ ಇದು. ಕಾದಂಬರಿಯಲ್ಲಿ ಆ ಸರ್ವವೀಕ್ಷಕ ಅಗೋಚರ ಸರ್ವಾಧಿಕಾರಿಯನ್ನು 'ಬಿಗ್ ಬ್ರದರ್' ಎಂದು ಹೆಸರಿಸಲಾಗಿದೆ. ಆರ್ವೆಲ್ಲ ನ ತೀಕ್ಷ್ಣ ವ್ಯಂಗ್ಯ, ಕಟಕಿ ಮತ್ತು ವಿಡಂಬನೆಗೆ ಗುರಿಯಾಗಿರುವ ಆ 'ಬಿಗ್ ಬ್ರದರ್' ಪಾತ್ರಕ್ಕೆ ಆಗಿನ ಸೋವಿಯತ್ ರಷ್ಯಾದ ಆಡಳಿತಗಾರ ಸ್ಟಾಲಿನ್ ಮಾದರಿ ಎಂದು ಈ ಕಾದಂಬರಿಯನ್ನು ಮೆಚ್ಚುವ ಬಹುಮಂದಿ 'ಪ್ರಜಾತಂತ್ರ–ಪ್ರಿಯರು' ನಂಬುತ್ತಾರೆ.

ಕಮ್ಯೂನಿಸ್ಟ್ ಸರ್ಕಾರ ವಿಶ್ವದ ಯಾವುದೇ ಭಾಗದಲ್ಲಿದ್ದರೂ ಅದು ಪ್ರಜಾತಾಂತ್ರಿಕವಾಗೇ ಅಧಿಕಾರಕ್ಕೆ ಬಂದಿದ್ದರೂ ಅದನ್ನು ಹೇಗಾದರೂ ಸರಿ, ಅಂದರೆ ಅಧಿಕಾರಸ್ಥರ ಕೊಲೆ, ರಾಜಕೀಯ ಪಿತೂರಿ, ಆರ್ಥಿಕ ನಿರ್ಬಂಧ, ಮಿಲಿಟರಿ ಕ್ರಾಂತಿ ಅಥವಾ ಇವೆಲ್ಲವುಗಳ ಸಂಯುಕ್ತ ವಿಧಾನದಿಂದ ಬೀಳಿಸಿ ಅಲ್ಲಿ ತನ್ನ ನಿರ್ವಚನೆಯ ಪ್ರಜಾತಾಂತ್ರಿಕ, ಅಂದರೆ ಆ ದೇಶದ ಸಂಪನ್ಮೂಲಗಳನ್ನು ಕೊಳ್ಳೆಹೊಡೆಯಲು ಅನುವು ಮಾಡಿಕೊಡುವ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸುವುದು ಅಮೇರಿಕನ್ ಆಳುವವರ್ಗದ ಉದ್ಘೋಷಿತ ಪಕ್ಷಾತೀತ ರಾಜಕೀಯ ನೀತಿ. ಅದರ ಸಹಸ್ರಾಕ್ಷರೂಪೀ (ಸಾವಿರಾರು ಕಣ್ಣುಗಳ) ಗುಪ್ತಚರ ಸಂಸ್ಥೆಗಳು ಮತ್ತು ರೂಕ್ಷ ಉಪಾಂಗಗಳು ಪ್ರಜಾತಂತ್ರದ ಹೆಸರಿನಲ್ಲಿ ಸರ್ವಾಂತರ್ಯಾಮಿಯಾಗಿ ಜಗತ್ತಿನ ಎಲ್ಲಾ ದೇಶಗಳ ಆಗು–ಹೋಗುಗಳನ್ನು ಗಮನಿಸುವ, ನಿಯಂತ್ರಿಸುವ ಸಾಧನಗಳಾಗಿವೆ. ಹೀಗಾಗಿ 'ಶೀತಲ ಸಮರೋತ್ತರ' ಆಧುನಿಕ ಜಗತ್ತಿನ ದೊಡ್ಡಣ್ಣ, 'ಬಿಗ್ ಬ್ರದರ್' ಆರ್ವೆಲ್ ಹೇಳುವಂಥಾ ಸರ್ವಾಧಿಕಾರಿ ವ್ಯಕ್ತಿ ರೂಪದ ರಾಷ್ಟ್ರಾಧ್ಯಕ್ಷನೋ, ಪ್ರಧಾನಿಯೋ ಆಗಿರುವ ಬದಲು ಅಮೆರಿಕಾದ ಬಂಡವಾಳಶಾಹೀ ಆಳುವ ವರ್ಗವೇ ಆಗಿದೆ.

ಯಾವುದೇ ದೇಶದ ಆಳುವ ವರ್ಗವು ಸಮಾಜವಾದಿಯಾಗಿದ್ದಾಗ, ಸಮಾಜವಾದದ ಜನಪರ ನೀತಿಗಳನ್ನು ವಿರೋಧಿಸಲಾಗದೆ ಅದರ ಆಡಳಿತಗಾರರನ್ನು ಸರ್ವಾಧಿಕಾರಿಗಳೆಂದು ಧಿಕ್ಕರಿಸುವುದು, ಮತ್ತು ಆ ಮೂಲಕ ಸಮಾಜವಾದವು ಪ್ರಜಾಪ್ರಭುತ್ವದ ವಿರೋಧಿಯೆಂದು ಜನಸಾಮಾನ್ಯರ ನಡುವೆ ಬಿಂಬಿಸುವುದು ಬಂಡವಾಳಶಾಹಿ ರಾಜಕೀಯದ ಒಂದು ಪ್ರಬಲ ನಯವಂಚನೆಯ ತಂತ್ರ. ಅದೇ ರೀತಿಯಲ್ಲಿ ಒಂದು ದೇಶದ ಆಳುವ ವರ್ಗವು ಬಂಡವಾಳಶಾಹಿಯಾಗಿದ್ದಾಗ ಅದರ ಜನವಿರೋಧೀ ಸರ್ವಾಧಿಕಾರವನ್ನು ಮರೆಮಾಚಲು ಆ ದೇಶದ ಆಡಳಿತಗಾರರನ್ನು ಅಪ್ರತಿಮ ಪ್ರಜಾಪ್ರಭುತ್ವವಾದೀ ನಾಯಕರೆಂದು ಕೊಂಡಾಡುವುದು ಈ ನಯವಂಚನೆಯ ತಂತ್ರದ ಇನ್ನೊಂದು ಮುಖ.



'ಬಿಗ್ ಬ್ರದರ್' ಎಂಬ ರೂಪಕದ ಸರ್ವಾಂತರ್ಯಾಮೀ ಶಕ್ತಿಗೆ ಎರಡು ಮುಖಗಳಿವೆ. ಒಂದು: ಎಲ್ಲವನ್ನೂ, ಎಲ್ಲರನ್ನೂ ಗಮನಿಸುವ ಮೂಲಕ ಜನರಿಗೆ ತಾವು ಏನೇ ಮಾಡಿದರೂ ಅವನ ಕಣ್‌ಗಾವಲಿನಲ್ಲಿ ಮಾಡುತ್ತಿದ್ದೇವೆ ಎಂಬ ಭಯ ಹುಟ್ಟಿಸಿ ಅವರು ಯಾವುದೇ ವಿರೋಧೀ ಕೃತ್ಯಗಳಲ್ಲಿ ತೊಡಗದಂತೆ ತಡೆಯುವುದು. ಎರಡು: ಬಿಗ್‌ಬ್ರದರ್ ವಿರೋಧೀ ಕೃತ್ಯಗಳನ್ನು ಎಸಗುವ ಜನರು ಶಿಕ್ಷೆಯಿಂದ ತಪ್ಪಿಸಿಕೊಳ್ಳಲಾಗದು ಎಂದು ಎಚ್ಚರಿಸುವುದು.

ಇದು ಬಹುಮಟ್ಟಿಗೆ ದೈವಭಕ್ತರು ನಂಬುವ ಅಗೋಚರನಾದ ದೇವರ ಸರ್ವಾಂತರ್ಯಾಮೀ ಸರ್ವಶಕ್ತತೆ ಮತ್ತು, ಸರ್ವಜ್ಞತೆಯ ಶಕ್ತಿಗಳಂತೆ. ಒಂದೇ ವ್ಯತ್ಯಾಸವೆಂದರೆ ಭೌತ ಜಗತ್ತಿನ ಮಾನವ ಸರ್ವಾಧಿಕಾರೀ ಬಿಗ್‌ಬ್ರದರ್‌ನ ಸರ್ವೇಕ್ಷಣಾ ಶಕ್ತಿಗೆ ಮಿತಿಗಳಿವೆ. ನಂಬಿದವರಿಗೆ ತಾಯಿ, ತಂದೆ, ಬಂಧು, ಸ್ನೇಹಿತ (ತ್ವಮೇವ ಮಾತಾಶ್ಚ ಪಿತಾ ತ್ವಮೇವ...) ಎಲ್ಲವೂ ಆಗಿರುವ ಕಲ್ಪನೆಯ ದೇವರಿಗೆ ಮನುಷ್ಯರ ಸುಕೃತ್ಯ–ಕುಕೃತ್ಯಗಳು ಮಾತ್ರವಲ್ಲ, ಅವರು ಗುಟ್ಟಾಗಿ ಆಡುವ ಮಾತು ಮತ್ತು ಮಾಡುವ ಆಲೋಚನೆಗಳೂ ಸಹ ತಿಳಿದುಬಿಡುತ್ತವೆ ಎಂಬ ಶಿಶು ಸಹಜ ಭಯ. ಇದನ್ನು ಬೇಕಾದರೆ (ಕಾಯಾ, ವಾಚಾ, ಮನಸಾ ಪೂರ್ವಕವಾದ) ತ್ರಿಕರಣ ಭಯ ಎಂದೂ ಕರೆಯಬಹುದು. ಹಾಗಿದ್ದರೂ ಈ ದೈವಭಕ್ತರಲ್ಲಿ ಸಾಕಷ್ಟು ಮಂದಿ ದೇವರು–ಧರ್ಮದ ಹೆಸರಿನಲ್ಲೇ ಭ್ರಷ್ಟರೂ ಸುಳ್ಳರೂ, ಕ್ರೂರಿಗಳೂ ಆಗಿರುತ್ತಾರಲ್ಲಾ ಹೇಗೆ? ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಹೇಗೇ ಆದರೂ ಆರ್ವೆಲ್‌ನ ಬಿಗ್ ಬ್ರದರ್‌ಗೆ ಈ ಧಾರ್ಮಿಕ ಸರ್ವಾಧಿಕಾರಿಯಾದ ದೇವರಿಗೆ ಇರುವಂತೆ ತ್ರಿಕರಣ ಭಯವನ್ನು ಹುಟ್ಟಿಸುವ ಶಕ್ತಿಯಿಲ್ಲ.

ಬಂಡವಾಳಶಾಹೀ ಬಿಗ್ ಬ್ರದರ್‌ಗೆ, ಸರಕು–ಸೇವೆಗಳ ಉತ್ಪಾದನೆ, ವಾಣಿಜ್ಯ–ವ್ಯಾಪಾರ ಮತ್ತು ಜನಸಾಮಾನ್ಯರ ಅಂದರೆ ಶ್ರಮಿಕರ ಉಸ್ತುವಾರಿ ಅಥವಾ ಸರ್ವೇಕ್ಷಣೆ ಬಹು ಮುಖ್ಯವಾದುದು. ಕೊನೆಯಿರದ ಲಾಭದ ಹಸಿವು, ವ್ಯಾಪಾರದ ಪೈಪೋಟಿ ಮತ್ತು ಸಹಜೀವಿಗಳ ಬಗೆಗಿರುವ ಅಪನಂಬಿಕೆ, ಸ್ವಂತ ಅಸ್ತಿತ್ವವನ್ನು ಕುರಿತಾದ ಅನಿಶ್ಚಿತತೆ–ಅಭದ್ರತೆಗಳು ನಾನಾ ಬಗೆಯ ಸ್ವರಕ್ಷಣಾ ಸಾಧನಗಳ ಸೃಷ್ಟಿ ಮತ್ತು ಬಳಕೆಗೆ ದಾರಿ ಮಾಡಿಕೊಟ್ಟಿವೆ. ಬೀಗ–ವಾಚ್‌ಮನ್‌ಗಳಿಂದ ಹಿಡಿದು ನಾನಾ ಸ್ತರಗಳ ಗೂಢಚಾರಿಕೆ, ಸರ್ವೇಕ್ಷಣಾ ಕ್ಯಾಮರಾ, ಮತ್ತು ಉಪಗ್ರಹಗಳವರೆಗೆ ಈ ಹಸಿವು–ಪೈಪೋಟಿ–ಅಭದ್ರತೆಗಳ ಫಲಿತಗಳು ಜಾಗತಿಕವಾಗಿ ಬಂಡವಳಿಗರನ್ನು ಸದಾ ಆವರಿಸಿರುತ್ತವೆ. ಬದುಕಿನ ಸಾಮಾಜಿಕ ಉತ್ಪಾದನೆಗೆ ಅತ್ಯಗತ್ಯವಾದ, ಶ್ರಮಿಕರ ಜೀವಂತ ಶ್ರಮ, ಸತ್ತ ಶ್ರಮಗಳಾದ ಕಚ್ಚಾವಸ್ತುಗಳು, ಉತ್ಪಾದನಾ ಸಾಧನಗಳು, ಅವುಗಳ ವಿಸ್ತರಣೆಯಾಗಿ ಯಂತ್ರಗಳು, ಯಂತ್ರಗಳನ್ನು ತಯಾರಿಸುವ ಯಂತ್ರಗಳು, ತಂತ್ರಜ್ಞಾನ, ತಂತ್ರಜ್ಞಾನದ ಸುಧಾರಣೆ–ಸಂಶೋಧನೆ–ಆವಿಷ್ಕಾರಗಳು, ಅಂದರೆ, ಈಗಿರುವ ಕಂಪ್ಯೂಟರ್, ಮಾಹಿತಿ ತಂತ್ರಜ್ಞಾನ, ಸಂವಹನ ತಂತ್ರಜ್ಞಾನ, ರೋಬೋಟ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ... ಹೀಗೆ ಮನುಷ್ಯರ ಸಾಮಾಜಿಕ ಶ್ರಮದಿಂದ ಹುಟ್ಟುವ ಎಲ್ಲವೂ ಬಂಡವಾಳಶಾಹಿಗಳ ನಿಯಂತ್ರಣಕ್ಕೊಳಪಟ್ಟು ಅಮಾನುಷ ರೂಪವನ್ನು ಪಡೆದಿವೆ. ಇಡೀ ಜಗತ್ತು ಡಿಜಿಟಲ್‌ಮಯವಾಗಿದೆ. ಅಂದರೆ ಬಂಡವಾಳಶಾಹಿಯು ಡಿಜಿಟಲೀಕರಣ ಗೊಂಡಿದೆ.

18ನೇ ಶತಮಾನದಲ್ಲಿ ಇಂಗ್ಲಿಷ್ ತತ್ವಜ್ಞಾನಿ ಮತ್ತು ಸಮಾಜ ಸೇವಕ ಜೆರೆಮಿ ಬೆಂಥ್ಯಾಮ್ ಎಂಬಾತ ಜೈಲಿನಲ್ಲಿರುವ ನೂರಾರು ಬಂದಿಗಳನ್ನು ಒಬ್ಬನೇ ಕಾವಲುಗಾರನು ಅವರಿಗೆ ಗೊತ್ತಾಗದಂತೆ ಗಮನಿಸಬಹುದಾದಂಥ ಬಂದೀಖಾನೆಯ ನಕ್ಷೆಯೊಂದನ್ನು ರಚಿಸಿದ. ಅಂಥ ರಚನೆಗೆ ಪ್ಯಾನಾಪ್ಟಿಕನ್ ಎಂಬ ಹೆಸರು ಇದೆ. ಭೌತಿಕವಾಗಿ ನೂರಾರು ಜನರನ್ನು ಒಬ್ಬ ಗಮನಿಸುವುದು ಅಸಾಧ್ಯವಾದರೂ, ಹಾಗೆ ತಮ್ಮ ಅರಿವಿಗೆ ಬಾರದಂತೆ ಯಾರೋ ತಮ್ಮನ್ನು ಗಮನಿಸುತ್ತಾರೆಂಬ ಕಲ್ಪನೆಯೇ ಬಂದಿಗಳ ನಡವಳಿಕೆಯನ್ನು ನಿಯಂತ್ರಿಸಿ ನಿರ್ದೇಶಿಸುತ್ತದೆ ಎಂಬುದು ಇಲ್ಲಿ ಮುಖ್ಯ. ಪ್ರಾರಂಭದಲ್ಲಿ ಬಂದೀಖಾನೆಗಳಿಗಾಗಿ ರಚಿಸಿದ ಈ ಕಟ್ಟಡವು ಕ್ರಮೇಣ ಸ್ಕೂಲು, ಆಸ್ಪತ್ರೆ ಮೊದಲಾದ ರಚನೆಗಳಿಗೂ ವಿಸ್ತರಿಸಿತು.

ಪ್ಯಾನಾಪ್ಟಿಕನ್ ರಚನೆಯ ಪರಿಕಲ್ಪನೆಯನ್ನು ಇಡೀ ಸಮಾಜಕ್ಕೆ ವಿಸ್ತರಿಸಿದರೆ ಎಲ್ಲರನ್ನೂ, ಎಲ್ಲವನ್ನೂ ಗಮನಿಸಿ ನಿರ್ದೇಶಿಸಿ ನಿಯಂತ್ರಿಸಬಯಸುವ ಸರ್ವಾಧಿಕಾರಿ – ಬಿಗ್ ಬ್ರದರ್ ನ ಚಿತ್ರ ಸಿಗುತ್ತದೆ. ಫ್ರೆಂಚ್ ತತ್ವಶಾಸ್ತ್ರಜ್ಞ ಫೂಕೋ ಹೇಳುವಂತೆ ಪ್ಯಾನಾಪ್ಟಿಕನ್ ಹೇಗೆ ಒಂದು ಕಟ್ಟಡವಾಗದೆ ಒಂದು ನಿಯಂತ್ರಕ ಸಮಾಜದ ಪರಿಕಲ್ಪನೆಯಾಗಿದೆಯೋ ಹಾಗೆ ಆ ಬಿಗ್‌ಬ್ರದರ್ ಒಬ್ಬ ವ್ಯಕ್ತಿಯಾಗಿರದೆ, ಒಂದು ಕರಾಳ ಶೋಷಕ ವ್ಯವಸ್ಥೆಯಾಗಿದೆ.

ತಾನು ಬೇರೆಯವರನ್ನು ಗಮನಿಸಬೇಕು. ಆದರೆ ಅದು ಆ ಬೇರೆಯವರಿಗೆ ಗೊತ್ತಾಗಬಾರದು ಎಂದು ಬಯಸುವ ಅನೇಕ ಜನರಿದ್ದಾರೆ. ಕಪ್ಪು ಕನ್ನಡಕವನ್ನು ಹಾಕಿಕೊಂಡವರು ಯಾರನ್ನು ಬೇಕಾದರೂ ನೋಡಬಹುದು, ಆದರೆ ಅವರು ಯಾರನ್ನು ನೋಡುತ್ತಿದ್ದಾರೆಂಬುದು ಅವರ ದೃಷ್ಟಿಯ ಪರಿಧಿಯಲ್ಲಿರುವ ಯಾರಿಗೂ ತಿಳಿಯುವುದಿಲ್ಲ. ಕೆಲವರು ಮನೆಯ ಕಿಡಕಿಗಳಿಗೆ ತೆಳು ಬಣ್ಣದ ಕಪ್ಪು ಗಾಜು ಅಥವಾ ಒಮ್ಮುಖ ಕನ್ನಡಿಯ ಗಾಜನ್ನು ಹಾಕಿಸುತ್ತಾರೆ. ಅದರ ಮೂಲಕ ಹೊರಗಿನವರು ಅವರಿಗೆ ಕಾಣಿಸುತ್ತಾರೆ. ಆದರೆ ಹೊರಗಿನವರಿಗೆ ಅವರು ಕಾಣಿಸುವುದಿಲ್ಲ. ಮತ್ತೆ ಕೆಲವರು ಮನೆ ಕಟ್ಟಿಸುವಾಗಲೇ ಅಡುಗೆ ಮನೆ ಮತ್ತು ಹಾಲ್ ಅನ್ನು ಪ್ರತ್ಯೇಕಿಸುವ ಗೋಡೆಯಲ್ಲಿ ಪುಟ 15 ಕ್ಕೆ





ಆಫ್ಘಾನಿಸ್ತಾನ: ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತ





ಮುಂದಿನ ಪರಿಣಾಮ ಏನಾದೀತೆಂಬುದನ್ನು ಯೋಚಿಸದೆ ಅಫಘಾನಿಸ್ತಾನದಿಂದ ವಾಪಸ್ ಹೋಗುವ ಅಮೆರಿಕದ ಅವಸರದ ನಡೆಯನ್ನು ನೋಡಿದ ಮೇಲಾದರೂ, ಮೋದಿ ಸರ್ಕಾರ ಮತ್ತು ವಿದೇಶಾಂಗ ನೀತಿ ನಿರೂಪಕರು ತಮ್ಮ ಅಮೆರಿಕಾ-ಪರ ಏಕಮುಖ ವಿದೇಶಾಂಗ ನೀತಿಯ ಪುನರಾವಲೋಕನ ಮಾಡಬೇಕು ಮತ್ತು ಈಗ ಕ್ವಾಡ್‌ನಲ್ಲಿ ರೂಪು ತಳೆಯುತ್ತಿರುವ ಅಮೆರಿಕದೊಂದಿಗಿನ ನಿಕಟ ಸಾಮರಿಕ ಮೈತ್ರಿಯ ಬಗ್ಗೆಯೂ ಪುನರ್‌ವಿಮರ್ಶೆ ನಡೆಸುವುದು ಕೂಡ ಅಗತ್ಯ.



* ಪ್ರಕಾಶ್ ಕಾರಟ್

ಅಫ್ಘಾನಿಸ್ತಾನದಲ್ಲಿನ ಪರಿಸ್ಥಿತಿ ಬಹಳ ವೇಗವಾಗಿ ಬದಲಾಗುತ್ತಿದೆ. ಅಲ್ಲಿಂದ ಅಮೆರಿಕದ ಪಡೆಗಳ ವಾಪಸಾತಿ ಹೆಚ್ಚು ಕಡಿಮೆ ಮುಗಿದಿದೆ. ತಾಲಿಬಾನ್ ದೇಶದಾದ್ಯಂತ ಮುನ್ನಡೆ ಸಾಧಿಸುತ್ತಿದೆ. ದೇಶದ ಶೇಕಡ 85 ಭಾಗ ತನ್ನ ಹಿಡಿತದಲ್ಲಿದೆ ಎಂದು ತಾಲಿಬಾನ್ ಹೇಳಿಕೊಂಡಿದೆ. ಇದು ನಿಜವೇ ಆಗಿದ್ದರೆ ವಿಶೇಷವಾಗಿ ದೇಶದ ಉತ್ತರ ಭಾಗದಲ್ಲಿ ತಾಲಿಬಾನ್ ಮುನ್ನಡೆಯ ವೇಗ ಎಲ್ಲರನ್ನೂ ಚಕಿತಗೊಳಿಸಿದೆ.

ಆಫ್ಘಾನಿಸ್ತಾನದಲ್ಲಿನ 20 ವರ್ಷಗಳ ಯುದ್ಧದ ನಂತರ ಅಮೆರಿಕದ ಪಡೆಗಳು ವಾಪಸಾಗುವುದು ಅದರ ಅವಮಾನಕರ ಸೋಲಿನ ಸಂಕೇತವಾಗಿದೆ. ಅಮೆರಿಕದಲ್ಲಿ 2001 ಸೆಪ್ಟೆಂಬರ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಆಗಿನ ಅಧ್ಯಕ್ಷ ಜಾರ್ಜ್ ಬುಷ್, 'ಭಯೋತ್ಪಾದನೆ ವಿರುದ್ಧ ಸಮರ' ಸಾರಲು ಆಫ್ಘಾನಿಸ್ತಾನದ ಮೇಲೆ ಆಕ್ರಮಣ ನಡೆಸಲು ಆದೇಶಿಸಿದ್ದರು. ಈಗ ಕಾಲಚಕ್ರ ಸಂಪೂರ್ಣ ಒಂದು ಸುತ್ತು ಬಂದಿದೆ. 1980ರ ದಶಕದಲ್ಲಿ ಸೋವಿಯತ್ ಒಕ್ಕೂಟ ಬೆಂಬಲಿತ ಸರ್ಕಾರದ ವಿರುದ್ಧ ಹೋರಾಡಲು ಸಶಸ್ತ್ರ ಮುಜಾಹಿದೀನ್‌ಗಳಿಗೆ ಅಮೆರಿಕ ಹಣಕಾಸು ಹಾಗೂ ಶಸ್ತ್ರಾಸ್ತ್ರ ನೆರವು ನೀಡಿತ್ತು. ಆಗಿನ ಸರ್ಕಾರದ ವಿರುದ್ಧದ ಆ ಜಿಹಾದ್‌ನಲ್ಲಿ ಒಸಾಮಾ ಬಿನ್ ಲಾಡೆನ್‌ನಂಥವರೂ ಸೇರಿಕೊಂಡಿದ್ದರು. ಒಂದು ಪೂರ್ಣ ದಶಕದ ನಂತರ, ಅದೇ ಅಮೆರಿಕ ಮುಜಾಹಿದೀನ್‌ನ ಸಂತತಿಯಾದ ತಾಲಿಬಾನ್ ವಿರುದ್ಧ ಕಾರ್ಯಾಚರಿಸಲು ಆರಂಭಿಸಿತ್ತು. ತಾಲಿಬಾನನ್ನು ಅಧಿಕಾರದಿಂದ ಪದಚ್ಯುತಗೊಳಿಸಿದ ನಂತರ ಅಮೆರಿಕವು ತನ್ನ ತಾಳಕ್ಕೆ ತಕ್ಕಂತೆ ಕುಣಿಯುವ ಒಂದು ಆಡಳಿತ ಪ್ರತಿಷ್ಠಾಪಿಸಿ ಅದಕ್ಕೆ 'ಪ್ರಜಾಪ್ರಭುತ್ವ ಲೇಪನ' ನೀಡಿತ್ತು.

ಎರಡು ದಶಕಗಳ ವೈಮಾನಿಕ ಸಮರ ಹಾಗೂ ವಿಶೇಷ ಪಡೆಗಳ ಕಾರ್ಯಾಚರಣೆಗಳಿಂದ ತಾಲಿಬಾನ್‌ನ ಶಕ್ತಿ ಕುಗ್ಗಿಸಲು ಆಗಲಿಲ್ಲ. ಎರಡು ಟ್ರಿಲಿಯ ಡಾಲರ್‌ನಷ್ಟು ಅಪಾರ ಹಣ ವ್ಯಯಿಸಿ ಹಾಗೂ 2,313 ಸೈನಿಕರ ಪ್ರಾಣ ಬಲಿಕೊಟ್ಟ ನಂತರ, ಒಂದಾದ ಮೇಲೊಂದರಂತೆ ಆಡಳಿತ ನಡೆಸಿದ ಅಮೆರಿಕದ ಸರ್ಕಾರಗಳು ಆಫ್ಘಾನಿಸ್ತಾನದ ಅತಿಕ್ರಮಣವನ್ನು ಮತ್ತು ತಮ್ಮ ಪಡೆಗಳನ್ನು ಕಡಿತಗೊಳಿಸುತ್ತ ಬಂದವು. ಹಾಲಿ ಅಧ್ಯಕ್ಷ ಜೋ ಬೈಡೆನ್ ಸೆಪ್ಟೆಂಬರ್‌ನೊಳಗೆ ಎಲ್ಲ ಅಮೆರಿಕ–ನ್ಯಾಟೊ ಪಡೆಗಳನ್ನು ವಾಪಸ್ ಕರೆಸಿಕೊಳ್ಳುವುದಾಗಿ ಘೋಷಿಸಿದ್ದಾರೆ. 20 ವರ್ಷಗಳ ಆಫ್ಘನ್ ಯುದ್ಧದಲ್ಲಿ 47,600 ನಾಗರಿಕರ ಪ್ರಾಣಹರಣವಾಗಿದೆ. ಆ ಪೈಕಿ 40ರಷ್ಟು ಜನರು ಅಮೆರಿಕದ ವೈಮಾನಿಕ ಬಾಂಬ್ ದಾಳಿಗಳಿಂದ ಮೃತಪಟ್ಟಿದ್ದಾರೆ.

ಡೊನಾಲ್ಡ್ ಟ್ರಂಪ್ ಆಡಳಿತ ದೋಹಾದಲ್ಲಿ ತಾಲಿಬಾನ್ ಜೊತೆ ಮಾತುಕತೆ ಆರಂಭಿಸಿತ್ತು ಹಾಗೂ ಒಂದು ಒಪ್ಪಂದವನ್ನು ಘೋಷಿಸಲಾಗಿತ್ತು. ಆದರೆ, ಒಂದು ಮಧ್ಯಂತರ ಸರ್ಕಾರ ರಚನೆ ಕುರಿತು ತಾಲಿಬಾನ್ ಮತ್ತು ಆಫ್ಘಾನಿಸ್ತಾನ ಸರ್ಕಾರದ ನಡುವಿನ ಮಾತುಕತೆ ಸ್ಥಗಿತಗೊಂಡಿತ್ತು. ಅಮೆರಿಕನ್ನರು ಆಕ್ರಮಿತ ದೇಶಗಳನ್ನು ಬಿಟ್ಟು ಹೋಗುವಾಗ ಅವುಗಳು ಸಂಪೂರ್ಣ ಉಧ್ವಸ್ಥಗೊಂಡಿರುತ್ತವೆ. ಆಫ್ಘಾನಿಸ್ತಾನದ ಪರಿಸ್ಥಿತಿಯೂ ಹಾಗೇ ಆಗಿದೆ. ಇರಾಕ್‌ನಲ್ಲೂ ಹಾಗೇ ಆಗಿತ್ತು.

ಅಮೆರಿಕ ರಚಿಸಿ ತರಬೇತಿ ನೀಡಿದ್ದ ಆಫ್ಘನ್ ರಾಷ್ಟ್ರೀಯ ಸೇನೆ (ಎಎನ್‌ಎ) ತಾಲಿಬಾನ್ ಸೇನೆ ಮುಂದೆ ಪೇಲವವಾಗಿದೆ. ಎಎನ್‌ಎಯ ಕೆಲವು ಸೈನಿಕರು ಒಂದೋ ಶರಣಾಗುತ್ತಿದ್ದಾರೆ ಅಥವಾ ತಮ್ಮ ಹುದ್ದೆ ತೊರೆದು ಪಲಾಯನ ಮಾಡುತ್ತಿದ್ದಾರೆ.

ಅಂತಃಕಲಹ ಪರಿಸ್ಥಿತಿ ಸೃಷ್ಟಿ

ಅಮೆರಿಕ ವಾಪಸಾದ ಆರು ತಿಂಗಳೊಳಗೆ ಇಡೀ ದೇಶವನ್ನು ತಾಲಿಬಾನ್ ತನ್ನ ವಶಕ್ಕೆ ಪಡೆದುಕೊಳ್ಳಲಿದೆ ಎಂದು ಅಮೆರಿಕದ ಬೇಹುಗಾರಿಕೆ ಸಂಸ್ಥೆಯೇ ಹೇಳಿದೆ. ಆದರೆ ತಾಲಿಬಾನ್ ಅಧಿಕಾರ ವಹಿಸಿಕೊಂಡಾಕ್ಷಣ ದೇಶದಲ್ಲಿ ಸ್ಥಿರತೆ ಬರುತ್ತದೆ ಎನ್ನುವುದಕ್ಕೆ ಯಾವುದೇ ಖಾತರಿಯಿಲ್ಲ. ಪ್ರಭಾವಶಾಲಿ ಬುಡಕಟ್ಟು ಪಾಳೇಗಾರರು ಹಾಗೂ ಅಮೆರಿಕ ಪ್ರಾಯೋಜಿತ ಮತ್ತು ತರಬೇತಾದ ಪೌರಸೇನಾಪಡೆಗಳೊಂದಿಗೆ ಸಂಪರ್ಕ ಹೊಂದಿರುವ ಪೌರ ಸೇನಾಪಡೆಗಳವರು ಇದ್ದಾರೆ. ಅವರು ಅಂತಃಕಲಹ ಪರಿಸ್ಥಿತಿಯನ್ನು ಸೃಷ್ಟಿಸುತ್ತಿದ್ದಾರೆ. ಹಾಗಾದಲ್ಲಿ ನಾಲ್ಕು ದಶಕಗಳಿಂದ ಹಿಂಸೆ ಹಾಗೂ ಸಂಘರ್ಷದಿಂದ ಹೈರಾಣಾಗಿರುವ ಜನರು ಇನ್ನೂ ಕೆಟ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

ತಾಲಿಬಾನ್ ಪಾಲ್ಗೊಳ್ಳುವಿಕೆಯೊಂದಿಗೆ ಒಂದು ಮಧ್ಯಂತರ ಸರ್ಕಾರ ರಚಿಸುವುದೇ ಇದನ್ನು ನಿವಾರಿಸಲು ಇರುವ ಏಕೈಕ ಮಾರ್ಗವಾಗಿದೆ. ಸಂಬಂಧಪಟ್ಟ ಎಲ್ಲ ಪಕ್ಷಗಳ ನಡುವೆ ಪರಸ್ಪರ ಅರಿವಿನೊಂದಿಗೆ ಆ ಸರ್ಕಾರ ರಚನೆಯಾಗಬೇಕು. ಇಂಥದ್ದೊಂದು ಸರ್ಕಾರ ರಚನೆ ಸಂಬಂಧ ಒಪ್ಪಂದ ಏರ್ಪಡಿಸಲು ದೋಹಾದಲ್ಲಿ ತಾಲಿಬಾನ್ ಮತ್ತು ಆಫ್ಘಾನ್ ಸರ್ಕಾರದ ಪ್ರತಿನಿಧಿಗಳೊಂದಿಗೆ ಕೊನೆ ಕ್ಷಣದ ಪ್ರಯತ್ನಗಳು ನಡೆಯುತ್ತಿವೆ.



ಮಿಷನ್.....ಈಡೇರಿತು! ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಮೋದಿ ಸರಕಾರದ ಪೇಚು

ತಾಲಿಬಾನ್‌ನೊಂದಿಗೆ ಬಹಳ ಹಿಂದೆಯೇ ಸಂಪರ್ಕ ಕಡಿದುಕೊಂಡಿರುವ ಭಾರತ ಈ ಎಲ್ಲ ಪ್ರಯತ್ನಗಳಿಂದ ಹೊರಗಿದೆ. 2001ರಲ್ಲಿ ವಾಜಪೇಯಿ ಸರ್ಕಾರ ಆಫ್ಘಾನಿಸ್ತಾನದ ಮೇಲೆ ಅಮೆರಿಕ ದಾಳಿ ಮಾಡಲು ಮಿಲಿಟರಿ ಸಾಗಾಣಿಕೆಯ ಬೆಂಬಲ ನೀಡಲು ಮುಂದಾಗಿತ್ತು. ಆದರೆ ಅಮೆರಿಕ ತನ್ನ ಕಾರ್ಯಾಚರಣೆಗೆ ಪಾಕಿಸ್ತಾನವನ್ನು ಮುಂಚೂಣಿ ದೇಶವಾಗಿ ಆಯ್ಕೆ ಮಾಡಿಕೊಂಡಿತ್ತು. ಇದರಿಂದ ಆಗಿನ ಬಿಜೆಪಿ ಸರ್ಕಾರಕ್ಕೆ ಭಾರಿ ನಿರಾಶೆಯಾಗಿತ್ತು. ಭಾರತ ಆಗಿನಿಂದಲೂ ಅಮೆರಿಕದೊಂದಿಗೆ ಕೈಜೋಡಿಸಿ ಆಫ್ಘಾನ್ ಸರ್ಕಾರಕ್ಕೆ ವಿವಿಧ ಯೋಜನೆಗಳು ಮತ್ತು ಮೂಲಸೌಕರ್ಯ ರಚನೆಗಾಗಿ ಬಿಲಿಯಾಂತರ ಡಾಲರ್ ನೆರವು ಒದಗಿಸುವ ಪ್ರಯತ್ನ ನಡೆಸುತ್ತ ಬಂದಿದೆ.

ಆದರೆ, ತಾಲಿಬಾನ್‌ನೊಂದಿಗೆ ಮಾತುಕತೆ ಆರಂಭಿಸಲು ಅಮೆರಿಕ ನಿರ್ಧರಿಸಿದ್ದರಿಂದ ನರೇಂದ್ರ ಮೋದಿ ಸರ್ಕಾರ ಪೇಚಿಗೆ ಸಿಲುಕಿಕೊಂಡಿದೆ. ಈ ಅಹಿತಕರ ಸನ್ನಿವೇಶವನ್ನು ಎದುರಿಸಬೇಕಾಗಿ ಬಂದಿರುವ ಮೋದಿ ಸರಕಾರ ದೋಹಾದಲ್ಲಿ ತಾಲಿಬಾನ್‌ನೊಂದಿಗೆ ಸಂಪರ್ಕ ಸಾಧಿಸುವ ಪ್ರಯತ್ನ ಮಾಡಬೇಕಾಗಿ ಬಂದಿದೆ. ವಿದೇಶಾಂಗ ಸಚಿವ ಎಸ್. ಜೈಶಂಕರ್, ಟೆಹರಾನ್ ಮತ್ತು ಮಾಸ್ಕೋಗೆ ಭೇಟಿ ನೀಡಿ ತಾಲಿಬಾನ್‌ನೊಂದಿಗೆ ಮಧ್ಯಸ್ಥಿಕೆಗಾರರಾಗಿರುವ ಅಲ್ಲಿನ ಸರ್ಕಾರಗಳೊಂದಿಗೆ ಸಮಾಲೋಚಿಸಿದ್ದಾರೆ. ಆದರೆ, ಮಾಸ್ಕೋದಲ್ಲಿ ಸುದ್ದಿಗೋಷ್ಠಿಯಲ್ಲಿ ಜೈಶಂಕರ್ ತಾಲಿಬಾನ್ ಬಲವಂತದಿಂದ ಆಡಳಿತ ವಹಿಸಿಕೊಳ್ಳುವ 'ನ್ಯಾಯಸಮ್ಮತತೆ' ಬಗ್ಗೆ ಅನುಮಾನ ವ್ಯಕ್ತಪಡಿಸಿ ನೀಡಿರುವ ಹೇಳಿಕೆ, ಭಾರತವು ಮುಡಿ ಬರುತ್ತಿರುವ ವಾಸ್ತವ ಸನ್ನಿವೇಶಗಳೊಂದಿಗೆ ಹೆಜ್ಜೆ ಹಾಕುತ್ತಿಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಅಮೆರಿಕ ರಂಗದಿಂದ ನಿರ್ಗಮಿಸುತ್ತಿರುವುದರಿಂದ ಗಮನವು ಈಗ ಆಫ್ಘಾನಿಸ್ತಾನದಲ್ಲಿ ಶಾಂತಿ ಮತ್ತು ಸ್ಥಿರತೆ ಸ್ಥಾಪಿಸುವ ವಿಚಾರದಲ್ಲಿ ನೇರ ಹಿತಾಸಕ್ತಿ ಹೊಂದಿರುವ ಪ್ರಾದೇಶಿಕ ಶಕ್ತಿ ಕೇಂದ್ರಗಳತ್ತ ಕೇಂದ್ರೀಕೃತಗೊಳ್ಳುತ್ತಿದೆ.

ಷಾಂಘಾಯ್ ಸಹಕಾರ ಸಂಘಟನೆ (ಎಸ್‌ಸಿಒ) ಆಫ್ಘಾನಿಸ್ತಾನದ ಆರು ನೆರೆದೇಶಗಳನ್ನು ಒಳಗೊಂಡಿದೆ. ಮಧ್ಯ ಏಷ್ಯಾ ದೇಶಗಳಾದ ತಾಜಿಕಿಸ್ತಾನ, ಉಜ್ಬೆಕಿಸ್ತಾನ, ಕಿರ್ಗಿಜಿಸ್ತಾನ ಮತ್ತು ಕಜಕಸ್ತಾನಗಳಲ್ಲದೆ ರಷ್ಯಾ, ಚೀನಾ, ಭಾರತ ಮತ್ತು ಪಾಕಿಸ್ತಾನ ಇದರ ಸದಸ್ಯ ರಾಷ್ಟ್ರಗಳಾಗಿವೆ. ಆಫ್ಘಾನಿಸ್ತಾನ ಮತ್ತು ಇರಾನ್‌ಗೆ ವೀಕ್ಷಕ ಸ್ಥಾನಮಾನವಿದೆ.

ಎಸ್‌ಸಿಒ ದೇಶಗಳ ವಿದೇಶಾಂಗ ಸಚಿವರ ಸಭೆ ಜುಲೈ 13–14ರಂದು ತಾಜಿಕಿಸ್ತಾನದ ದುಷಾಂಬೆಯಲ್ಲಿ ನಡೆದಿದ್ದು ಆಫ್ಘಾನಿಸ್ತಾನದ ಮೇಲೆ ಚರ್ಚೆ ಕೇಂದ್ರಿತವಾಗಿದೆ. ಸಭೆಯಲ್ಲಿ ಭಾಗವಹಿಸಿದ ಜೈಶಂಕರ್ ಪ್ರಾದೇಶಿಕ ಬೆಂಬಲಿತ ರಾಜಕೀಯ ಇತ್ಯರ್ಥವೊಂದು ರೂಪುಗೊಳ್ಳುವ ಸಾಮೂಹಿಕ ಪ್ರಯತ್ನಗಳಲ್ಲಿ ಕೈ ಜೋಡಿಸಬಹುದೆಂದು ನಿರೀಕ್ಷಿಸಬೇಕಾಗಿದೆ.

ಪಾಕಿಸ್ತಾನವು ಸಾಂಪ್ರದಾಯಿಕವಾಗಿ ತಾಲಿಬಾನ್‌ನ ಬೆಂಬಲಿಗನಾದರೂ ಅದು ತನ್ನ ಹಿತಾಸಕ್ತಿಗಳು ಮತ್ತು ಭದ್ರತೆಯ ಮೇಲೆ ಪರಿಣಾಮ ಬೀರುವಂಥ ಊಹಿಸಲಸಾಧ್ಯವಾದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಪಾಕಿಸ್ತಾನ ಸಂಸತ್ತಿನ ಸೆನೆಟ್ ವಿದೇಶಾಂಗ ಸಂಬಂಧಗಳ ಸಮಿತಿ ಮುಂದೆ ಜುಲೈ 9ರಂದು ಹಾಜರಾದ ಪಾಕಿಸ್ತಾನದ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೊಯಿದ್ ಯೂಸುಫ್, ಆಫ್ಘಾನಿಸ್ತಾನ ಕುರಿತ ತಮ್ಮ ದೇಶದ "ವಿಸ್ತೃತ ನೀತಿ ಚೌಕಟ್ಟ"ನ್ನು ಅನಾವರಣಗೊಳಿಸಿದ್ದಾರೆ. ಮೊದಲನೆಯದಾಗಿ, ತಾಲಿಬಾನ್ ಮತ್ತು ಕಾಬೂಲ್ ಸರ್ಕಾರದ ನಡುವೆ ಅಧಿಕಾರ ಹಂಚಿಕೆ ವ್ಯವಸ್ಥೆ ಏರ್ಪಡುವಂತೆ ಪ್ರಯತ್ನಗಳನ್ನು ನಡೆಸುವುದು; ಎರಡನೆಯದು, ಪಾಕಿಸ್ತಾನದೊಳಕ್ಕೆ ಅಸ್ಥಿರತೆ ಮತ್ತು ನಿರಾಶ್ರಿತರ ಹರಿವನ್ನು ಕನಿಷ್ಟಗೊಳಸಲು ಕ್ರಮಗಳನ್ನು ಕೈಗೊಳ್ಳುವುದು. ನೆಲಮಟ್ಟದಲ್ಲಿ ಪರಿಸ್ಥಿತಿ ಎಲ್ಲವನ್ನೂ ಮೀರಿ ಸಾಗುತ್ತಿದೆ, ಆದ್ದರಿಂದ ಮೊದಲ ಆಯ್ಕೆಯ ಸಾಧ್ಯತೆ ಅಷ್ಟಾಗಿ ಕಾಣುತ್ತಿಲ್ಲ ಎಂದೂ ಅವರು ಹೇಳಿದ್ದಾರೆ.

ಪಾಕಿಸ್ತಾನದ ನಿಲುವು ಹೀಗಿರುವಾಗ, ಎಸ್‌ಸಿಒ ದಂತೆ ಪಾಕಿಸ್ತಾನ ಸಹಿತ ಯಾವುದೇ ಪ್ರಾದೇಶಿಕ ಸಾಮೂಹಿಕ ಪ್ರಯತ್ನಗಳಲ್ಲಿ ಭಾಗಿಯಾಗುವಲ್ಲಿ ಭಾರತ ಯಾವುದೇ ಬಗೆಯ ಹಿಂಜರಿಕೆ ತೋರಬಾರದು.

ಇಸ್ಲಾಮಿಕ್ ಎಮಿರೇಟ್: ಮಹಿಳೆಯರ ಪ್ರಶ್ನೆ

ಒಂದು ಇಸ್ಲಾಮಿಕ್ ಎಮಿರೇಟ್ ಸ್ಥಾಪಿಸುವುದು ತನ್ನ ಉದ್ದೇಶ ಎಂದು ತಾಲಿಬಾನ್ ಸ್ಪಷ್ಟಪಡಿಸಿದೆ. ಅದರಲ್ಲಿ ಯಾವುದೇ 'ಪ್ರಜಾಸತ್ತಾತ್ಮಕ ಸಂರಚನೆ' ಇರುವುದಿಲ್ಲ ಎಂದೂ ಹೇಳಿದೆ ಎಂದು ಪಾಕಿಸ್ತಾನಿ ಮೂಲಗಳು ಹೇಳಿವೆ. ಮಹಿಳೆಯರು ಮತ್ತು ಹೆಣ್ಣು ಮಕ್ಕಳನ್ನು ತಾಲಿಬಾನ್ ಆಡಳಿತ ಹೇಗೆ ನಡೆಸಿಕೊಳ್ಳಲಿದೆ ಎನ್ನುವುದೇ ಪ್ರಮುಖ ಕಾಳಜಿಯ ವಿಷಯವಾಗಿದೆ. ಮಹಿಳೆಯರಿಗೆ ಅತ್ಯುನ್ನತ ಮಟ್ಟದ ವರೆಗೆ ಶಿಕ್ಷಣ ಪಡೆಯಲು ಅವಕಾಶ ನೀಡಲಾಗುವುದೆಂದು ತಾಲಿಬಾನ್ ವಕ್ತಾರರೊಬ್ಬರು ಹೇಳಿದ್ದಾರೆ. ಆದರೆ ಅದು ಕಾರ್ಯರೂಪಕ್ಕೆ ಬಂದಾಗಲಷ್ಟೇ ನಂಬಬಹುದಾದ ವಿಷಯವಾಗಿದೆ. ಯಾವುದೇ ಪ್ರಾದೇಶಿಕ ಸಾಮೂಹಿಕ ಪ್ರಯತ್ನ ಮಾಡಬಹುದಾದ ಕನಿಷ್ಟ ಕೆಲಸವೆಂದರೆ, ಹಿಂದಿನ ತಾಲಿಬಾನ್ ಆಳ್ವಿಕೆಯಲ್ಲಿ ಅತ್ಯಂತ ಹೆಚ್ಚು ನರಳಿರುವ ಮಹಿಳೆಯರ ಹಕ್ಕುಗಳ ರಕ್ಷಣೆಯನ್ನು ಖಾತ್ರಿಪಡಿಸುವುದು.

2001ರಿಂದಲೂ ಭಾರತದಲ್ಲಿ ಆಡಳಿತ ನಡೆಸಿದ ಸರ್ಕಾರಗಳ ಆಫ್ಘನ್ ನೀತಿಯೆಂದರೆ ಪ್ರಮುಖವಾಗಿ ಅಮೆರಿಕ ಆಕ್ರಮಣಕ್ಕೆ ಬೆಂಬಲ ಕೊಡುವುದು ಮತ್ತು ಮೂಲರಚನೆ ಹಾಗೂ ಅಭಿವೃದ್ಧಿ ಪ್ರಾಜೆಕ್ಟ್‌ಗಳ ಮೇಲೆ ಕೋಟ್ಯಂತರ ಡಾಲರ್ ಖರ್ಚು ಮಾಡಿ "ರಾಷ್ಟ್ರ ಕಟ್ಟುವ" ಪ್ರಕ್ರಿಯೆಯಲ್ಲಿ ನೆರವಾಗುವುದು. ಮುಂದಿನ ಪರಿಣಾಮ ಏನಾದೀತೆಂಬುದನ್ನು ಯೋಚಿಸದೆ ವಾಪಸ್ ಹೋಗುವ ಅಮೆರಿಕದ ಅವಸರದ ನಡೆಯನ್ನು ನೋಡಿದ ಮೇಲಾದರೂ, ಮೋದಿ ಸರ್ಕಾರ ಮತ್ತು ವಿದೇಶಾಂಗ ನೀತಿ ನಿರೂಪಕರು ತಮ್ಮ ಅಮೆರಿಕಾ–ಪರ ಏಕಮುಖ ವಿದೇಶಾಂಗ ನೀತಿಯ ಪುನರಾವಲೋಕನ ಮಾಡಬೇಕು ಮತ್ತು ಈಗ ಕ್ವಾಡ್‌ನಲ್ಲಿ ರೂಪು ತಳೆಯುತ್ತಿರುವ ಅಮೆರಿಕದೊಂದಿಗಿನ ನಿಕಟ ಸಾಮರಿಕ ಮೈತ್ರಿಯ ಬಗ್ಗೆಯೂ ಪುನರ್‌ವಿಮರ್ಶೆ ನಡೆಸುವುದು ಕೂಡ ಅಗತ್ಯ. ಆಫ್ಘನ್ ನೀತಿಯಂತೆ ಚೀನಾ ವಿರುದ್ಧ ಅಮೆರಿಕಾದ ಸಾಹಸಕ್ಕೆ ಅಂಗರಕ್ಷಕನಂತೆ ಹೊರಡುವುದು ಭಾರತವನ್ನು ಏಕಾಂಗಿಯಾಗಿಸುತ್ತದೆ ಹಾಗೂ ಅದರ ವ್ಯೂಹಾತ್ಮಕ ಸ್ವಾಯತ್ತೆಯ ಹಳಿ ತಪ್ಪಿಸಲಿದೆ.

ಅನು: ವಿಶ್ವ

ಉತ್ತರ ಪ್ರದೇಶ ಜನಸಂಖ್ಯಾ (ನಿಯಂತ್ರಣ, ಸ್ಥಿರತೆ ಮತ್ತು ಕಲ್ಯಾಣ) ಮಸೂದೆ 2021

ಮಹಿಳೆಯರ, ಬಡವರ ಮೇಲೆ ದಾಳಿಯ ಕೋಮುವಾದಿ ಧ್ರುವಿಕರಣದ ಹುನ್ನಾರ



ಇದು ಒಂದು ಕಡೆ ಎಲ್ಲ ಮಹಿಳೆಯರ, ಮಕ್ಕಳ, ಬಡವರ ಮೇಲಿನ ದಾಳಿಯಾದರೆ, ಇನ್ನೊಂದು ಕಡೆ ಮುಸ್ಲಿಂ ಅಲ್ಪ ಸಂಖ್ಯಾತರ ಕುರಿತು ಸಂಘಿ ಗುಂಪುಗಳು ಮತ್ತು ಬಿ.ಜೆ.ಪಿ ಎಂದಿನಿಂದಲೂ ಮಾಡಿಕೊಂಡು ಬಂದಿರುವ ಅಪಪ್ರಚಾರಕ್ಕೆ ಇನ್ನಷ್ಟು ಬಲ ಕೊಡುವ ಪ್ರಯತ್ನ.

ವಿಮಲಾ ಕೆ.ಎಸ್.

ಜನಸಂಖ್ಯೆಯ ನಿಯಂತ್ರಣಕ್ಕಾಗಿ ಉತ್ತರ ಪ್ರದೇಶ ಮತ್ತು ಅಸ್ಸಾಂ ಮಾದರಿಯಲ್ಲಿ ಕರ್ನಾಟಕದಲ್ಲಿಯು ಹೊಸ ಜನಸಂಖ್ಯಾ ನೀತಿಯೊಂದನ್ನು ಜಾರಿಗೆ ತರಲು ಸಕಾಲ. ಜನಸಂಖ್ಯಾ ಸ್ಫೋಟ ಹೀಗೇ ಮುಂದುವರೆದರೆ ಸೀಮಿತ ನೈಸರ್ಗಿಕ ಸಂಪನ್ಮೂಲದ ಮೂಲಕ ಪ್ರತಿಯೊಬ್ಬ ಪ್ರಜೆಯ ಅಗತ್ಯವನ್ನು ಪೂರೈಸುವುದು ಕಷ್ಟ

ಸಿ.ಟಿ. ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ನಮಗೆ ಇರುವುದೊಂದೇ ಭೂಮಿ, ನಿಯಂತ್ರಣವಿಲ್ಲದ ಜನಸಂಖ್ಯಾ ಸ್ಫೋಟ ನಿಲ್ಲಿಸೋಣ.

ಡಾ. ಸುಧಾಕರ್, ರಾಜ್ಯದ ಆರೋಗ್ಯ ಸಚಿವರು.

ಈ ಎರಡು ಹೇಳಿಕೆಗಳು ಮತ್ತು ಮೇಲೆ ಪ್ರಸ್ತಾಪಿಸಿದ ಉತ್ತರ ಪ್ರದೇಶದ ಜನಸಂಖ್ಯಾ ನಿಯಂತ್ರಣ ಮಸೂದೆ ಸೂಕ್ಷ್ಮವಾದ ಕರಾಳ ಮುನ್ಸೂಚನೆ ನೀಡಿವೆ. ಭಾರತದ ಜನಸಂಖ್ಯೆಯ ಗಾತ್ರ ನೋಡುತ್ತಿದ್ದರೆ ಇಂಥದ್ದೊಂದು ಮಸೂದೆ ಬಂದರೇನು ತಪ್ಪು ಎಂದೆನಿಸಬಹುದು ಯಾರಿಗಾದರೂ. ಹಾಗೆಂದೇ ಕರ್ನಾಟಕದ ಆರೋಗ್ಯ ಸಚಿವರು 'ಮೊದಲ ನೂರು ಕೋಟಿ ತಲುಪಲು ಸಾವಿರಾರು ವರ್ಷ ಬೇಕಾಯಿತು, ನೂರರಿಂದ 700 ಕ್ಕೆ 200 ವರ್ಷಗಳಲ್ಲಿ ಏರಿತು' ಎಂದಿದ್ದಾರೆ. ಆದರೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮಿಕ್ಷೆಯ ವರದಿಗಳು ಕೊಡುವ ಮಾಹಿತಿ ಇವರು ಹೇಳುವಂತೆ ಭಯಾನಕವಾಗಿಲ್ಲ, ಬದಲಿಗೆ ನಿಯಂತ್ರಣದ ಮೂಲಕ ಅಪಾಯಕ್ಕೆ ಸಿಲುಕುವ ಸೂಚನೆ ನೀಡುತ್ತಿವೆ.

ಮೊದಲು ಉತ್ತರ ಪ್ರದೇಶದ ಪ್ರಸ್ತಾಪಿತ ಕಾನೂನು ಏನು ಹೇಳುತ್ತದೆ ನೋಡೋಣ.


ಉತ್ತರಪ್ರದೇಶದ ಪ್ರಸ್ತಾಪಿತ ಜನಸಂಖ್ಯಾ ನೀತಿ 2021:

ಜನರು ಒಪ್ಪಿಕೊಳ್ಳುವ ಮಾದರಿಯ ಅಂಶಗಳು:

- ಎರಡು ಅಥವಾ ಎರಡಕ್ಕಿಂತ ಕಡಿಮೆ ಮಕ್ಕಳಿರುವ ದಂಪತಿಗಳು ಸರ್ಕಾರಿ ನೌಕರರಾಗಿದ್ದು ಸಂತಾನ ಹರಣ ಮಾಡಿಸಿಕೊಂಡಿದ್ದರೆ ಅವರಿಗೆ ಬಡ್ತಿ ಮತ್ತು ಸೇವಾ ಅವಧಿಯಲ್ಲಿ ಎರಡು ಇನ್ಕ್ರಿಮೆಂಟ್ ಮತ್ತಿತರ ಸೌಕರ್ಯಗಳನ್ನು ನೀಡಲಾಗುವುದು. ಈ ನೀತಿಯನ್ನು ಪಾಲಿಸದಿರುವವರಿಗೆ ಸರಕಾರಿ ನೌಕರಿ ದೊರೆಯುವುದಿಲ್ಲ. ಮತ್ತು ಈಗಾಗಲೇ ಸರಕಾರಿ ನೌಕರದಾರರಾಗಿದ್ದರೆ ಅವರಿಗೆ ಬಡ್ತಿ ದೊರೆಯುವುದಿಲ್ಲ.
- ಸರ್ಕಾರೀ ನೌಕರಿಯಲ್ಲಿಲ್ಲದಿದ್ದವರಾಗಿದ್ದು ಈ ನೀತಿಯನ್ನು ಪಾಲಿಸುವವರಿಗೆ ವಿದ್ಯುತ್ ಬಿಲ್ ಪಾವತಿಯಲ್ಲಿ ರಿಯಾಯಿತಿ ನೀಡಲಾಗುವುದು. ಗೃಹ ಸಾಲ, ಮನೆ ತೆರಿಗೆಗಳಲ್ಲಿ ರಿಯಾಯಿತಿ ನೀಡಲಾಗುವುದು.
- ಗೃಹ ನಿರ್ಮಾಣಕ್ಕೆ ಸುಲಭ ಬಡ್ಡಿಯ ದರದಲ್ಲಿ ಸಾಲ ನೀಡಲಾಗುವುದು.
- ಭೂಮಿ, ಕಟ್ಟಡ ಗಳ ಖರೀದಿಗೆ ಸಬ್ಸಿಡಿ ನೀಡಲಾಗುವುದು.
- ಮಹಿಳಾ ಸರಕಾರಿ ನೌಕರರಿಗೆ 12 ತಿಂಗಳ ವೇತನ ಸಹಿತ ಹೆರಿಗೆ ರಜಾ ನೀಡಲಾಗುವುದು.
- ನಿವೃತ್ತಿ ವೇತನ ಪಾಲಿಸಿಯಲ್ಲಿ ಆಡಳಿತ ಮಂಡಳಿಯ ಪಾಲನ್ನು 3% ಏರಿಸಲಾಗುವುದು.
- ಬಡತನ ರೇಖೆಯ ಕೆಳಗಿರುವ ವಿಭಾಗಕ್ಕೆ ಸೇರಿದ ದಂಪತಿಗಳಿಗೆ ಕೂಡಾ ಆಕರ್ಷಕ ಪ್ರೋತ್ಸಾಹಕರ ಯೋಜನೆಗಳನ್ನು ಜಾರಿ ಮಾಡಲಾಗುವುದು.
- ಉಚಿತ ಆರೋಗ್ಯ ಸೇವೆಯ ಸೌಲಭ್ಯ.
- ಪತಿ/ಪತ್ನಿ ಗೆ ವಿಮಾ ಸೌಲಭ್ಯ.
- ಗಂಡು ಮಗುವಿಗೆ 80 ಸಾವಿರ ರೂ. ಹೆಣ್ಣು ಮಗುವಿಗೆ ರೂ. 1 ಲಕ್ಷ ನೀಡಲಾಗುವುದು.

ಈ ಮಾದರಿಯ ಮಾಹಿತಿಗಳನ್ನು ನೋಡಿದಾಗ ಯಾರಿಗಾದರೂ ಹೌದಲ್ಲ, ಇದರಲ್ಲಿ ಏನು ತಪ್ಪಿದೆ ಎನಿಸುವುದು ತೀರಾ ಸಹಜ. ಯಾಕೆಂದರೆ ನಮ್ಮ ದೇಶದದಲ್ಲಿ ಸಂಪತ್ತಿನ ಅಸಮಾನ ಹಂಚಿಕೆ ಸಹಜ ಎನ್ನುವ ಮನೋಭಾವವನ್ನು ರೂಢಿಸಿಡಲಾಗಿದೆ. ಜೊತೆಗೆ ನಿಜವಾದ ಸರ್ವಾಂಗೀಣ ಅಭಿವೃದ್ದಿಗೆ ಸದ್ಬಳಕೆ ಮಾಡಿಕೊಳ್ಳಬಹುದಾದ ಮಾನವ ಸಂಪನ್ಮೂಲವನ್ನು ದೋಷಪೂರಿತವಾಗಿ ಜನಸಂಖ್ಯೆಯಾಗಿ ಗುರುತಿಸುವ ಕ್ರಮವಿದೆ. ಆದರೆ ನಿಜವಾದ ಒಳಗಿನ ಮರ್ಮ ಮತ್ತು ರಾಜಕಾರಣದ ಸಂಚು ಹಾಗೂ ಈ ಮೊದಲೇ ಈ ರೀತಿಯ ಕ್ರಮಗಳನ್ನು ಸ್ಥಳೀಯ ಚುನಾವಣೆಯ ಸ್ಪರ್ಧೆಗೆ ಜಾರಿಗೆ ತಂದ ರಾಜ್ಯಗಳ ಅನುಭವಗಳು ನಮಗೆ ಬೇರೆಯೇ ಕಥೆ ಹೇಳುತ್ತವೆ. ಅಲ್ಲದೇ ದೇಶದ ವಿವಿಧ ಭಾಗಗಳ ಶಿಶು ಮರಣ ಪ್ರಮಾಣ ಮತ್ತು ಫಲವತ್ತತೆಯ ಪ್ರಮಾಣಗಳು ಈ ಅವಧಿಯಲ್ಲಿ ಹೇಗಿವೆ, ಅವುಗಳ ಪರಿಣಾಮ ಮುಂದಿನ ದಿನಗಳಲ್ಲಿ ಏನಾಗಬಹುದು ಎಂಬುದನ್ನೂ ಸಕಾರಣವಾಗಿಯೇ ಪರಿಗಣಿಸಬೇಕು. ಹಾಗೂ ಯಾವ ರಾಜ್ಯಗಳಲ್ಲಿ ಫಲವತ್ತತೆ ಅಥವಾ ಸಂತಾನೋತ್ಪತ್ತಿಯ ಪ್ರಮಾಣ ಹಿಗ್ಗಿದೆ ಅಥವಾ ಕುಗ್ಗಿದ ಪ್ರಮಾಣಕ್ಕೆ ಕಾರಣಗಳೇನು, ಅಗತ್ಯ ಪ್ರಮಾಣದಲ್ಲಿಯೇ ಉಳಿದಿದ್ದರೆ ಅದನ್ನು ಸಾಧಿಸಲು ಅನುಸರಿಸಿದ ಮಾರ್ಗಗಳೇನು ಎಂಬುದನ್ನು ಅರ್ಥ ಮಾಡಿಕೊಂಡರಷ್ಟೇ ಜನಸಂಖ್ಯೆಯನ್ನು ಜನ ಸಂಪನ್ಮೂಲವೆಂದು ಪರಿಗಣಿಸಬಹುದು.

ಈ ಪ್ರಸ್ತಾಪಿತ ಉತ್ತರ ಪ್ರದೇಶದ ಜನಸಂಖ್ಯಾ ನೀತಿ ಅಥವಾ ಕರ್ನಾಟಕದಲ್ಲಿಯೂ ತರುವ ಅಭಿಲಾಷೆ ವ್ಯಕ್ತಪಡಿಸಿರುವ ಇಬ್ಬರು ಬಿ.ಜೆ.ಪಿ ನಾಯಕರುಗಳ ಮಾತಿಗೆ ವ್ಯತಿರಿಕ್ತವಾಗಿ ಜನಸಂಖ್ಯೆ ಮತ್ತು ಅದರ ಹೆಚ್ಚಳ ವಿಷಯದಲ್ಲಿ ತಿಳಿದುಕೊಳ್ಳಬೇಕಾದ ಹಲವು ಸಂಗತಿಗಳಿವೆ.



ಕೃಪೆ: ಪಿ. ಮಹಮ್ಮದ್, ವಾ.ಭಾ.

ಟಿ.ಎಫ್.ಆರ್–ಮತ್ತು ಜನಸಂಖ್ಯಾ ಸ್ಫೋಟ ವಾದಗಳು:

ಸಾಮಾನ್ಯವಾಗಿ ಸಂಪೂರ್ಣ ಫಲವತ್ತತೆಯ ದರ (ಟಿ.ಎಫ್.ಆರ್ – ಟೋಟಲ್ ಫರ್ಟಿಲಿಟಿ ರೇಟ್)) 2 ಕ್ಕಿದ್ದರೆ ಅದನ್ನು ಸಮತೋಲಿತ ಎಂದು ಗುರುತಿಸಲಾಗುತ್ತದೆ. ಎಂದರೆ ತಂದೆ ತಾಯಿ ಅವರ ಸಂತಾನಗಳಾಗಿ ಎರಡು ಮಕ್ಕಳು ಎಂದರೆ ತಂದೆ ತಾಯಿಯ ಆಯಸ್ಸು ಮುಗಿದ ಮೇಲೆ ಅವರ ಸ್ಥಾನವನ್ನು ಭರ್ತಿ ಮಾಡಲು ಮಕ್ಕಳು ಎಂಬುದು ಅದರ ತಾತ್ಪರ್ಯ. ಆಗ ಹೆಚ್ಚೂ ಇರದೇ ಕಡಿಮೆಯೂ ಆಗದೇ ಸಮತೋಲಿತ ಸಂಖ್ಯೆಯಲ್ಲಿ ಸಮಾಜ ಮುನ್ನಡೆಯುತ್ತದೆ ಎಂಬುದು. ಸಾಮಾನ್ಯವಾಗಿ 2 ಕ್ಕೆ 2 ರ ಬದಲು 2.1 ಅಗತ್ಯ, ಯಾಕೆಂದರೆ ಯಾವುದೇ ಕಾರಣದಿಂದ ಆಗಬಹುದಾದ ಮರಣಗಳಿಂದ ಕುಸಿಯುವ, ಅಸಮಾನತೆಗೆ ಕಾರಣವಾಗುವುದನ್ನು ತಪ್ಪಿಸಲು ಎಂಬುದಕ್ಕಾಗಿ.

ಇತ್ತೀಚಿನ ಸಂಪೂರ್ಣ ಫಲವತ್ತತೆಯ ಪ್ರಮಾಣದ ಕುರಿತು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್.ಎಫ್.ಎಚ್.ಎಸ್) ವರದಿ ಬಹಳ ಸ್ಪಷ್ಟವಾಗಿ ಗುರುತಿಸಿದೆ. ಅದರ ಪ್ರಕಾರ 1994ರಲ್ಲಿ ರಾಷ್ಟ್ರೀಯ ಫಲವತ್ತತೆಯ ದರ 3.4 ಇದ್ದಿದ್ದು 2015 ರ ಹೊತ್ತಿಗೆ 2.2 ಕ್ಕೆ ಇಳಿದಿದೆ. ಅಲ್ಲದೇ ಸರಕಾರದ ಏಜೆನ್ಸಿಯಾಗಿಯೇ ಎನ್.ಎಫ್.ಎಚ್.ಎಸ್ ಗುರುತಿಸಿದಂತೆ ಇದು ಧರ್ಮ, ಕುಲ ಜಾತಿಗಳ ಬೇಧವಿಲ್ಲದೆಯೇ ಇಳಿಯುತ್ತಿದೆ. ಮತ್ತು ಮುಸ್ಲಿಂ ಜನಾಂಗದವರಲ್ಲಿ ಹಿಂದೂಗಳಿಗಿಂತಲೂ ಹೆಚ್ಚು ವೇಗವಾಗಿ ಟಿ.ಎಫ್.ಆರ್ ಪ್ರಮಾಣ ಕಡಿಮೆಯಾಗುತ್ತಿದೆ. ಅತಿ ಜನ ನಿಬಿಡ ಎಂದು ಕರೆಯಿಸಿಕೊಂಡಿರುವ ಉತ್ತರ ಪ್ರದೇಶದಲ್ಲಿ ಕೂಡಾ ಮೊದಲಿಗಿಂತ 1.1% ಇಳಿಕೆಯಾಗಿ ಈಗ 2.7%ಗೆ ಬಂದಿದೆ. ಇದು ಸರಕಾರದ ಯಾವ ನಿರ್ಬಂಧಗಳನ್ನು ಹೇರದೆಯೂ ಆಗಿರುವ ಇಳಿಕೆಯಾಗಿರುವಾಗ ಸರಕಾರ ಈಗ ಅದೂ ಕೆಲವು ತಿಂಗಳುಗಳಲ್ಲಿ ಚುನಾವಣೆಗೆ ಹೋಗುವ ಮುನ್ನ ಇಂಥಹ ಕ್ರಮಕ್ಕೆ ಮುಂದಾಗಿರುವುದರಲ್ಲಿ ಕೊಳಕು ರಾಜಕೀಯ ವಾಸನೆ ಬಡಿಯುವುದಿಲ್ಲವೇ? ಅವರ ಗುರಿ ನೇರವಾಗಿ ಮತಗಳ ಧ್ರುವೀಕರಣದತ್ತ ಇದೆ.

ಜನಸಂಖ್ಯಾ ನಿಯಂತ್ರಣದ ನಿಜ ಮಾರ್ಗಗಳು:

ಇನ್ನು ದೇಶದ ದಕ್ಷಿಣ ರಾಜ್ಯಗಳಲ್ಲಿ ಉತ್ತರದ ರಾಜ್ಯಗಳಿಗಿಂತ ಉತ್ತಮ ಬೆಳವಣಿಗೆ ಇದೆ ಎಂದು ಗುರುತಿಸಲಾಗುತ್ತಿದೆ. ಅದಕ್ಕೆ ಕಾರಣ ಆ ಭಾಗಗಳಿಗೆ ಹೋಲಿಸಿದರೆ ಶಿಕ್ಷಣ, ಆರೋಗ್ಯ ಮತ್ತು ಕ್ವಚಿತ್ ಅಭಿವೃದ್ಧಿಯ ಕ್ರಮಗಳೇ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಉದಾಹರಣೆಗೆ ಕೇರಳ ರಾಜ್ಯದ ಅಂಶಗಳನ್ನು ಪರಿಶೀಲಿಸಿದರೆ.

ಕೇರಳದಲ್ಲಿ 99.4% ಹೆರಿಗೆಗಳು ಪ್ರಸೂತಿ ಗೃಹ, ಆಸ್ಪತ್ರೆಗಳಲ್ಲಿ ನಡೆಯುತ್ತಿದ್ದರೆ ಉತ್ತರ ಪ್ರದೇಶದಲ್ಲಿ ಇದು 69%. ಸಾಧಾರಣವಾಗಿ ನುರಿತ, ತಜ್ಞ ವೈದ್ಯರು, ದಾದಿಯರು ಸೌಲಭ್ಯಗಳ ಮೂಲಕ ನಡೆಯುವ ಹೆರಿಗೆಗಳಲ್ಲಿ ಮಾತೃ ಮರಣ ಹಾಗೂ ಶಿಶು ಮರಣ ಪ್ರಮಾಣಗಳು ಕಡಿಮೆ ಇರುತ್ತವೆ. ಕೇರಳದ ಶಿಶು ಮರಣ ಪ್ರಮಾಣ 1000 ಹೆರಿಗೆಗೆ 10, ಆದರೆ ಉತ್ತರ ಪ್ರದೇಶ 43, ಕರ್ನಾಟಕ 24 ಎನ್ನುತ್ತವೆ ಲಭ್ಯ 2016 ರ ಅಂಕಿ ಅಂಶಗಳು.

ಮಹಿಳಾ ಶಿಕ್ಷಣದಲ್ಲಿ ಕೂಡಾ ಕೇರಳ 95.2% ಉತ್ತರ ಪ್ರದೇಶ 63.4% ಕರ್ನಾಟಕ 68.8% ಎಂದು ಲಭ್ಯ ಅಂಕಿ ಅಂಶಗಳು ಹೇಳುತ್ತವೆ. (ಸಾಕ್ಷರತೆ ಎಂದರೆ ಕೇವಲ ಸಹಿ ಮಾಡಲು ಬರುವುದನ್ನೂ ಪರಿಗಣಿಸಲಾಗುತ್ತದೆ ಎಂಬುದೂ ಸತ್ಯವೇ). ಇದಕ್ಕೆ ಹೊಂದಿಕೊಂಡಂತೆಯೇ ಇರಬಹುದಾದ ಅಂಶ ಜನಸಂಖ್ಯೆ ಅಥವಾ ಸಂತಾನೋತ್ಪತ್ತಿ– ಫಲವತ್ತತೆಯ ಪ್ರಮಾಣ. ಅದಕ್ಕೆ ಸಾಕ್ಷಿ ಕೇರಳದ ಟಿ.ಎಫ್.ಆರ್ 1.8%, ಉತ್ತರ ಪ್ರದೇಶದ ಟಿ.ಎಫ್.ಆರ್ 2.7%. ಇಲ್ಲಿ 2016ರಲ್ಲಿ 3.1 ಇತ್ತೆಂದು ಅಂಕಿ ಸಂಕಿಗಳು ಹೇಳುತ್ತವೆ. ಕರ್ನಾಟಕ 1.8%, ಲಭ್ಯ ವಿವರಗಳ ಆಧಾರದಲ್ಲಿ ಜಮ್ಮು ಕಾಶ್ಮೀರ 1.7%!

ಜನಸಂಖ್ಯಾ ನೀತಿಯಲ್ಲಿ ಉತ್ತರಪ್ರದೇಶ ಸರಕಾರ ಉಳಿದೆಲ್ಲ ಪ್ಯಾರಾಮೀಟರ್ ಗಳನ್ನು ಸರಿಪಡಿಸುವುದಾಗಿ ಹೇಳಿಕೊಂಡಿದೆಯಾದರೂ ಈ ನೀತಿಯ ಜಾರಿ ಆಕ್ಷೇಪಾರ್ಹವಾದುದು ಎನ್ನುವುದಕ್ಕೆ ಹಲವು ಕಾರಣಗಳಿವೆ. ತನ್ನ ಕಾರ್ಯವೈಖರಿಯ ವೈಫಲ್ಯವನ್ನು ಮುಚ್ಚಿಕೊಳ್ಳಲು ಇಂಥಹ ಕ್ರಮಗಳಿಗೆ ಯು.ಪಿ. ರಾಜ್ಯ ಸರಕಾರ ಮುಂದಾಗಿದೆ ಮತ್ತು ಸಾಮಾಜಿಕವಾಗಿ ಹಿಂದುಳಿದ ಮತ್ತು ಆರ್ಥಿಕವಾಗಿ ಬಡತನದಲ್ಲಿರುವ ಜನರ ಮೇಲೆ ಇದು ಮಹಾ ಅಸ್ತ್ರವಾಗಲಿದೆ. ಜೊತೆಗೆ ಮಹಿಳೆಯರ ಮೇಲೆ ಬ್ರಹ್ಮಾಸ್ತ್ರವಾಗಲಿರುವ ಈ ನೀತಿ ಮುಂದಿನ ದಿನಗಳಲ್ಲಿ ತೀವ್ರ ಅಸಮಾನತೆಯನ್ನು, ಹೆಚ್ಚಿನ ದೌರ್ಜನ್ಯವನ್ನೂ ನೋಡುವಂತೆ ಮಾಡುವುದರಲ್ಲಿ ಸಂಶಯವೇ ಇಲ್ಲ.

ಲಿಂಗಾನುಪಾತ–ಹೊಸ ನೀತಿಯ ಪರಿಣಾಮ:

ಉತ್ತರ ಪ್ರದೇಶದಲ್ಲಿ ಲಿಂಗಾನುಪಾತ ಕೂಡಾ ತೀವ್ರ ಅಸಮಾನವಾಗಿದೆ. ದೇಶದ ಲಿಂಗಾನುಪಾತ 1000 ಕ್ಕೆ 943 ಹೆಣ್ಣು ಮಕ್ಕಳೆಂದು 2011 ರ ಸೆನ್ಸ್‌ಸ್ ಹೇಳುತ್ತದೆ. ಕೇರಳದಲ್ಲಿ 1000–1084 ಇದ್ದರೆ ಉತ್ತರ ಪ್ರದೇಶದಲ್ಲಿ 879 ಕರ್ನಾಟಕ 973. ಇದರ ಪ್ರಕಾರ ಕೂಡಾ ಅಭಿವೃದ್ದಿಯ ನಿಜವಾದ ಮಾರ್ಗಸೂಚಿ ಎಲ್ಲಿ ಹಳಿ ತಪ್ಪುತ್ತಿದೆ ಎಂಬುದನ್ನು ನೋಡಬೇಕು. ಉತ್ತರ ಪ್ರದೇಶದಂಥಹ ರಾಜ್ಯಗಳನ್ನೂ ಒಳಗೊಂಡಂತೆ ದೇಶದ ಹಲವಾರು ರಾಜ್ಯಗಳಲ್ಲಿ ಲಿಂಗಾನುಪಾತ ಇಳಿಕೆಯ ಕುರಿತು ದೊಡ್ಡ ಚರ್ಚೆಗಳು ನಡೆಯುತ್ತಿವೆ. ಆದರೆ ಪುತ್ರ ಶ್ರೇಷ್ಠತೆಯ ಮನೋಭಾವದಿಂದ ಸಮಾಜವನ್ನು ಮುಕ್ತಗೊಳಿಸಲು ಬೇಕಾದ ಕ್ರಮಗಳನ್ನು ಬಹತೇಕ ರಾಜ್ಯ ಸರ್ಕಾರಗಳು ಕೈಗೊಳ್ಳದೆಯೆ ಕೇವಲ ಬಾಹ್ಯೋಪಚಾರದ ಮಾತುಗಳನ್ನಾಡುತ್ತಿರುವುದರಿಂದ ಮತ್ತು ಸ್ವತಃ ಅಧಿಕಾರದಲ್ಲಿರುವವರೇ ಲಿಂಗ ಅಸಮಾನತೆಯನ್ನು ಪೋಷಿಸುವ ಹಲವು ಕೆಲಸಗಳಲ್ಲಿ ತೊಡಗುವುದರಿಂದ ಲಿಂಗಾನುಪಾತ ಸರಿಪಡಿಸುವಿಕೆ ಸುಲಭವಲ್ಲ.

ಅಂಥಹ ಕ್ರಮದ ಬದಲು ಮುಂದಿನ ವರ್ಷದ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಉತ್ತರ ಪ್ರದೇಶ ಸರಕಾರ ಪ್ರಸ್ತಾಪಿಸಿದ ಈ ನೀತಿ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುತ್ತದೆ. ಈಗಿರುವ ಲಿಂಗಾನುಪಾತದಿಂದಲೇ ಗೊತ್ತಾಗುವಂತೆ ಲಿಂಗಾಧಾರಿತ ಭ್ರೂಣ ಹತ್ಯೆಗಳು ನಿಷೇಧವಿರುವಾಗಲೂ ಎಗ್ಗ

ಪುಟ 12 ಕ್ಕೆ

ಚೀನಾ ಕಮ್ಯುನಿಸ್ಟ್ ಪಕ್ಷದ ಇತಿಹಾಸ ಹಂತ–3

ಸಮಾಜವಾದಿ ಸಮಾಜ ಕಟ್ಟುವತ್ತ

ಇದೇ ಜುಲೈ 1 ರಂದು ಚೀನಾದ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾಗಿ ನೂರು ವರ್ಷಗಳು ಸಂದಿವೆ. ಚೀನಾದಾದ್ಯಂತ ಇದನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಅತ್ಯಂತ ಅವಮಾನಕರ ದುರ್ಭರ ಸ್ಥಿತಿಯಲ್ಲಿ ಜೀವಿಸುತ್ತಿದ್ದ ಚೀನಾದ ಜನತೆಯ ನಾಯಕನಾಗಿ ಈ ನೂರು ವರ್ಷಗಳಲ್ಲಿ, ಕಡು ಬಡತನ ನಿರ್ಮೂಲನ ಮಾಡಿ ಎಲ್ಲರಿಗೂ ಸಾಕಷ್ಟು ನೆಮ್ಮದಿಯ ಜೀವನ ಮಟ್ಟ ಒದಗಿಸಿದ, ಸಮೃದ್ಧವಾದ ಮತ್ತು ಎರಡನೆಯ ಅತಿ ದೊಡ್ಡ ಆರ್ಥಿಕತೆ ಉಳ್ಳ ದೇಶವಾಗಿಸಿದ ಈ ಸಂದರ್ಭದಲ್ಲಿ, ಈ ಪಕ್ಷದ ಇತಿಹಾಸ ಅರಿತುಕೊಳ್ಳುವುದು ಅಗತ್ಯ. ಚೀನಾ ಕಮ್ಯುನಿಸ್ಟ್ ಪಕ್ಷದ ಇತಿಹಾಸವನ್ನು ಸಾಮಾನ್ಯವಾಗಿ ನಾಲ್ಕು ಹಂತಗಳಾಗಿ ವಿಂಗಡಿಸಲಾಗುತ್ತದೆ. 1921–1934ರ ಮೊದಲ ಹಂತ ಪಕ್ಷ ಚೀನಾದ ಜನತೆಯ ನಾಯಕನಾಗಲು ಆಶಾದೀಪವಾಗಲು ನಡೆಸಿದ ಹಲವು ಪ್ರಯೋಗಗಳ ಏಳು–ಬೀಳುಗಳ ದೀರ್ಘ ಪಯಣದ ಹಂತ. ಎರಡನೆಯ ಹಂತ ಚೀನಾದ ಜನತೆಯ ಮನಗಳನ್ನು ಗೆದ್ದ ಪಕ್ಷವು, ಗಂಭೀರವಾಗಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಸಾಗಿದ 1935–1949ರ ಅವಧಿ. ಕ್ರಾಂತಿಯ ನಂತರ ಸಮಾಜವಾದಿ ಸಮಾಜ ಕಟ್ಟುವತ್ತ ಹಲವು ಪ್ರಯೋಗಗಳಲ್ಲಿ ಕೆಲವು ಬಾರಿ ದಾರಿ ತಪ್ಪಿ ಅದನ್ನು ಸರಿಪಡಿಸಿಕೊಂಡು ಮುನ್ನಡೆದ 1950–1978ರ ಮೂರನೆಯ ಹಂತ. ಹಿಂದಿನ ಪ್ರಮಾದಗಳನ್ನು ಸರಿಪಡಿಸಿಕೊಂಡು ಆಧುನಿಕ ಸಮೃದ್ಧ ಸಮಾಜ ಕಟ್ಟುವುದರಲ್ಲಿ ಗಮನಾರ್ಹ ಯಶಸ್ಸು ಗಳಿಸಿದ 1979–2021ರ ನಾಲ್ಕನೆಯ ಹಂತ. ಈ ನಾಲ್ಕು ಹಂತಗಳಲ್ಲಿ ಪಕ್ಷದ ಇತಿಹಾಸವನ್ನು ಸ್ಥೂಲವಾಗಿ ಈ ಲೇಖನ ಸರಣಿಯಲ್ಲಿ ಕೊಡಲಾಗುವುದು. ಮೊದಲ ಮತ್ತು ಎರಡನೆಯ ಹಂತದ ಇತಿಹಾಸದ ಸ್ಥೂಲ ನಿರೂಪಣೆಯನ್ನು ಕಳೆದ ಎರಡು ಸಂಚಿಕೆಗಳಲ್ಲಿ ಕೊಡಲಾಗಿದೆ. ಮೂರನೆಯ ಹಂತದ ನಿರೂಪಣೆ ಇಲ್ಲಿದೆ.
(ಮುಂದಿನ ವಾರ :ನಾಲ್ಕನೆಯ ಹಂತ–ಆಧುನಿಕ ಸಮೃದ್ಧ ಸಮಸಮಾಜ ಕಟ್ಟುವತ್ತ)



ಸಾಂಸ್ಕೃತಿಕ ಕ್ರಾಂತಿ – ಪೋಸ್ಟರ್

ಮೂಲ: ಆರ್. ಅರುಣ ಕುಮಾರ್ ಅನುವಾದ: ಎಸ್.ಕೆ. ರಾಮು

ಚೀನಾದ ಜನತಾ ಗಣರಾಜ್ಯದ (ಪಿ.ಆರ್.ಸಿ – ಪೀಪಲ್ಸ್ ರಿಪಬ್ಲಿಕ್) ರಚನೆಯು ಮಾನವ ಇತಿಹಾಸದಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಿತು, ವಿಶ್ವದ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವು ಸಮಾಜವಾದದ ನಿರ್ಮಾಣಕ್ಕೆ ಕೈಹಾಕಿತು. ದೇಶವು ಅಗಾಧವಾದ ಹಣಕಾಸು ಮತ್ತು ಆರ್ಥಿಕ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಕೃಷಿ ಮತ್ತು ಕೈಗಾರಿಕಾ ಉತ್ಪಾದಕತೆ ಕಡಿಮೆ ಇತ್ತು.

ಕಮ್ಯುನಿಸ್ಟ್ ಪಕ್ಷ (ಸಿಪಿಸಿ) ಎಲ್ಲಾ ರೀತಿಯ ದಬ್ಬಾಳಿಕೆಯನ್ನು ತೊಡೆದುಹಾಕಲು ಹಲವಾರು ಕ್ರಮಗಳನ್ನು ಜಾರಿಗೆ ತಂದಿತು. ಸಿಪಿಸಿ ನೇತೃತ್ವದ ಪೀಪಲ್ಸ್ ಲಿಬರೇಶನ್ ಆರ್ಮಿ (ಪಿ.ಎಲ್.ಎ) ದೇಶದ ಒಟ್ಟು ಕೈಗಾರಿಕಾ ಸ್ಥಿರ ಆಸ್ತಿಗಳ ಶೇಕಡಾ 80 ರಷ್ಟು ಮುಟ್ಟುಗೋಲು ಹಾಕಿಕೊಂಡಿತು ಮತ್ತು ಸರ್ಕಾರಿ ಸ್ವಾಮ್ಯದ ಉದ್ಯಮಗಳನ್ನು ಸ್ಥಾಪಿಸಿತು. ಭೂ ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಕೈಗಾರಿಕೀಕರಣ ಮತ್ತು ಅಭಿವೃದ್ಧಿಯ ಚೀನಾದ ಪ್ರಕ್ರಿಯೆಗೆ ಸಹಾಯ ಮಾಡಲು ಸೋವಿಯತ್ ಒಕ್ಕೂಟವು ಕೂಡಲೇ ಒಪ್ಪಿಕೊಂಡಿತು.

ಸಮಾಜವಾದದ ಚೌಕಟ್ಟಿನ ಸ್ಥಾಪನೆ

ಈ ಆರ್ಥಿಕ ಸವಾಲುಗಳನ್ನು ಎದುರಿಸುವುದರ ಹೊರತಾಗಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಗತಿಯ ಕಾರ್ಯವನ್ನೂ ಸಿಪಿಸಿ ವಹಿಸಿಕೊಂಡಿತು. ಊಳಿಗಮಾನ್ಯ ಪದ್ಧತಿಗಳ ವಿರುದ್ಧ ಅಭಿಯಾನವನ್ನು ಪ್ರಾರಂಭಿಸಲಾಯಿತು. ಮಹಿಳೆಯರಿಗೆ ಸಮಾನತೆಯನ್ನು ನೀಡುವ ಮತ್ತು ಬಲವಂತದ ವಿವಾಹ ವ್ಯವಸ್ಥೆಯನ್ನು ರದ್ದುಗೊಳಿಸುವ ಕಾನೂನುಗಳನ್ನು ಅಂಗೀಕರಿಸಲಾಯಿತು.

1950 ರಲ್ಲಿ ಕೊರಿಯಾದ ಮೇಲೆ ಯು.ಎಸ್ ಆಕ್ರಮಣ ಮಾಡಿದ ನಂತರ, ಕೊರಿಯಾದ ಪ್ರತಿರೋಧ ಹೋರಾಟಗಾರರ ಕೋರಿಕೆಯ ಮೇರೆಗೆ ಸಿಪಿಸಿ ತನ್ನ ಸ್ವಯಂಸೇವಕ ಪಡೆಗಳನ್ನು ಕಳುಹಿಸಿತು. ಚೀನಾದೊಳಗೆ, ಸಿಪಿಸಿ, ಯುಎಸ್ ಸಾಮ್ರಾಜ್ಯಶಾಹಿಯ ವಿರುದ್ಧ ವ್ಯಾಪಕ ಪ್ರಚಾರ ಮತ್ತು ಶಿಕ್ಷಣ ಅಭಿಯಾನವನ್ನು ನಡೆಸಿತು. ಪ್ರತಿ–ಕ್ರಾಂತಿಕಾರಿಗಳ ನಿಗ್ರಹ, ಭೂ ಸುಧಾರಣೆ, ನಗರ ಪ್ರದೇಶಗಳಲ್ಲಿನ ಕೆಲಸ, ಪಕ್ಷ ಕಟ್ಟುವ ಮತ್ತು ತಿದ್ದುಪಡಿ ಆಂದೋಲನವನ್ನು ಏಕಕಾಲದಲ್ಲಿ ನಡೆಸಲಾಯಿತು. ಪಕ್ಷದ ಎಲ್ಲಾ ಸದಸ್ಯರಿಗೆ ಶಿಕ್ಷಣ ನೀಡಲು ಮತ್ತು ಅವರನ್ನು ಸೈದ್ಧಾಂತಿಕವಾಗಿ ಮತ್ತು ಸಾಂಸ್ಥಿಕವಾಗಿ ಸಜ್ಜುಗೊಳಿಸಲು ವ್ಯವಸ್ಥಿತ ಅಭಿಯಾನವನ್ನು ಪ್ರಾರಂಭಿಸಲಾಯಿತು. ಭ್ರಷ್ಟ, ಚರಿತ್ರಹೀನ, ಅಧಿಕಾರಶಾಹಿ, ಸೊಕ್ಕಿನ, ಅಸಮರ್ಥ ಸದಸ್ಯರನ್ನು ಗುರುತಿಸಿ ತೆಗೆದುಹಾಕಲಾಯಿತು. ಈ ಅಭಿಯಾನವನ್ನು ಎಲ್ಲಾ ಬುದ್ಧಿಜೀವಿಗಳು, ಕಲಾವಿದರು ಮತ್ತು ಬರಹಗಾರರಿಗೂ ಕ್ರಮೇಣ ವಿಸ್ತರಿಸಲಾಯಿತು ಮತ್ತು 1952 ರಲ್ಲಿ ಪೂರ್ಣಗೊಂಡಿತು.

ಲಂಚ, ತೆರಿಗೆ ವಂಚನೆ, ಸರ್ಕಾರದ ಆಸ್ತಿ ಕಳ್ಳತನ ಮತ್ತು ಸರ್ಕಾರಕ್ಕೆ ಮೋಸ ಮಾಡುವ ಮೂಲಕ ಕಾನೂನು ಉಲ್ಲಂಘಿಸುತ್ತಿದ್ದ ಬಂಡವಾಳಶಾಹಿಗಳ ವಿರುದ್ಧ ಸಿಪಿಸಿ ನಗರ ಪ್ರದೇಶಗಳಲ್ಲಿ ಆಂದೋಲನವನ್ನು ಪ್ರಾರಂಭಿಸಿತು. ಪಿ.ಆರ್.ಸಿ ಯಲ್ಲಿ ಖಾಸಗಿ ಉದ್ಯಮದ ಪಾತ್ರವನ್ನು ವಿವರಿಸಲಾಯಿತು ಮತ್ತು ಉದ್ಯಮಿಗಳನ್ನು ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕೇಳಲಾಯಿತು. ಉದ್ಯಮಗಳ ಪ್ರಜಾಪ್ರಭುತ್ವೀಕರಣ ಮತ್ತು ನಿರ್ವಹಣೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆಯನ್ನು ಉತ್ತೇಜಿಸಲಾಯಿತು.

ಅಲ್ಪಸಂಖ್ಯಾಕರಾಷ್ಟ್ರೀಯತೆಗಳ ನಾಗರಿಕರಿಗೆ ಪ್ರಾದೇಶಿಕ ಸ್ವಾಯತ್ತತೆಯನ್ನು ಕಾನೂನಿನಿಂದ ಖಾತರಿ ಪಡಿಸಲಾಯಿತು. ಮಾರ್ಕ್ಸ್‌ವಾದಿ–ಲೆನಿನ್‌ವಾದಿ ತಿಳುವಳಿಕೆಯನ್ನು ಅನ್ವಯಿಸಿ, ಸಿಪಿಸಿ ರಾಷ್ಟ್ರೀಯತೆಗಳ ಪ್ರಶ್ನೆಯನ್ನು ಪರಿಹರಿಸುವ ಮತ್ತು ರಾಷ್ಟ್ರೀಯ ಏಕತೆಯನ್ನು ಬಲಪಡಿಸುವತ್ತ ಸಾಗಿತು. ಅಲ್ಪಸಂಖ್ಯಾತ ರಾಷ್ಟ್ರೀಯತೆಗಳ ಪ್ರದೇಶಗಳಲ್ಲಿ ಊಳಿಗಮಾನ ಪದ್ಧತಿಯನ್ನು ತೊಡೆದುಹಾಕಲು ಊಳಿಗಮಾನ್ಯ ಪ್ರಭುಗಳ ವಿರುದ್ಧದ ಕ್ರಮಗಳು ಬಡವರ ಬೆಂಬಲವನ್ನು ಗಳಿಸಿದವು.



ಚೀನಾದ ಮೊದಲ ಪಂಚವಾರ್ಷಿಕ ಯೋಜನೆ – 1952 ಪೋಸ್ಟರ್

ಯೋಜಿತ ಬೆಳವಣಿಗೆ


1953 ರಿಂದ ಪ್ರಾರಂಭವಾದ ಮೊದಲ ಪಂಚವಾರ್ಷಿಕ ಯೋಜನೆ, ಸಮಾಜವಾದಿ ಕೈಗಾರಿಕೀಕರಣಕ್ಕೆ ಪ್ರಾಥಮಿಕ ನೆಲೆಯನ್ನು ಹಾಕಿತು. ಇದು ಬಂಡವಾಳಶಾಹಿ ಉದ್ಯಮ ಮತ್ತು ವಾಣಿಜ್ಯವನ್ನು ಪ್ರಭುತ್ವ ಬಂಡವಾಳಶಾಹಿಯ ವಿವಿಧ ರೂಪಗಳಲ್ಲಿ ಸಂಯೋಜಿಸಲು ಮತ್ತು ಸಮಾಜವಾದಿ ಪರಿವರ್ತನೆಗೆ ಸಿದ್ಧವಾಗಲು ಉದ್ದೇಶಿಸಿತ್ತು.

ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು ಪ್ರಮುಖವಾದ ಕಾರ್ಯಕ್ರಮವೆಂದು ಗುರುತಿಸಲಾಗಿತ್ತು. ಕೃಷಿಯಲ್ಲಿ ಪರಸ್ಪರ ನೆರವು ಮತ್ತು ಸಹಕಾರಕ್ಕಾಗಿ ಆಂದೋಲನವನ್ನು ಉತ್ತೇಜಿಸಲು ಮತ್ತು ಅರೆ–ಸಮಾಜವಾದಿ, ಪ್ರಾಥಮಿಕ ಕೃಷಿ ಉತ್ಪಾದಕರ ಸಹಕಾರಿ ಸಂಸ್ಥೆಗಳ ಸ್ಥಾಪನೆಗೆ ಸಿಪಿಸಿ ನಿರ್ಧರಿಸಿತು. ಸ್ವಂತವಾಗಿ ಕೆಲಸ ಮಾಡುವ ರೈತರ ಹಿತಾಸಕ್ತಿಗಳನ್ನು ಕಾಪಾಡಲು ಮತ್ತು ಉತ್ಪಾದಕ ಶಕ್ತಿಗಳನ್ನು

ಪುಟ 10 ಕ್ಕೆ



ಮಹಾ ಮುನ್ನೆಗೆತ (ಗ್ರೇಟ್ ಲೀಪ್ ಫಾರ್ವರ್ಡ್)–ಪೋಸ್ಟರ್



ಹಿತ್ತಲ ಕಬ್ಬಿಣದ ಕುಲುಮೆ ಗೆ ಮಾವೋ ಭೇಟಿ – ಪೋಸ್ಟರ್ (ಸೋವಿಯೆಟ್ ತಾಂತ್ರಿಕ ನೆರವು ನಿಂತಾಗ ಸ್ವಾವಲಂಬಿ ಸಣ್ಣ ಪ್ರಮಾಣದ ತಂತ್ರಜ್ಞಾನದ ಪ್ರಯೋಗ)

ಸಮಾಜವಾದಿ ಸಮಾಜ ಕಟ್ಟುವತ್ತ.........

ಪುಟ 9 ರಿಂದ

ಅಭಿವೃದ್ಧಿಪಡಿಸುವ ಅಗತ್ಯತೆಗಳನ್ನು ಪೂರೈಸಲು ಉತ್ಪಾದನೆಯ ಸಂಬಂಧಗಳು ಬದಲಾಗುವಂತೆ ನೋಡಿಕೊಳ್ಳಬೇಕು ಎಂದು ಅದು ಒತ್ತಿಹೇಳಿತು.

1954 ರಲ್ಲಿ, ಪಿ.ಆರ್.ಸಿ. ಯ ಸಮಾಜವಾದಿ ಸಂವಿಧಾನವನ್ನು ಅಂಗೀಕರಿಸಲಾಯಿತು ಮತ್ತು ಖಾಸಗಿ ಬಂಡವಾಳಶಾಹಿ ಉದ್ಯಮಗಳನ್ನು ಜಂಟಿ ಪ್ರಭುತ್ವ–ಖಾಸಗಿ ಉದ್ಯಮಗಳಾಗಿ ಪರಿವರ್ತಿಸುವ ಬಗ್ಗೆ ಕಾನೂನು ಜಾರಿಗೆ ಬಂದಿತು, ಅಲ್ಲಿ ಸಮಾಜವಾದಿ ಅಂಶವು ಪ್ರಧಾನವಾಗಿತ್ತು. ಕ್ರಾಂತಿಯ ನಂತರದ ಮೊದಲ ದಶಕದಲ್ಲಿ ಉದ್ಯಮವನ್ನು ನಿರ್ಮಿಸುವುದು, ಕೃಷಿಯನ್ನು ಅಭಿವೃದ್ಧಿಪಡಿಸುವುದು ಮತ್ತು ಜನರ ಜೀವನ ಮಟ್ಟವನ್ನು ಹೆಚ್ಚಿಸುವಲ್ಲಿ ಸ್ಥಿರವಾದ ಪ್ರಗತಿಯನ್ನು ಕಂಡಿತು.

ದೇಶಾದ್ಯಂತ ಶಾಲೆಗಳನ್ನು ಸ್ಥಾಪಿಸುವ ಮೂಲಕ ಅನಕ್ಷರತೆಯನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಯಿತು. ಒಂದು ದಶಕದೊಳಗೆ (1949–59), ಯುವಕರು ಮತ್ತು ವಯಸ್ಕರಲ್ಲಿ (12 ರಿಂದ 40 ವರ್ಷ ವಯಸ್ಸಿನವರು) ಅನಕ್ಷರತೆ ಪ್ರಮಾಣವು ಶೇಕಡಾ 80 ರಿಂದ 43ಕ್ಕೆ ಇಳಿಯಿತು. 'ತಡೆಗಟ್ಟುವಿಕೆ ಮೊದಲು' ನೀತಿಯಡಿಯಲ್ಲಿ, ಪ್ರಾಥಮಿಕ ಆರೋಗ್ಯ ಸಂಸ್ಥೆಗಳನ್ನು ಬಲಪಡಿಸುವ ಮೂಲಕ ಮತ್ತು ಆರೋಗ್ಯದಲ್ಲಿ ದೊಡ್ಡ ಪ್ರಮಾಣದ ಸಾಮೂಹಿಕ ಆಂದೋಲನವನ್ನು ನಡೆಸುವ ಮೂಲಕ ಚೀನಾದ ಸಾರ್ವಜನಿಕ ಆರೋಗ್ಯ ಕ್ಷೇತ್ರವು ವೇಗವಾಗಿ ಬೆಳೆಯಿತು. ನ್ಯಾಯಸಮ್ಮತದ ಸುಲಭದಲ್ಲಿ ಪಡೆಯಬಹುದಾದ ಕಡಿಮೆ ವೆಚ್ಚದ ಸಾರ್ವಜನಿಕ ಆರೋಗ್ಯ ಸೇವೆಗಳ ಮೂಲಕ ಗಮನಾರ್ಹ ಸುಧಾರಣೆಗಳನ್ನು ಸಾಧಿಸಲಾಯಿತು, ಇದು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜನರ ಆರೋಗ್ಯವನ್ನು ಸುಧಾರಿಸಿತು. ಜೀವಿತಾವಧಿ 1949 ರಲ್ಲಿ 35–40 ವರ್ಷದಿಂದ 1980 ರಲ್ಲಿ 65.5 ವರ್ಷಗಳಿಗೆ ಏರಿತು. ಕೃಷಿ ಉತ್ಪಾದನೆಯ ಒಟ್ಟು ಮೌಲ್ಯವು ಶೇಕಡಾ 2.6 ವಾರ್ಷಿಕ ಸರಾಸರಿಯಲ್ಲಿ ಬೆಳವಣಿಗೆ ಆಯಿತು. ಕೈಗಾರಿಕಾ ಉತ್ಪಾದನೆಯು ಶೇಕಡಾ 12.6 ದರದಲ್ಲಿ ಏರಿತು, (1952–66) ಮತ್ತು ಜಿಡಿಪಿ ವಾರ್ಷಿಕ ಸರಾಸರಿ ಶೇಕಡಾ 3.6ರಷ್ಟು (1949–59) ಏರಿತು.

'ಮಹಾನ್ ಮುನ್ನೆಗೆತ'

ಆದಾಗ್ಯೂ, ಈ ಕಾರ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ಪಕ್ಷವು ಎಡ ಮತ್ತು ಬಲ ಮಾರ್ಗಚ್ಯುತಿಗಳ ಮೂಲಕ ಸಾಗಿತು. ಸಿಪಿಸಿ ನಾಯಕತ್ವವು ತಿದ್ದುಪಡಿ ಅಭಿಯಾನಗಳನ್ನು ಪ್ರಾರಂಭಿಸುವ ಮೂಲಕ ಅವುಗಳನ್ನು ಸರಿಪಡಿಸಲು ಪ್ರಯತ್ನಿಸಿತು. 1954ರಲ್ಲಿ ಸಿಪಿಸಿ ಕೇಂದ್ರ ಸಮಿತಿಯು ಪಕ್ಷದ ಐಕ್ಯತೆಯನ್ನು ಬಲವರ್ಧನೆ ಗೊಳಿಸುವ ನಿರ್ಣಯವನ್ನು ಅಂಗೀಕರಿಸಿತು. ಈ ಪ್ರಯತ್ನಗಳ ಹೊರತಾಗಿಯೂ ನಾಯಕತ್ವದಲ್ಲಿಯೂ ಸಹ ಮಾರ್ಗಚ್ಯುತಿಗಳುಮುಂದುವರೆದವು. ಮಾವೋ ಝೋ ಡೊಂಗ್ ಸ್ವತಃ ಪರಿಸ್ಥಿತಿಯನ್ನು ತಪ್ಪಾಗಿ ಅಂದಾಜಿಸಿದರು ಮತ್ತು ಪರಿಷ್ಕರಣಾವಾದಿ ಬೆದರಿಕೆಯನ್ನು ಉತ್ಪ್ರೇಕ್ಷಿಸಿದರು. ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವತ್ತಬಲವಂತದ ಪ್ರಯತ್ನಗಳನ್ನು ಟೀಕಿಸುತ್ತಿದ್ದವರನ್ನು ಬಲ ಪರಿಷ್ಕರಣೆವಾದಿಗಳು ಎಂದು ತಳ್ಳಿಹಾಕಲಾಯಿತು. ಕೈಗಾರಿಕೆಗಳು ಮತ್ತು ಕೃಷಿ ಎರಡಕ್ಕೂ ಅವಾಸ್ತವಿಕ ಗುರಿಗಳನ್ನು ನಿಗದಿಪಡಿಸಲಾಯಿತು.

1956 ರಲ್ಲಿ ನಡೆದ ಸಿಪಿಸಿಯ ಎಂಟನೇ ಕಾಂಗ್ರೆಸ್, ಸಮಾಜವಾದಿ ವ್ಯವಸ್ಥೆಯನ್ನು ಮೂಲತಃ ಸ್ಥಾಪಿಸಲಾಗಿದೆ ಮತ್ತು ಅದು ಸಮಾಜವಾದಿ ರೂಪಾಂತರವನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲು ಮುಂದಾಗಬೇಕು ಎಂದು ತೀರ್ಮಾನಿಸಿತು. ಪ್ರಮುಖ ವಿರೋಧಾಭಾಸವನ್ನು ತ್ವರಿತ ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಜನರ ಅವಶ್ಯಕತೆ ಹಾಗೂ ಆರ್ಥಿಕತೆ ಮತ್ತು ಸಂಸ್ಕೃತಿಯ ಪ್ರಸ್ತುತ ಸ್ಥಿತಿಯ ನಡುವೆ ಗುರುತಿಸಲಾಯಿತು. 1957 ರಲ್ಲಿ, ಮಾವೋ ಝೇಡಾಂಗ್, ಈ ಮೂಲಭೂತ ಅಂದಾಜನ್ನು ಬದಲಾಯಿಸಿದರು ಹಾಗೂ ಶ್ರಮಜೀವಿ ಮತ್ತು ಬೂರ್ಜ್ವಾಗಳ ನಡುವಿನ ವೈರುಧ್ಯವು ಪ್ರಮುಖ ವೈರುಧ್ಯವಾಗಿ ಉಳಿದಿದೆ ಎಂದು ಹೇಳಿದರು. ಉದ್ಯಮದಲ್ಲಿ ಮತ್ತು ಕೃಷಿ ಸಹಕಾರಿ ಸಂಸ್ಥೆಗಳ ರಚನೆಯಲ್ಲಿ ಅಪಾಯಕಾರಿ ವೇಗವನ್ನು ತಡೆಯುವ ಕೇಂದ್ರ ಸಮಿತಿಯ ನಿರ್ಧಾರವನ್ನು ಅವರು ಟೀಕಿಸಿದರು. ಅವರು 'ನಿರಂತರ ಕ್ರಾಂತಿ'ಯ ಕಲ್ಪನೆಯನ್ನು ಪ್ರತಿಪಾದಿಸಿದರು. ಇದು ಎಡ ಪಂಥವಾದಿಮಾರ್ಗಚ್ಯುತಿಗಳಿಗೆ ಅನುವು ಮಾಡಿಕೊಟ್ಟಿತು ಮತ್ತು 'ಮಹಾನ್ ಮುನ್ನೆಗೆತ' (ಗ್ರೇಟ್ ಲೀಪ್ ಫಾರ್ವರ್ಡ್) ಅಭಿಯಾನಕ್ಕೆ ಕಾರಣವಾಯಿತು.

ಸಿಪಿಸಿ ಕೇಂದ್ರ ಸಮಿತಿಯು ಚೀನಾದ ಹಿಂದುಳಿದ ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳನ್ನು ತ್ವರಿತವಾಗಿ ಬದಲಿಸಲು, 'ಉನ್ನತ ಗುರಿ, ಇನ್ನೂ ಉತ್ತಮ ಮತ್ತು ಹೆಚ್ಚಿನದನ್ನು ವೇಗವಾಗಿ ಸಾಧಿಸಬೇಕು' ಎಂಬ ನಿರ್ಣಯವನ್ನು ಅಂಗೀಕರಿಸಿತು. 'ಕಮ್ಯುನಿಸಂನ್ನು ಸಾಕಾರಗೊಳಿಸುವುದು"ಇನ್ನು ಮುಂದೆ ದೂರದ ಭವಿಷ್ಯದಲ್ಲಿ ಇಲ್ಲ' ಎಂದು ಘೋಷಿಸಿತು. ಈ ನಿರ್ಣಯಗಳು ಚಾಲ್ತಿಯಲ್ಲಿರುವ ವಸ್ತುನಿಷ್ಠ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ ಮತ್ತು ಕೈಗಾರಿಕಾ ಉದ್ಯಮಗಳು ಮತ್ತು ಕೃಷಿ ಕೇಂದ್ರಗಳ ಮುಂದೆ ಸಾಧಿಸಲಾಗದ ಗುರಿಗಳನ್ನು ಹೊಂದಿತ್ತು. ಈ ಅವಾಸ್ತವಿಕ ಗುರಿಗಳನ್ನು ಸಾಧಿಸಲು, ಸತ್ಯಗಳನ್ನು ತಪ್ಪಾಗಿ ನಿರೂಪಿಸುವುದು ಮತ್ತು ಅತಿಶಯದ ವರದಿಗಳನ್ನು ಮಾಡುವುದು. 'ಮಹಾನ್ ಮುನ್ನೆಗೆತ'ದ (ಗ್ರೇಟ್ ಲೀಪ್ ಫಾರ್ವರ್ಡ್)ಅವಧಿಯಆರ್ಥಿಕ ಅಭಿವೃದ್ಧಿಯನ್ನು ಹಾನಿಗೊಳಿಸಿತು.

ಸೋವಿಯೆಟ್ ಕಮ್ಯುನಿಸ್ಟ್ ಪಕ್ಷದ (ಸಿ.ಪಿ.ಎಸ್.ಯು) 20 ನೇ ಮಹಾಧಿವೇಶನದಲ್ಲಿ ಕ್ರುಶ್ಚೇವ್ ಅವರ ಪರಿಷ್ಕರಣೆ ಸಿದ್ಧಾಂತದ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ಸಿಪಿಸಿ ಕೈಗೆತ್ತಿಕೊಂಡಿತು. ಇದರಿಂದಾಗಿ 1960 ರಲ್ಲಿ ಚೀನಾಕ್ಕೆ ಸೋವಿಯೆಟ್ ಒಕ್ಕೂಟ ಎಲ್ಲಾ ಸಹಾಯವನ್ನು ನಿಲ್ಲಿಸಿತು ಮತ್ತು ಅನೇಕ ಯೋಜನೆಗಳನ್ನು ಹಠಾತ್ತನೆ ಸ್ಥಗಿತಗೊಳಿಸಿತು. ಈ ಸಮಸ್ಯೆಗಳನ್ನು ನಿವಾರಿಸಲು, ಸಮಾಜವಾದಿ ನಿರ್ಮಾಣದಲ್ಲಿ ಸ್ವಾವಲಂಬನೆಯ ನೀತಿಯನ್ನು ಅನುಸರಿಸಲು ಸಿಪಿಸಿ ನಿರ್ಧರಿಸಿತು.

ಸಿಪಿಸಿ ಕೇಂದ್ರ ಸಮಿತಿ 1961ರ ಜನವರಿಯಲ್ಲಿ ಸಭೆ ಸೇರಿ, ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿತು ಮತ್ತು 'ಮರು ಹೊಂದಾಣಿಕೆ ಮತ್ತು ಕ್ರೋಡೀಕರಣ'ದ ತತ್ವವನ್ನು ಅಳವಡಿಸಿಕೊಂಡಿತು. ಕೆಲಸದ ಶೈಲಿಯನ್ನು ಸರಿಪಡಿಸಲು ಮತ್ತು 'ವಾಸ್ತವಾಂಶದಿಂದ ಸತ್ಯವನ್ನು ಹುಡುಕುವ' ಅಭ್ಯಾಸವನ್ನು ಪುನಃಸ್ಥಾಪಿಸಲು ಅದು ನಿರ್ಧರಿಸಿತು. ಈ ಸಭೆ "ಮಹಾನ್ ಮುನ್ನೆಗೆತ'ದ (ಗ್ರೇಟ್ ಲೀಪ್ ಫಾರ್ವರ್ಡ್) ನ ತಪ್ಪುಗಳನ್ನು ಸರಿಪಡಿಸಲು ಪ್ರಯತ್ನಿಸಿತು. ಜನವರಿ 1962 ರಲ್ಲಿ, ಸಿಪಿಸಿ ವಿಸ್ತಾರವಾದ ಸಮ್ಮೇಳನವನ್ನು ನಡೆಸಿತು, ಅಲ್ಲಿ ಲಿಯು ಶಾವೊಕಿ 1958 ರಿಂದ ತಮ್ಮ ಕೆಲಸದಲ್ಲಿನ 'ನ್ಯೂನತೆಗಳು ಮತ್ತು ತಪ್ಪುಗಳನ್ನು' ಅಂಗೀಕರಿಸುವ ಲಿಖಿತ ವರದಿಯನ್ನು ನೀಡಿದರು. ಮಾವೋ ಝೇಡೊಂಗ್ ಸಹ ಸ್ವಯಂ–ವಿಮರ್ಶಾತ್ಮಕವಾಗಿ ಮಾತನಾಡಿದರು. ತರುವಾಯ, ಇದರ ಭಾಗವಾಗಿ ತಪ್ಪಾಗಿ ಶಿಕ್ಷೆಗೊಳಗಾದ ಸಂಗಾತಿಗಳ ಪುನರ್ವಸತಿ ಮಾಡಲಾಯಿತು.

'ಸಾಂಸ್ಕೃತಿಕ ಕ್ರಾಂತಿ'

1965 ರಲ್ಲಿ, ಮಾವೋ ಝೇಡೊಂಗ್ ಮತ್ತೊಂದು ವಿಶ್ವ ಯುದ್ಧದ ಬೆದರಿಕೆಯನ್ನು ಅತಿಯಾಗಿ ಅಂದಾಜು ಮಾಡಿದರು ಮತ್ತು ಚೀನಾವನ್ನು ಅದಕ್ಕೆ ಸನ್ನದ್ಧವಾಗಿರುವಂತೆ ಆದೇಶಿಸಿದರು. ಯುದ್ಧದ ಬೆದರಿಕೆಯ ಈ ಅತಿಯಾದ ಅಂದಾಜನ್ನು, ಪಕ್ಷದೊಳಗಿನ ಪರಿಷ್ಕರಣಾವಾದದ ವಿರುದ್ಧದ ಹೋರಾಟಕ್ಕೆ ತಳಕು ಹಾಕಲಾಯಿತು. ಅವರು ಕೇಂದ್ರ ಸಮಿತಿಯ ನಿರ್ಧಾರಗಳಿಗೆ ಕಿವಿಗೊಡಲು ನಿರಾಕರಿಸುವಂತೆ ಕೆಳಮಟ್ಟದ ಪಕ್ಷದ ಸಮಿತಿಗಳಿಗೆ ತಪ್ಪಾಗಿ ಮತ್ತು ಕೇಂದ್ರ ಸಮಿತಿ ನಿಲುವು 'ಸರಿಯಿಲ್ಲ' ಎಂದು ಭಾವಿಸಿದರೆ ಅದರ ವಿರುದ್ಧ 'ಬಂಡಾಯ' ಏಳಲು ಹೇಳಿದರು. ಈ ಹೇಳಿಕೆಗಳು 'ಸಾಂಸ್ಕೃತಿಕ ಕ್ರಾಂತಿ'ಯ ಚಂಡಮಾರುತದ ಮುನ್ಸೂಚನೆಯಾಗಿದ್ದವು.

ಫೆಬ್ರವರಿ 1966 ರಲ್ಲಿ, ಸಿ.ಪಿ.ಸಿಯ ಕೇಂದ್ರ ಸಮಿತಿಯು ಪಾಲಿಟ್ ಬ್ಯೂರೋದ ಸ್ಥಾಯಿ ಸಮಿತಿಯ ನಿಯಂತ್ರಣದಲ್ಲಿ ನೇರವಾಗಿ ಹೊಸ 'ಸಾಂಸ್ಕೃತಿಕ ಕ್ರಾಂತಿ ಗುಂಪನ್ನು' ನೇಮಿಸುವ ನಿರ್ಣಯವನ್ನು ಅಂಗೀಕರಿಸಿತು. ಸಾಂಸ್ಕೃತಿಕ ಕ್ರಾಂತಿಯ ಯೋಚನೆಯನ್ನು ಎತ್ತಿಹಿಡಿಯಲು, ಪಕ್ಷ ಮತ್ತು ಸಮಾಜವಾದವನ್ನು ವಿರೋಧಿಸುವ 'ಶೈಕ್ಷಣಿಕ ಅಧಿಕಾರಿಗಳ' ಪ್ರತಿಗಾಮಿ ಬೂರ್ಜ್ವಾ ನಿಲುವನ್ನು ಸಂಪೂರ್ಣವಾಗಿ ಬಹಿರಂಗಪಡಿಸಬೇಕು, ಶೈಕ್ಷಣಿಕ ಕಾರ್ಯಗಳು, ಶಿಕ್ಷಣ, ಸಾಹಿತ್ಯ ಇತ್ಯಾದಿಗಳಲ್ಲಿ ಅಂತಹ ನಿಲುವುಗಳನ್ನು ಟೀಕಿಸಬೇಕು ಮತ್ತು ಆ ಕ್ಷೇತ್ರಗಳಲ್ಲಿ ನಾಯಕತ್ವವನ್ನು ವಶಪಡಿಸಿಕೊಳ್ಳಬೇಕು ಎಂದು ನಿರ್ಣಯ ಎಲ್ಲಾ ಪಕ್ಷದ ಸದಸ್ಯರಿಗೆ ಕರೆ ನೀಡಿತು. ಪಕ್ಷ ಮತ್ತು ಸೈನ್ಯಕ್ಕೆ ನುಸುಳಿದ್ದ ಪ್ರತಿಗಾಮಿ ಶಕ್ತಿಗಳನ್ನು ಬಹಿರಂಗಪಡಿಸಲು ಮತ್ತು ಟೀಕಿಸಲು ನಿರ್ಣಯ ಕರೆ ನೀಡಿತು.

ಮೇ ತಿಂಗಳಲ್ಲಿ, ಮಾವೋ ಝೇಡೊಂಗ್ ಕೇಂದ್ರ ಸಮಿತಿಯ ಪರವಾಗಿ ಶಾಲಾ ಶಿಕ್ಷಣವನ್ನು ಕಡಿಮೆಗೊಳಿಸಬೇಕು, ಶಿಕ್ಷಣವನ್ನು ಕ್ರಾಂತಿಕಾರಿಯಾಗಿಸಬೇಕು ಮತ್ತು ಬೂರ್ಜ್ವಾ ಬುದ್ಧಿಜೀವಿಗಳನ್ನು ತೊಡೆದುಹಾಕಬೇಕು ಎಂದು ನಿರ್ದೇಶನ ನೀಡಿದರು. ಎಲ್ಲಾ ವಹಿವಾಟುಗಳು ಮತ್ತು ವೃತ್ತಿಗಳು ಶಿಕ್ಷಣಕ್ಕಾಗಿ ಉತ್ತಮ ಪಾಠಶಾಲೆಗಳಾಗಿವೆ ಮತ್ತು ಜನರು ಕೃಷಿ ಮತ್ತು ಕಾರ್ಖಾನೆ ಉತ್ಪಾದನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ನಿರ್ದೇಶನದಲ್ಲಿ ತಿಳಿಸಲಾಗಿತು. ಶಾಲೆಗಳು ಮತ್ತು ಕಾಲೇಜುಗಳಿಗೆ ಪ್ರವೇಶ ಪರೀಕ್ಷೆಯನ್ನು ರದ್ದುಪಡಿಸಲಾಯಿತು ಮತ್ತು ಶಿಫಾರಸು ಮತ್ತು ಆಯ್ಕೆಯ ಮೂಲಕ ಸೀಟುಗಳನ್ನು ಭರ್ತಿ ಮಾಡಲಾಯಿತು. ತರಗತಿಗಳನ್ನು ಸ್ಥಗಿತಗೊಳಿಸಲಾಯಿತು ಮತ್ತು ಅನೇಕ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲಾಯಿತು.

'ಪರಿಷ್ಕರಣಾವಾದದೆ ವಿರುದ್ಧ ಕ್ರಾಂತಿ' ಎಂಬ ಕರೆ ನೀಡಲಾಯಿತು. ಬಂಡವಾಳಶಾಹಿ ಹಾದಿಯಲ್ಲಿ ಸಾಗುತ್ತಿದೆ ಎಂದು ಆರೋಪಿಸಲ್ಪಟ್ಟ ಅನುಭವಿ ನಾಯಕರ ಮೇಲೆ ದಾಳಿ ನಡೆಸಲಾಯಿತು. ಶಾಲಾ ವಿದ್ಯಾರ್ಥಿಗಳಿಗಾಗಿ, 'ರೆಡ್ ಗಾರ್ಡ್ಸ್' ಎಂಬ ಸಂಘಟನೆಯನ್ನು ರಚಿಸಲಾಯಿತು ಮತ್ತು 'ಹಳೆಯದು ಎನ್ನುವ ಎಲ್ಲವನ್ನೂ' ನಾಶಮಾಡಲು ಅವರನ್ನು ಪ್ರೋತ್ಸಾಹಿಸಲಾಯಿತು. ಇದರ ಫಲವಾಗಿ ಅನೇಕ ಪಕ್ಷದ ಸಮಿತಿ ಕಚೇರಿಗಳನ್ನು 'ಕ್ರಾಂತಿಕಾರಿಗಳು' ಆಕ್ರಮಣ ಮಾಡಿ 'ವಶಪಡಿಸಿಕೊಂಡರು'. ಸಿಪಿಸಿ ಕೇಂದ್ರ ಸಮಿತಿಯ ನಿರ್ದೇಶನದಲ್ಲಿ, 'ಸಾಂಸ್ಕೃತಿಕ ಕ್ರಾಂತಿ' ನಗರಗಳಿಂದ ಗ್ರಾಮೀಣ ಪ್ರದೇಶಗಳಿಗೆ ಹರಡಿತು. 1967 ರ ಹೊತ್ತಿಗೆ, ಪಾಲಿಟ್ ಬ್ಯೂರೋ ಮತ್ತು ಸಿಪಿಸಿಯ ಕೇಂದ್ರ ಸಮಿತಿಯು ಕಾರ್ಯನಿರ್ವಹಿಸುವುದನ್ನು ನಿಲ್ಲಿಸಿತು ಮತ್ತು ಅವುಗಳ ಸ್ಥಾನವನ್ನು 'ಸಾಂಸ್ಕೃತಿಕ ಕ್ರಾಂತಿ ಗುಂಪು' ತೆಗೆದುಕೊಂಡಿತು.

ಎಡ ದುಸ್ಸಾಹಸವಾದಿ ಧೋರಣೆಯ ಅಂತ್ಯ

ಈ ಬೆಳವಣಿಗೆಗಳನ್ನು ಇಷ್ಟಪಡದ ಲಿಯು ಶಾವೋಕಿಯಂತಹ ಹಿರಿಯ ನಾಯಕರನ್ನು ಪರಿಷ್ಕರಣಾವಾದಿಗಳೆಂದು ಗುರಿಯಾಗಿಸಿ ಪಕ್ಷದಿಂದ ಹೊರಹಾಕಲಾಯಿತು. ಕೇಂದ್ರ ಸಮಿತಿ ಮತ್ತು ಇತರ ಕೆಳ ಸಮಿತಿಗಳ ಇತರ ಅನೇಕ ನಾಯಕರು ಇದೇ ರೀತಿಯ ಪರಿಸ್ಥಿತಿಯನ್ನು ಎದುರಿಸಿದರು. ಸಿಪಿಸಿಯ ಒಂಬತ್ತನೇ ಕಾಂಗ್ರೆಸ್ (1967) ಈ ತಪ್ಪುಗಳನ್ನು ಮತ್ತು ಮಾರ್ಗಚ್ಯುತಿಗಳನ್ನು ಸರಿಪಡಿಸಲು ವಿಫಲವಾಯಿತು. ಆರಂಭದಲ್ಲಿ ಮಾವೋ ಝೆಡೊಂಗ್ ವ್ಯಕ್ತಿ–ಆರಾಧನಯಿಂದ ಹಿಂದೆ ಸರಿದರೂ,ಅದನ್ನು ಮುಂದೆ ಉತ್ತೇಜಿಸಲಾಯಿತು ಮತ್ತು ಅದು ಪಕ್ಷದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಲಿನ್ ಬಿಯಾವೊ ತಪ್ಪಾದ ಎಡ ದುಸ್ಸಾಹಸವಾದಿ ಧೋರಣೆಯನ್ನು ಪ್ರತಿನಿಧಿಸುವ ಪ್ರಮುಖ ಶಕ್ತಿಯಾದರು.


ಲಿನ್ ಬಿಯಾವೊ ಅವರ ಉಚ್ಚಾಟನೆ ಮತ್ತು ಸಾವು ಎಡ ಮಾರ್ಗಚ್ಯುತಿಯನ್ನು ತಡೆಯಲಿಲ್ಲ. 'ನಾಲ್ವರ ಗ್ಯಾಂಗ್' (ಗ್ಯಾಂಗ್ ಆಫ್ ಫೋರ್) ಸಾಂಸ್ಕೃತಿಕ ಕ್ರಾಂತಿ ಮತ್ತು ಎಡ ಪಂಥವಾದಿಗಳ ಹೊಸ ಪ್ರೇರಕ ಶಕ್ತಿಯಾಗಿ ಹೊರಹೊಮ್ಮಿತು. ಲಿನ್ ಬಿಯಾವೊ ಅವರ ಅಪರಾಧಗಳನ್ನು 'ಎಡ ಪಂಥವಾದೆ' ಬದಲಿಗೆ 'ಪರಿಷ್ಕರಣಾವಾದಿ' ಎಂದು ಕರೆಯಲಾಯಿತು. ಅವರ ವಿರುದ್ಧ ಹೋರಾಡುವ ಸೋಗಿನಲ್ಲಿ ಮತ್ತೊಮ್ಮೆ ದುಸ್ಸಾಹಸವಾದಿ ಧೋರಣೆಯನ್ನು ಉತ್ತೇಜಿಸಲಾಯಿತು. 1973 ರಲ್ಲಿ ನಡೆದ ಸಿಪಿಸಿಯ ಹತ್ತನೇ ಕಾಂಗ್ರೆಸ್ ಕೂಡ ಈ ಎಡ ಮಾರ್ಗಚ್ಯುತಿಯನ್ನು ಕೊನೆಗೊಳಿಸಲಿಲ್ಲ ಮತ್ತು ಒಂಬತ್ತನೇ ಕಾಂಗ್ರೆಸ್ಸಿನ ತಪ್ಪು ತಿಳುವಳಿಕೆಯನ್ನು ದೃಢ ಪಡಿಸಿತು. ಎಡ ಪಂಥವಾದಿ ಗುಂಪುಗಳು ಝೌ ಎನ್ ಲೈ ಅವರನ್ನು ಗುರಿಯಾಗಿಸಿಕೊಂಡವು.

ಅನುಭವಿ ನಾಯಕರಾದ ಝೌ ಎನ್ ಲೈ, ಝೊ ದೇ ಮತ್ತು ಡೆಂಗ್ ಕ್ಸಿಯಾವೊ ಪಿಂಗ್ ಅವರು ನಡೆಸಿದ ನಿರಂತರ ಆಂತರಿಕ ಹೋರಾಟದಿಂದಾಗಿ, ಜನರು 'ಸಾಂಸ್ಕೃತಿಕ ಕ್ರಾಂತಿ' ಹೆಸರಿನಲ್ಲಿ ಮಾಡಿದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ತಪ್ಪುಗಳನ್ನು ನಿಧಾನವಾಗಿ ಅರಿತುಕೊಳ್ಳಲು ಪ್ರಾರಂಭಿಸಿದರು. 1976 ರ ಜನವರಿಯಲ್ಲಿ ಝೌ ಎನ್ ಲೈ ಅವರ ಮರಣದ ನಂತರ ದುಃಖದ ಭಾರೀ ಹೊರಹೊಮ್ಮುವಿಕೆಯಲ್ಲಿ ಅವರ ಹೋರಾಟಕ್ಕೆ ಜನಪ್ರಿಯ ಬೆಂಬಲ ವ್ಯಕ್ತವಾಯಿತು. ಜನರು ಟಿಯಾನನ್ಮೆನ್ ಚೌಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು ಮತ್ತು ಪಾಲಿಟ್ ಬ್ಯೂರೋ ಅವರನ್ನು ತೆರವುಗೊಳಿಸಲು ನಿರ್ಧರಿಸಿದಾಗ, ಅವರು ನಿರಾಕರಿಸಿದರು ಮತ್ತು ವಿರೋಧಿಸಿದರು. ಈ ಘಟನೆಯು ಗ್ಯಾಂಗ್ ಆಫ್ ಫೋರ್ ಅನ್ನು ಒಡೆದುಹಾಕುವುದನ್ನು ತ್ವರಿತಗೊಳಿಸಿತು ಮತ್ತು ಅಂತಿಮವಾಗಿ ಸಾಂಸ್ಕೃತಿಕ ಕ್ರಾಂತಿಯ ಅವಧಿಗೆ ತೆರೆಯೆಳೆಯಿತು. ಈ ಮಾರ್ಗಚ್ಯುತಿಗಳು ಪಕ್ಷ ಮತ್ತು ದೇಶಕ್ಕೆ ಅಪಾರ ಹಾನಿ ಉಂಟುಮಾಡಿದವು.

ಸೆಪ್ಟೆಂಬರ್ 9, 1976 ರಂದು ಮಾವೋ ಝೇಡೊಂಗ್ ಅವರ ಮರಣವು ದೇಶವನ್ನು ತೀವ್ರ ದುಃಖಕ್ಕೆ ತಳ್ಳಿತು. ಸಿಪಿಸಿ ತನ್ನ ತಪ್ಪುಗಳನ್ನು ಒಪ್ಪಿಕೊಳ್ಳಲು ಮತ್ತು ಹಾದಿಯ ತಿದ್ದುಪಡಿಯ ಕೈಗೊಳ್ಳಲು ಇನ್ನೂ ಎರಡು ವರ್ಷಗಳು ಬೇಕಾಯಿತು. ಜನರ ಆರ್ಥಿಕ ಯೋಗಕ್ಷೇಮವನ್ನು ಹೆಚ್ಚಿಸುವುದು, ಉತ್ಪಾದಕ ಶಕ್ತಿಗಳ ಮಟ್ಟವನ್ನು ಹೆಚ್ಚಿಸುವುದು ಮತ್ತು ಸಮಾಜವಾದಿ ನಿರ್ಮಾಣದ ಹಾದಿಯಲ್ಲಿ ಮುಂದುವರಿಯುವುದು ಪಕ್ಷದ ಮುಂದಿರುವ ಮುಖ್ಯ ಕಾರ್ಯ ಎಂದು ಸಿಪಿಸಿ ನಿರ್ಧರಿಸಿತು.

ಈ ಹಿನ್ನೆಲೆಯಲ್ಲಿ, ಸಿಪಿಸಿಯ ಕೇಂದ್ರ ಸಮಿತಿಯು ಡಿಸೆಂಬರ್ 1978 ರಲ್ಲಿ ಸಭೆ ಸೇರಿ ಚೀನಾದ ಇತಿಹಾಸದ ಹಾದಿಯನ್ನು ಬದಲಿಸಿದ ಕೆಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿತು. ●

ಜಾಗತಿಕ ಬಂಡವಾಳವಾದದ ತೀವ್ರ ಆರ್ಥಿಕ ಬಿಕ್ಕಟ್ಟು: 2006-2008



ಅರ್ಜುನ್ ಸೇನ್‌ಗುಪ್ತಾ ವರದಿ ಪ್ರಕಾರ "ಭಾರತದಲ್ಲಿ 83.6 ಕೋಟಿ ಜನರ ತಲಾ ಬಳಕೆ ದಿನಕ್ಕೆ ರೂ. 20.ಕ್ಕಿಂತ ಕಡಿಮೆ." ಜುಲೈ 2005 ಮತ್ತು ಜೂನ್ 2006 ರ ರಾಷ್ಟ್ರೀಯ ಮಾದರಿ ಸಮೀಕ್ಷೆಯ 62 ನೇ ವರದಿಯು ಮತ್ತಷ್ಟು ಶೋಚನೀಯ ಚಿತ್ರವನ್ನು ಬಹಿರಂಗಪಡಿಸಿತು. ಈ ವರದಿಗಳು ವರದಿಗಳು 1990-91ರಲ್ಲಿ ಪ್ರಾರಂಭವಾದ ನವ-ಉದಾರವಾದಿ ಜಾಗತೀಕರಣದ ನಂತರದಲ್ಲಿ ಬಡವರ ಸ್ಥಿತಿ-ಗತಿಯ ತೀವ್ರ ಭಯಾನಕತೆಯನ್ನು ಸಮರ್ಪಕವಾಗಿ ಚಿತ್ರಿಸಿದವು. ಇದು ಐಎಂಎಫ್-ವಿಶ್ವಬ್ಯಾಂಕ್ ಆದೇಶಿಸಿದ ನವ-ಉದಾರವಾದಿ ಜಾಗತೀಕರಣದ ಫಲಿತಾಂಶ. ಆದರೂ ತನ್ನ ಹಿಂದಿನ ಎನ್‌ಡಿಎ ಸರ್ಕಾರದಂತೆಯೇ ಯು.ಪಿ.ಎ. ಸರ್ಕಾರಕ್ಕೂ ಅದೇ ಅಚ್ಚುಮೆಚ್ಚಿನ ಆರ್ಥಿಕ ಕಾರ್ಯಸೂಚಿಯಾಗಿತ್ತು.

ಮೂಲ ಲೇಖಕರು: ಸುಕೋಮಲ್ ಸೇನ್ ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ

ವಿಶ್ವ ಬಂಡವಾಳಶಾಹಿ ತೀವ್ರ ಬಿಕ್ಕಟ್ಟಿನೆಡೆಗೆ

2008ರಲ್ಲಿ ವಿಶ್ವದ ಅತಿದೊಡ್ಡ ಸ್ಟಾಕ್ ಬ್ರೋಕರ್ ಕಂಪನಿಯಾದ, ಮೆರಿಲ್ ಲಿಂಚ್, ಲೆಹ್ಮನ್ ಬ್ರದರ್ಸ್ ಮತ್ತು ಎಲ್ಲಾ ಹಣಕಾಸು ದೈತ್ಯರು ತರಗಲೆಗಳಂತೆ ಕುಸಿದು, ನಂತರ ವಿಶ್ವದ ಅತಿದೊಡ್ಡ ವಿಮಾ ಕಂಪನಿ ಎಐಜಿ, ಸೇರಿದಂತೆ ಅಮೇರಿಕಾದ ಹಲವಾರು ಹಣಕಾಸು ಕಂಪನಿಗಳನ್ನು ಅಪ್ಪಳಿಸಿತು. ಅಮೇರಿಕಾದ ಮುದ್ರಣ, ಎಲೆಕ್ಟ್ರಾನಿಕ್ ಮಾಧ್ಯಮಗಳು ಈ ಘಟನೆಯನ್ನು 1929 ರಲ್ಲಿ ಇಡೀ ಬಂಡವಾಳಶಾಹಿ ಜಗತ್ತನ್ನು ಆವರಿಸಿದ್ದ ಅತಿದೊಡ್ಡ ಮತ್ತು ದೀರ್ಘಾವಧಿಯ ಆರ್ಥಿಕ ಕುಸಿತ ಮತ್ತು ಆರ್ಥಿಕ ಹಿಂಜರಿತದ ನಂತರದ ಅವಧಿಯಲ್ಲಿಯ ದೀರ್ಘ ಆರ್ಥಿಕ ಹಿಂಜರಿತವನ್ನು ಸೂಚಿಸುವ ಅತಿ ದೊಡ್ಡ ಆರ್ಥಿಕ ಕುಸಿತ ಎಂದು ವಿವರಿಸಿದವು.

ವಾಲ್ ಸ್ಟ್ರೀಟ್ ಕುಸಿಯುವುದರೊಂದಿಗೆ ಮತ್ತು ಆರಂಭದಲ್ಲಿ $700 ಬಿಲಿಯನ್ ಬೇಲ್-ಔಟ್ ಯೋಜನೆಯೊಂದಿಗೆ, ಯು.ಎಸ್ ಸರ್ಕಾರದಿಂದ ಟ್ರಿಲಿಯನ್ ಗಟ್ಟಲೆ ಯುಎಸ್ ಡಾಲರಗಳನ್ನು ನೀಡಿದ್ದು, ಅಮೇರಿಕಾದಲ್ಲಿ ಡೌ-ಜೋನ್ಸ್, ಬ್ರಿಟನ್‌ನಲ್ಲಿ ಎಫ್.ಟಿ.ಎಸ್.ಇ. ಮತ್ತು ಇತರ ಎಲ್ಲಾ ಯುರೋಪಿಯನ್ ಮತ್ತು ಏಷ್ಯನ್ ಸ್ಟಾಕ್-ಮಾರುಕಟ್ಟೆಗಳ ಆಳವಾದ ಬಿಕ್ಕಟ್ಟಿನ ಅಂಚನ್ನು ಸಹ ಮುಟ್ಟಲು ವಿಫಲವಾಯಿತು. 1.2 ಟ್ರಿಲಿಯನ್ ಯುಎಸ್ ಡಾಲರಿನಷ್ಟು ಮೌಲ್ಯದ ಷೇರುಗಳನ್ನು ಅಳಿಸಿಹಾಕಿದ ಮಾರುಕಟ್ಟೆಗಳು, ವಿಶ್ವ ಬಂಡವಾಳಶಾಹಿಯನ್ನು ಆಳವಾದ ಸೆಳೆತಕ್ಕೆ ಸಿಕ್ಕು ಪಗಡೆಕಾಯಿಗಳಂತೆ ಉರುಳಿಸಿದವು.

ವಾಲ್ ಸ್ಟ್ರೀಟ್ ಬಿಕ್ಕಟ್ಟು ವಿಶ್ವದ ಪ್ರತಿಯೊಂದು ದೇಶಗಳ ಬಿಕ್ಕಟ್ಟಾಯಿತು. ಕಾರ್ಮಿಕ ವರ್ಗ ಮತ್ತು ಬಡವರನ್ನು ತೀವ್ರವಾಗಿ ಬಾಧಿಸಿತು. ಜಾಗತಿಕ ಆರ್ಥಿಕತೆಯ ಮೇಲೆ ಆರ್ಥಿಕ ಬಿಕ್ಕಟ್ಟಿನ ಪ್ರಭಾವದ ಪರಿಣಾಮವಾಗಿ ಮುಂದಿನ ವರ್ಷದ ಅಂತ್ಯದ ವೇಳೆಗೆ ಇಪ್ಪತ್ತು ಮಿಲಿಯನ್ ಉದ್ಯೋಗಗಳು ಕಣ್ಮರೆಯಾಗುತ್ತವೆ ಎಂದು ಸಂಯುಕ್ತ ರಾಷ್ಟ್ರ ಸಂಸ್ಥೆಯ ವರದಿ ತಿಳಿಸಿತು.

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐ.ಎಲ್.ಒ.) ಅಂದಾಜಿನ ಪ್ರಕಾರ ನಿರ್ಮಾಣ, ರಿಯಲ್ ಎಸ್ಟೇಟ್, ಹಣಕಾಸು ಸೇವೆಗಳು ಮತ್ತು ವಾಹನ ವಲಯಕ್ಕೆ ಹೆಚ್ಚಿನ ಹೊಡೆತ ಬೀಳುತ್ತದೆ. ಐಎಂಎಫ್ ಆರ್ಥಿಕ ಪ್ರಕ್ಷೇಪಗಳನ್ನು ಕಡಿತಗೊಳಿಸಿದರೆ, ಉದ್ಯೋಗಗಳ ಪ್ರಮಾಣದ ಮೇಲಿನ ಹೊಡೆತ ಇನ್ನೂ ಹೆಚ್ಚಾಗಬಹುದು ಎಂದು ಐ.ಎಲ್.ಒ. ನಿರ್ದೇಶಕ ಜನರಲ್ ಜುವಾನ್ ಸೊಮಾವಿಯಾ ಹೇಳಿದರು.."ಸಬ್ ಪ್ರೈಮ್ ನೀತಿಗಳೊಂದಿಗೆ ಸಬ್ ಪ್ರೈಮ್ ಬಿಕ್ಕಟ್ಟಿಗೆ ಪ್ರತಿಕ್ರಿಯಿಸುವುದು ದುರಂತ" ಎಂದು ಅವರು ಹೇಳಿದರು.

ಆರ್ಥಿಕ ಹಿಂಜರಿತವನ್ನು ನಿವಾರಿಸಲು ಅಥವಾ ತಗ್ಗಿಸಲು, ಸಣ್ಣ ಉದ್ಯಮಗಳು ಸೇರಿದಂತೆ ಉದ್ಯೋಗ-ಹೆಚ್ಚಿಸುವ ವಲಯಗಳತ್ತ ಗಮನಹರಿಸಿ, ಸಂಪನ್ಮೂಲಗಳನ್ನು ಆರ್ಥಿಕತೆಗೆ ವಿನಿಯೊಗಿಸಬೇಕು ಎಂದು ಅವರು ಹೇಳಿದರು..

ವಾಲ್ ಸ್ಟ್ರೀಟ್ ಕುಸಿತವು ಯುರೋಪಿಯನ್ ಹಣಕಾಸು ಮಾರುಕಟ್ಟೆಯನ್ನು ಆಳವಾದ ಪ್ರಕ್ಷುಬ್ಧತೆಗೆ ಒಳಪಡಿಸಿತು "ಜಾಗತಿಕ ಸಾಲದ ಬಿಕ್ಕಟ್ಟು ಯುರೋಪನ್ನು ಪ್ರವೇಶಿಸಿ ಐದು ಪ್ರಮುಖ ಬ್ಯಾಂಕ್ ರಕ್ಷಣೆಗಳನ್ನು ಅಲ್ಲೋಲ-ಕಲ್ಲೋಲ ಮಾಡಿತು ಮತ್ತು ಆಳ್ವಿಕೆಗಳ ಸಾಲ ಮಾರುಕಟ್ಟೆಗಳನ್ನು ಬಹುತೇಕ ಸ್ಥಗಿತಗೊಳಿಸಿದೆ" ಎಂದು ಸೆಪ್ಟೆಂಬರ್ 30, 2008 ರ ಡೈಲಿ ಟೆಲಿಗ್ರಾಫ್ ವರದಿ ಮಾಡಿತು

ಡಚ್-ಬೆಲ್ಜಿಯಂ ಬ್ಯಾಂಕ್ ಫೋರ್ಟಿಸ್, ಬ್ರಿಟನ್‌ನ ಬ್ರಾಡ್‌ಫೋರ್ಡ್ಸ್ ಮತ್ತು ಬಿಂಗ್ಲಿ ಮತ್ತು ಐಸ್ಲ್ಯಾಂಡ್‌ನ ಗ್ಲಿಂಟಿಸ್ ಅಲ್ಪಾವಧಿಯ ಸಾಲಗಳನ್ನು ಮರು-ಭರ್ತಿ ಮಾಡಲು ವಿಫಲವಾದ ನಂತರ ಅಲ್ಲಿಯ ಸರ್ಕಾರಗಳು ಭಾಗಶಃ ಅಥವಾ ಪೂರ್ಣ ರಾಷ್ಟ್ರೀಕರಣಕ್ಕೆ ಮೊರೆ ಹೋದವು. ಫ್ರೆಂಚ್ ಸರ್ಕಾರವು, ಬಂಡವಾಳ ಕೊರತೆಯಿಂದ ಕುಸಿಯತೊಡಗಿದ್ದ ಫ್ರಾಂಕೊ-ಬೆಲ್ಜಿಯಂ ಸಾಲನೀಡಿಕೆಗಾರ ಡೆಕ್ಸಿಯಾಗೆ ಬೆಂಬಲದ ಭರವಸೆ ನೀಡಬೇಕಾಯಿತು.

2001 ರಲ್ಲಿ ಅರ್ಜೆಂಟೀನಾದಲ್ಲಿ, ಅಭಿವೃದ್ಧಿ ಹೊಂದುತ್ತಿರುವ ಮಧ್ಯಮ ವರ್ಗದ ಲಕ್ಷಾಂತರ ಜನರು, ನಿರ್ದಿಷ್ಟವಾಗಿ ಸರ್ಕಾರಿ ನೌಕರರನ್ನು ಬಡತನಕ್ಕೆ ದೂಡಲಾಯಿತು. 1998 ರಲ್ಲಿ ಇಂಡೋನೇಷ್ಯಾದಲ್ಲಿ, ಗಲಭೆಕೋರರು ರಾಜಧಾನಿಯಲ್ಲಿನ ಶಾಪಿಂಗ್ ಮಾಲ್‌ಗಳು ಮತ್ತು ಅಂಗಡಿ ಮುಂಗಟ್ಟುಗಳನ್ನು ಸುಟ್ಟುಹಾಕಿದರು, ಮತ್ತು ದೀರ್ಘಾವಧಿಯ ಸರ್ವಾಧಿಕಾರಿ ಸುಹಾರ್ತೊ ಅವರನ್ನು ನಿವೃತ್ತಿಗೆ ದೂಡಿತು.

ಅಕ್ಟೋಬರ್ 14, 2008 ರಂದು, ಯು.ಎಸ್. ಸರ್ಕಾರವು ಹೆಪ್ಪುಗಟ್ಟಿದ ಆರ್ಥಿಕ ಜಗತ್ತಿನಲ್ಲಿ ವಿಶ್ವಾಸ ಮತ್ತು ದ್ರವ್ಯತೆಯನ್ನು ಪುನಃಸ್ಥಾಪಿಸಲು 250 ಬಿಲಿಯನ್ ಡಾಲರ್‌ಗಳನ್ನು ಒಂಬತ್ತು ಉನ್ನತ ಬ್ಯಾಂಕುಗಳಲ್ಲಿ ಸಣ್ಣ ಇಕ್ವಿಟಿ ಪಾಲು-ಷೇರುಗಳಿಗಾಗಿ ಹೂಡಿಕೆ ಮಾಡುತ್ತಿರುವುದಾಗಿ ಘೋಷಿಸುತ್ತಾ, ತನ್ನ ಬ್ಯಾಂಕಿಂಗ್ ವ್ಯವಸ್ಥೆಯ ಭಾಗಶಃ ರಾಷ್ಟ್ರೀಕರಣವನ್ನು ಕೈಗೆತ್ತಿಕೊಂಡಿತು. ಪ್ರತಿಯೊಬ್ಬರೂ ಒಪ್ಪುವಂತೆ, 1929 ರಲ್ಲಿ ಪ್ರಾರಂಭವಾದ ಮಹಾ ಆರ್ಥಿಕ ಕುಸಿತದ ನಂತರದ ಇದು ಸರ್ಕಾರದ ಅತಿದೊಡ್ಡ ಮಧ್ಯಪ್ರವೇಶವಾಗಿತ್ತು.

ಈ ಬಿಕ್ಕಟ್ಟಿನಿಂದ ಕಲಿಯಬಹುದಾದ ಪಾಠಗಳೇನು?

ಮೊದಲನೆಯದಾಗಿ, ಹಣಕಾಸು ಬಂಡವಾಳದ ಪ್ರಾಬಲ್ಯದೊಂದಿಗೆ ಬಂಡವಾಳಶಾಹಿಯ ಮುಕ್ತ ಮಾರುಕಟ್ಟೆ ಆರ್ಥಿಕತೆಯ ಭಯಂಕರವಾದ ಆದರೆ ಸಮರ್ಥನೀಯವಲ್ಲದ ಗುಣಲಕ್ಷಣ, ಅದರಲ್ಲೂ ವಿಶೇಷವಾಗಿ ವಿಶ್ವ ಬ್ಯಾಂಕ್-ಐಎಂಎಫ್‌ನ ನವ-ಉದಾರವಾದಿ ಆರ್ಥಿಕ ಕಾರ್ಯಸೂಚಿಯನ್ನು ಯು.ಎಸ್. ಆಡಳಿತ ತೀವ್ರವಾಗಿ ಮುಂದೊತ್ತುತ್ತಾ ಬಂದಿದ್ದು, ಅದರ ಹಣಕಾಸು ವ್ಯವಸ್ಥೆಯ ಸ್ವರೂಪ ಈಗ ಅತ್ಯಂತ ಬೆತ್ತಲೆಯಾಗಿ ಹೊರಬಂದಿತ್ತು. ಜನರ ಯೋಗಕ್ಷೇಮಕ್ಕಾಗಿ, ಅವರ ಉದ್ಯೋಗಗಳು, ಆರೋಗ್ಯ, ಶಿಕ್ಷಣ, ವಸತಿ ಮತ್ತು ಇತರ ಎಲ್ಲ ಅಗತ್ಯಗಳಿಗಾಗಿ ಪ್ರಭುತ್ವದ ಮಧ್ಯಪ್ರವೇಶ ಮತ್ತು ಹಣಕಾಸಿನ ಹೂಡಿಕೆ ಬಗ್ಗೆ ತಿರಸ್ಕಾರ, ಸಾರ್ವಜನಿಕ ವಲಯ ಮತ್ತು ಸಾರ್ವಜನಿಕ ಸಂಸ್ಥೆಗಳ ವಿರುದ್ಧ ದ್ವೇಷ, ಪ್ರಭುತ್ವದ ಸಂಸ್ಥೆಗಳಿಂದ ದುಡಿಯುವ ಜನರಿಗೆ ಯಾವುದೇ ಸಾಮಾಜಿಕ ಭದ್ರತೆ ನೀಡುವ ಕ್ರಮಗಳ ಬಗ್ಗೆ ವಿರೋಧ, ಮಾರುಕಟ್ಟೆ ಶಕ್ತಿಗಳ ಮೇಲೆ ಸಂಪೂರ್ಣ ಅವಲಂಬನೆ ಕುರಿತು ಪ್ರಚಾರ ಮಾಡುವುದು, ಅಂತಿಮವಾಗಿ ಭಾರತವನ್ನು ಒಳಗೊಂಡಂತೆ ವಿಶ್ವ ಆರ್ಥಿಕತೆಯನ್ನು ಇಂತಹ ಅತ್ಯಂತ ಸಂದಿಗ್ಧ ಪರಿಸ್ಥಿತಿಗೆ ತಂದಿವೆ.

ಎರಡನೆಯದಾಗಿ, ಈಗ, ಯುಎಸ್ ಆರ್ಥಿಕ ತಜ್ಞರು ಸಹ ವಾಲ್ ಸ್ಟ್ರೀಟ್ (ಯುಎಸ್ ಸ್ಟಾಕ್ ಎಕ್ಸ್‌ಚೇಂಜ್ ಮತ್ತು ಇತರ ಪ್ರಮುಖ ಹಣಕಾಸು ಸಂಸ್ಥೆಗಳು ನ್ಯೂಯಾರ್ಕ್ ನಲ್ಲಿ ನೆಲೆಗೊಂಡ ಸ್ಥಳ) ಆರ್ಥಿಕ ಕುಸಿತವು 1929 ರಲ್ಲಿ ಸ್ಟಾಕ್ ಮಾರ್ಕೆಟ್ ಮತ್ತು ಬ್ಯಾಂಕಿಂಗ್ ಕುಸಿತಗಳೊಂದಿಗೆ ಪ್ರಾರಂಭವಾದ, ವಿಶ್ವದಾದ್ಯಂತದ ಸಾಮಾನ್ಯ ಜನರಿಗೆ ದೊಡ್ಡ ನಿರುದ್ಯೋಗ ಮತ್ತು ಅಗಾಧ ಆರ್ಥಿಕ ತೊಂದರೆಗಳನ್ನು ಉಂಟುಮಾಡಿದ ಅತ್ಯಂತ ಮಾರಕ ಮತ್ತು ದೀರ್ಘ ಆರ್ಥಿಕ ಕುಸಿತದ ನಂತರ ಅತಿ ದೊಡ್ಡ ವಿಶ್ವ ಆರ್ಥಿಕ ಹಿಂಜರಿತವಾಗಿದೆ ಎಂದು ಸಾರ್ವಜನಿಕವಾಗಿ ಹೇಳುತ್ತಿದ್ದಾರೆ.

ಮೂರನೆಯದಾಗಿ, ಬಂಡವಾಳಶಾಹಿ ವ್ಯವಸ್ಥೆಯ ಅತಿದೊಡ್ಡ ದೇವರು ಅಥವಾ ಅವತಾರ ಎಂದು ಸ್ಟಾಕ್ ಮಾರುಕಟ್ಟೆಯನ್ನು ಪೂಜಿಸುವದರ ಒಟ್ಟು ಪೊಳ್ಳುತನ ಮತ್ತು ಮೂರ್ಖತನ ಸಂಪೂರ್ಣವಾಗಿ ಬಯಲಾಯಿತು.

ಕೊನೆಯದಾಗಿ ಮತ್ತು ಮುಖ್ಯವಾಗಿ, ಬಂಡವಾಳಶಾಹಿ ಬಿಕ್ಕಟ್ಟಿನ ಮಾರ್ಕ್ಸ್ ಸಿದ್ಧಾಂತ ಮತ್ತು ನಂತರ ಸಾಮ್ರಾಜ್ಯಶಾಹಿ ಮತ್ತು ಹಣಕಾಸು ಬಂಡವಾಳದ ಯುಗದಲ್ಲಿ ಯಾವ ರೀತಿಯ ಬಿಕ್ಕಟ್ಟು ಸಂಭವಿಸಬಹುದು ಎಂಬುದನ್ನು ಪಾಲ್ ಸ್ವೀಜಿಯಂತಹ ಪ್ರಸಿದ್ಧ ಮಾರ್ಕ್ಸ್‌ವಾದಿ ವಿದ್ವಾಂಸರು ವಿವರಿಸಿದ್ದಾರೆ. ಮಹಾ ಆರ್ಥಿಕ ಕುಸಿತದ ನಂತರ ಬಂಡವಾಳಶಾಹಿ ಆರ್ಥಿಕತೆಯು ಮತ್ತೆ ಪುನರುಜ್ಜೀವನಗೊಳ್ಳಲು ಸೈದ್ಧಾಂತಿಕ ನೆಲೆಯನ್ನು ಒದಗಿಸಿದ ಪ್ರಖ್ಯಾತ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೇನ್ಸ್ ಸಹ, ಈ ವಿಷಯವನ್ನು ತನ್ನದೇ ಆದ ಶೈಲಿಯಲ್ಲಿ, ಅದರಲ್ಲೂ ವಿಶೇಷವಾಗಿ ತನ್ನ 'ಉದ್ಯೋಗ, ಲಾಭ ಮತ್ತು ಹಣದ ಸಾಮಾನ್ಯ ಸಿದ್ಧಾಂತ' ಸಂಪುಟದ ಅಧ್ಯಾಯ 12 ರಲ್ಲಿ, ಹೀಗೆ ಬರೆಯುತ್ತಾರೆ: "ಸಟ್ಟಾಕೋರರು ಸ್ಥಿರವಾದ ಉದ್ಯಮದಲ್ಲಿ ಗುಳ್ಳೆಗಳಂತೆ ಯಾವುದೇ ಹಾನಿ ಮಾಡಲಾರರು. ಆದರೆ ಉದ್ಯಮವು ಊಹಾಪೋಹಗಳ ಸುಳಿಯಲ್ಲಿ ಗುಳ್ಳೆಯಾಗಿರುವಾಗ ಅದರ ಸ್ಥಾನವು ಗಂಭೀರವಾಗುತ್ತದೆ". ವಾಲ್ ಸ್ಟ್ರೀಟ್ ಕುಸಿತವು, ಆ ಗುಳ್ಳೆ ಒಡೆದಾಗ ಸಂಭವಿಸಬಹುದಾದುದರ ಒಂದು ವಿಶಿಷ್ಟ ಉದಾಹರಣೆಯಾಗಿದೆ.

ಅರ್ಥಶಾಸ್ತ್ರದ ಇತ್ತೀಚಿನ ನೊಬೆಲ್ ಪ್ರಶಸ್ತಿ ವಿಜೇತ ಪಾಲ್ ಕ್ರುಗ್ಮನ್ ಕೂಡ 2001 ರಲ್ಲಿಯೇ ಯುಎಸ್ ಆರ್ಥಿಕತೆಯಲ್ಲಿ ಸನ್ನಿಹಿತವಾಗುತ್ತಿರುವ ಬಿಕ್ಕಟ್ಟು ಇಂದು ತೆರೆದುಕೊಂಡಿದೆಯೆಂದು ಮುನ್ಸೂಚನೆ ನೀಡಿದ್ದರು.

ರಾಷ್ಟ್ರೀಯ ಪರಿಸ್ಥಿತಿ

ಕಾರ್ಮಿಕ ವರ್ಗದ ಮೇಲೆ ಹಿಂಜರಿತದ ಆಳವಾದ ಪರಿಣಾಮ

ಭಾರತದಲ್ಲಿ, ಭಾರತದ ಆರ್ಥಿಕತೆಯ ಮೂಲಭೂತ ಅಂಶಗಳು ಪ್ರಬಲವಾಗಿರುವುದರಿಂದ ಈ ವಿಶ್ವ ಬಿಕ್ಕಟ್ಟಿನಿಂದ ಭಾರತಕ್ಕೆ ತೊಂದರೆಯಾಗುವುದಿಲ್ಲ ಎಂದು ಪ್ರಧಾನಿ ಮತ್ತು ಕೇಂದ್ರ ಹಣಕಾಸು ಸಚಿವರು ಘೋಷಿಸಿದರೂ, ಕೆಲವೇ ದಿನಗಳಲ್ಲಿ ಅವರು ಸಂಪೂರ್ಣವಾಗಿ ಕಂಗೆಟ್ಟು, ಭಾರತದ ಬ್ಯಾಂಕುಗಳ ದ್ರವ್ಯತೆಯನ್ನು ಉಳಿಸಿಕೊಳ್ಳಲು ಅದರ ಸಂಪೂರ್ಣ ಠೇವಣಿಯನ್ನು ಬಿಡುಗಡೆ ಮಾಡಲು ಭಾರತದ ರಿಸರ್ವ್ ಬ್ಯಾಂಕ್ ಅನ್ನು ಕೇಳಿದರು.

ಇದಲ್ಲದೆ, ಬಿಕ್ಕಟ್ಟಿನ ಪ್ರಾರಂಭದೊಂದಿಗೆ, ಜೆಟ್ ಏರ್ವೇಸ್ ಕಾರ್ಮಿಕ ಸಂಘಗಳ ಬಲವಾದ ಚಳುವಳಿಯ ಬೆದರಿಕೆಗಳಿಂದ ಮತ್ತು ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿ ಅಂತಹ ವಜಾ ಸರಿಯಲ್ಲ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವರು ಜೆಟ್ ಏರ್ವೇಸ್ ಅಧಿಕಾರಿಗಳಿಗೆ ಮನವಿ ಮಾಡಿದ್ದ ಕಾರಣ ಇತ್ತೀಚೆಗೆ ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದ 1500 ಕಾರ್ಮಿಕರನ್ನು ವಜಾಗೊಳಿಸಿತು.

ಇದಲ್ಲದೆ, ಸೂರತ್ ಮತ್ತು ಗುಜರಾತ್ ಮತ್ತು ಮಹಾರಾಷ್ಟ್ರದ ಇತರ ಸ್ಥಳಗಳಲ್ಲಿ ಆರ್ಥಿಕ ಹಿಂಜರಿತದ ಕಾರಣದಿಂದಾಗಿ ಡೈಮಂಡ್ ಕಟಿಂಗ್ ಉದ್ಯಮದ ಸಾವಿರಾರು ಕಾರ್ಮಿಕರನ್ನು ರಿಟ್ರೆಂಚ್ ಮಾಡಲಾಗುತ್ತಿದೆ ಎಂದು ವರದಿಯಾಯಿತು. ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನ ಡನ್‌ಲಪ್ ಟೈರ್ ಇಂಡಸ್ಟ್ರಿ ಕೂಡ ಮಾರುಕಟ್ಟೆಯಲ್ಲಿನ ಆರ್ಥಿಕ ಹಿಂಜರಿತದಿಂದಾಗಿ ತಮ್ಮ ಕಾರ್ಮಿಕರನ್ನು ವಜಾಗೊಳಿಸಿತು. ಅದೇ ಕಾರಣಕ್ಕಾಗಿ ಉಕ್ಕಿನ ಬೇಡಿಕೆ ಕುಸಿಯುತ್ತಿದೆ ಎಂದು ಭಾರತದ ಉಕ್ಕಿನ ಉದ್ಯಮವೂ ತೀವ್ರವಾಗಿ ಭಾವಿಸಿತು. ಭಾರತದಲ್ಲಿ ನಾಗರಿಕ ವಿಮಾನಯಾನ ಮತ್ತು ಹೋಟೆಲ್ ಉದ್ಯಮವೂ ಆರ್ಥಿಕ ಹಿಂಜರಿತದಿಂದ ಪ್ರಭಾವಿತವಾದವು. ಕಾರ್ಮಿಕರನ್ನು ವಜಾಮಾಡಬೇಡಿ ಎಂದು ಪ್ರಧಾನಿ ಮತ್ತು ಕೇಂದ್ರ ಹಣಕಾಸು ಸಚಿವರು ಕಾರ್ಪೊರೇಟ್ ಸಂಸ್ಥೆಗಳಿಗೆ ಮನವಿ ಮಾಡಿದರೂ, ಅದಕ್ಕೆ ಕಾರ್ಪೊರೇಟ್ ಮೇಲಧಿಕಾರಿಗಳು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಕೇಂದ್ರ ಕಾರ್ಮಿಕ ಸಚಿವ ಆಸ್ಕರ್ ಫರ್ನಾಂಡೀಸ್ ಅಲ್ಪಾವಧಿಯಲ್ಲಿಯೇ ಹೆಚ್ಚಿನ ವಜಾಗಳ ಸಾಧ್ಯತೆಯ ಬಗ್ಗೆ ಭೀತಿ ವ್ಯಕ್ತಪಡಿಸಿದರು ಮತ್ತು ಜವಳಿ ವಲಯದಲ್ಲಿ 5 ಲಕ್ಷ ಉದ್ಯೋಗಿಗಳನ್ನು ರಿಟ್ರೆಂಚ್ ಮಾಡುವ ಕರಾಳ ಸಾಧ್ಯತೆಯನ್ನು ಕೇಂದ್ರ ವಾಣಿಜ್ಯ ಸಚಿವಾಲಯ ಘೋಷಿಸಿತು. ಇತರ ಕ್ಷೇತ್ರಗಳಲ್ಲಿಯೂ, ಲೇಬರ್ ಬ್ಯೂರೋ ಅಂಕಿ-ಅಂಶಗಳ ಪ್ರಕಾರ, ಹಲವಾರು ಲಕ್ಷ ಕಾರ್ಮಿಕರು ಉದ್ಯೋಗ ಕಳೆದುಕೊಂಡರು.

ವಾಸ್ತವವಾಗಿ, ಉಕ್ಕು, ಜವಳಿ, ಎಂಜಿನಿಯರಿಂಗ್, ಸಣ್ಣ ಪ್ರಮಾಣದ ಕೈಗಾರಿಕೆಗಳು, ವಿಮಾನಯಾನ, ನಿರ್ಮಾಣ ಉದ್ಯಮಗಳಂತಹ ಎಲ್ಲಾ ದೊಡ್ಡ ಕೈಗಾರಿಕೆಗಳು ಆರ್ಥಿಕ ಹಿಂಜರಿತದಿಂದ ತೀವ್ರವಾಗಿ ನರಳಿದವು. ಮತ್ತು ಆಹಾರ ಸಾಮಗ್ರಿಗಳ ಬೆಲೆಗಳು ಮತ್ತು ಇತರ ಎಲ್ಲ ವಸ್ತುಗಳ ಬೆಲೆ ತೀವ್ರವಾಗಿ ಏರಿಕೆಯಾಯಿತು.

ಅಮೇರಿಕಾದಲ್ಲಿ ಆಳವಾದ ಆರ್ಥಿಕ ಹಿಂಜರಿತದ ಆರಂಭದಲ್ಲಿ ಮಾಹಿತಿ-ತಂತ್ರಜ್ಞಾನ ಕೈಗಾರಿಕೆ ಮತ್ತು ಕಾಲ್ ಸೆಂಟರ್‌ಗಳು ಆತಂಕಕ್ಕೊಳಗಾಗಿದ್ದು, ಈ ಕೈಗಾರಿಕೆಗಳು ಭಾರತದಲ್ಲಿ ಬದುಕುಳಿಯಲು ಗಂಭೀರ ಅಡಚಣೆಯನ್ನು ಉಂಟುಮಾಡಿತು.

ಮಂದಗತಿಯು, ವಿಶೇಷವಾಗಿ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳು ಮತ್ತು ಉತ್ಪಾದನೆಯ ಮೇಲೆ ಪರಿಣಾಮ ಬೀರಿತು. ವಿಶೇಷವಾಗಿ ರಫ್ತು ಕ್ಷೇತ್ರಗಳಲ್ಲಿ ಉದ್ಯೋಗ ನಷ್ಟ ಮುಂದುವರಿಯಿತು. ಭಾರತದ ರಫ್ತು ಮತ್ತು ಉದ್ಯೋಗದ ಮೇಲಿನ ಜಾಗತಿಕ ಮಂದಗತಿಯ ಪರಿಣಾಮದ ಕುರಿತು ಯು.ಎನ್.ಸಿ.ಟಿ.ಎ.ಡಿ ತಯಾರಿಸಿದ ಕರಡು ವರದಿಯು (ಮೇ 2009) ಜವಳಿ, ರತ್ನಗಳು ಮತ್ತು ಆಭರಣಗಳು, ಅದಿರು ಮತ್ತು ಖನಿಜಗಳಂತಹ ಕ್ಷೇತ್ರಗಳಲ್ಲಿ ಒಟ್ಟು ಉದ್ಯೋಗ ನಷ್ಟವು ಸುಮಾರು 11.6 ಲಕ್ಷ 2008-09ರಲ್ಲಿ ಮತ್ತು 2009-10ರಲ್ಲಿ ಇದು ಸುಮಾರು 13 ಲಕ್ಷ ಎಂದು ಅಂದಾಜಿಸಿತು.

"ಭಾರತದಲ್ಲಿ 83.6 ಕೋಟಿ ಜನರು ದಿನಕ್ಕೆ ರೂ. 20 ಕ್ಕಿಂತ ಕಡಿಮೆ ತಲಾ ಬಳಕೆಯಲ್ಲಿ ವಾಸಿಸುತ್ತಿದ್ದಾರೆ" ಎಂದಿತು ಅಸಂಘಟಿತ ವಲಯದಲ್ಲಿ ಕೆಲಸದ ಪರಿಸ್ಥಿತಿಗಳು ಮತ್ತು ಜೀವನೋಪಾಯದ ಉತ್ತೇಜನೆ ಕುರಿತ ಅರ್ಜುನ್ ಸೇನ್‌ಗುಪ್ತಾ ವರದಿ. ಈ ವರದಿಯು, 1993-94 ಮತ್ತು 2004-05ರ ನಡುವಿನ ಅವಧಿಯ ಸರ್ಕಾರದ ದತ್ತಾಂಶವನ್ನು ಆಧರಿಸಿದೆ. ಈ ಸಂಖ್ಯೆಗಳು 10 ಕೋಟಿಯಷ್ಟು ಏರಿಕೆಯಾಗಿದ್ದರೆ, ಹೊಸ ಶ್ರೀಮಂತರ ಸಂಖ್ಯೆಯೂ ಸಹ 93 ಲಕ್ಷ ಹೆಚ್ಚಾಗಿದೆ. "ನಮ್ಮ ಸಮೀಕ್ಷೆಯು ಬಹಳ ವೈಜ್ಞಾನಿಕವಾಗಿದೆ. ಇತರ ಬಡತನದ ಅಂದಾಜುಗಳು ಸಂಪೂರ್ಣ ಬಡವರನ್ನು ಮಾತ್ರ ನೋಡಿದವು, ಆದರೆ ನಾವು ವಿವಿಧ ವರ್ಗದ ಬಡವರನ್ನು ನೋಡುತ್ತೇವೆ" ಎಂದು ಅಸಂಘಟಿತ ವಲಯದ ಉದ್ಯಮಗಳ ರಾಷ್ಟ್ರೀಯ ಆಯೋಗದ ಅಧ್ಯಕ್ಷ ಅರ್ಜುನ್ ಸೇನ್‌ಗುಪ್ತಾ ಹೇಳಿದರು.

ಪುಟ 14 ನೋಡಿ

ಮಹಿಳೆಯರ, ಬಡವರ ಮೇಲೆ ದಾಳಿಯ......

ಪುಟ 8 ರಿಂದ

ಸಿಗ್ಗಿಲ್ಲದೇಯೇ ನಡೆಯುತ್ತಿವೆ. ಎಂದರೆ ಉತ್ತರ ಪ್ರದೇಶ ಸರಕಾರ ಪಿ.ಸಿ.ಪಿ.ಎನ್.ಡಿ.ಟಿ ಕಾಯ್ದೆಯ ಸಮರ್ಪಕ ಅನುಷ್ಠಾನದತ್ತ ಗಮನ ಹರಿಸಿಲ್ಲ ಅಥವಾ ದುರ್ಬಲಗೊಳಿಸಿದೆ. ಇನ್ನು ಮುಂದೆ ಎರಡಕ್ಕಿಂತ ಹೆಚ್ಚು ಮಕ್ಕಳು ಎಲ್ಲ ರೀತಿಯ ಅವಕಾಶಗಳಿಗೆ ಮಾರಕ ಎಂಬುದು ಕಾಯ್ದೆಯಾಗಿ ಬಂದರೆ ಯಾವ ಮುಲಾಜೂ ಇಲ್ಲದೆಯೇ ಲಿಂಗಾಧಾರಿತ ಗರ್ಭಪಾತಗಳು ರಾಜಾರೋಷವಾಗಿ ನಡೆಯುತ್ತವೆ ಇಲ್ಲವೇ ಹೆಣ್ಣು ಹಡೆದಳೆಂಬ ಕಾರಣಕ್ಕೆ ಪತಿಯ ಕುಟುಂಬದಿಂದ ಹೊರದಬ್ಬಿಸಿಕೊಳ್ಳುವ ಮಹಿಳೆಯರ ಸಂಖ್ಯೆ ಹೆಚ್ಚುತ್ತದೆ. ಇವು ಸಮಾಜದಲ್ಲಿರುವ ಅಸಮತೋಲಿತ ಲಿಂಗಾನುಪಾತವನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಈಗಾಗಲೇ ದೃಢಪಟ್ಟಿರುವಂತೆ ಹೆಣ್ಣಿಗೆ ತನ್ನ ದೇಹದ ಮೇಲಾಗಲಿ, ಹೆರುವ ಸಂಖ್ಯೆಯ ಮೇಲಾಗಲಿ ಯಾವುದೇ ಅಧಿಕಾರವಿಲ್ಲ. ಒಂದೆಡೆ ಕೌಟುಂಬಿಕ ನೆಲೆಯಲ್ಲಿ ತನ್ನದಲ್ಲದ ತಪ್ಪಿಗೆ ಬೆಲೆ ತೆರುವ ಮಹಿಳೆಯರಾದರೆ ಇನ್ನೊಂದೆಡೆ ಲೈಂಗಿಕ ದೌರ್ಜನ್ಯ ಅತ್ಯಾಚಾರಗಳು ಹೆಚ್ಚಿವೆ. ಈಗಲೇ ಸರಕಾರದ, ಅಧಿಕಾರದ ಕೃಪಾಪೋಷಿತವಾಗಿಯೂ ನಡೆಯುತ್ತಿರುವ ಘಟನೆಗಳಿವೆ. ಅದಿಲ್ಲದೆಯೂ ಅಂಕೆ –ಸಂಖೆಯ ಅಳತೆಗೆ ಸಿಗದಂತೆ ನಡೆಯುತ್ತಿರುವ ಅತ್ಯಾಚಾರದಂತಹ ಪ್ರಕರಣಗಳು ಹಾದಿ ಬೀದಿಯಲ್ಲಿ ನಡೆದರೆ ಅಚ್ಚರಿ ಪಡಬೇಕಿಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗುತ್ತದೆ. ಈಗ ಕೆಲವು ವರ್ಷಗಳ ಹಿಂದೆ ಬಹಳ ಸದ್ದು ಮಾಡುತ್ತಿದ್ದ ಈಗಲೂ ಗುಟ್ಟಾಗಿ ನಡೆಯುತ್ತಿರಬಹುದಾದ ಗುಜ್ಜರ್ ಕೀ ಶಾದಿ ಅಥವಾ 'ಕೊಂಡು ತಂದ ಹೆಂಡತಿ'– (ಬಾಟ್ ವೈವ್ಸ್) ಹೆಸರಿನಲ್ಲಿ ಪಂಜಾಬ್ ಮುಂತಾದ ಕೆಲವು ರಾಜ್ಯಗಳಿಗೆ ಇತರ ರಾಜ್ಯಗಳ ಬಡ ಕುಟುಂಬಗಳ ಹೆಣ್ಣುಮಕ್ಕಳನ್ನು ಖರೀದಿಗೆ ಕೊಂಡುಹೋಗಿ ಕುಟುಂಬದ ಪುರುಷರಿಗೆಲ್ಲ ಹೆಂಡತಿಯಾಗುವಂತಹ ಸ್ಥಿತಿಗಳು, ಲಿಂಗಾಧಾರಿತ ಭ್ರೂಣಹತ್ಯೆಗಳ ಕಾರಣದಿಂದಾಗಿ ಕುಸಿದ ಲಿಂಗಾನುಪಾತಗಳಿಂದ ವಿವಾಹ ಯೋಗ್ಯ ಯುವತಿಯರ ಅಲಭ್ಯತೆ ತೀವ್ರವಾಗಿ ಉಂಟಾಗಿತ್ತು. ಅದಿನ್ನಷ್ಟು ಹೆಚ್ಚಿ ಯಾವುದೇ ಆಯ್ಕೆ ಸ್ವಾತಂತ್ರವಿಲ್ಲದಿರುವ ಹೆಣ್ಣು ಮಕ್ಕಳು ತೀವ್ರವಾದ ದೌರ್ಜನ್ಯಕ್ಕೆ ಒಳಗಾಗುತ್ತಾರೆ.

ಇದರ ಜೊತೆಯೇ ಬಲವಂತದ ಸಂತಾನಹರಣ ಎನ್ನುವಾಗ ಸಾಮಾನ್ಯವಾಗಿ ಸಂತಾನಹರಣ ಶಸ್ತ್ರ ಚಿಕಿತ್ಸೆಗಳಿಗೆ ಮಹಿಳೆಯರೇ ಒಳಗಾಗುವುದು ಚಾರಿತ್ರಿಕ ಸತ್ಯ. ಈಗ ಮತ್ತೆ ಆಕೆಯ ಮೇಲೇ ಒತ್ತಡ ಸಹಜವೆಂಬಂತೆ ಬೀಳುತ್ತದೆ. 2017–18 ರ ಎನ್. ಎಫ್.ಎಚ್.ಎಸ್ ವರದಿ ಕೂಡಾ ಹೇಳುವಂತೆ ಸಂತಾನಹರಣಕ್ಕೆ ಒಳಗಾದವರಲ್ಲಿ 93.1% ಮಹಿಳೆಯರು.

ಯೋಗಿ ಆದಿತ್ಯನಾಥರಿಗೆ ಇದರ ಅರಿವಿದೆಯೇ? ಅಥವಾ ಅಲ್ಲಿಗೆ ಮಾರ್ದನಿಯಾಗಿ ಸ್ವರ ಸೇರಿಸಿದ ಸಿ.ಟಿ. ರವಿ ಅವರಿಗಾಗಲಿ ಡಾ.ಸುಧಾಕರ್ ಅವರಿಗಾಗಲಿ ಈ ಸತ್ಯಗಳ ಅರಿವಿದೆಯೇ?

ಜನರ ಹಕ್ಕುಗಳ ಮೇಲಿನ ನಿರಂತರ ದಾಳಿಗೆ ಇನ್ನಷ್ಟು ಬಲ ಕೊಡುವ ನೀತಿ:

ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿರುವ ಹಾಗೆ ಮಕ್ಕಳ ಸಂಖ್ಯೆಗೂ ಸಾಮಾಜಿಕ ಆರ್ಥಿಕ ಸ್ಥಿತಿಗೂ ನೇರ ಸಂಬಂಧವಿದೆ. ಯಾವುದೇ ಸರಕಾರಕ್ಕೆ ಇರಬೇಕಾದ ಕಾಳಜಿ ಜನರ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಅಗತ್ಯಗಳ ಪೂರೈಕೆಗೆ ಸರಿಯಾದ ವ್ಯವಸ್ಥೆ ಮಾಡುವ ಮೂಲಕ ಜನಸಂಖ್ಯೆಯನ್ನೂ ನಿಯಂತ್ರಣಕ್ಕೆ ತರುವುದಾಗಬೇಕು. ಬಡತನ, ಶಿಕ್ಷಣದಿಂದ ವಂಚನೆಗಳಿಗೂ ಕುಟುಂಬದ ಮಕ್ಕಳ ಸಂಖ್ಯೆಗೂ ನೇರಾನೇರ ಸಂಬಂಧವಿದೆ. ಈ ನೀತಿ ಜಾರಿಗೆ ಬಂದಲ್ಲಿ ಎರಡನೇಯ ಮಗುವಿನ ನಂತರ ಅಕಸ್ಮಾತ್ ಹುಟ್ಟುವ ಮಗು ಅಂಗನವಾಡಿಯಿಂದಲೂ ವಂಚಿತವಾಗಬಹುದಾಗಿದೆ. ಅಲ್ಲದೇ ಇದರಲ್ಲಿ ಪ್ರಸ್ತಾಪಿಸಿದಂತೆ ಒಂದು ಕುಟುಂಬಕ್ಕೆ 4 ಯುನಿಟ್ ಮಾತ್ರ ರೇಷನ್ ಎನ್ನುವ ಕಲಮು ರಾಷ್ಟ್ರೀಯ ಆಹಾರ ಸುರಕ್ಷಾ ಕಾನೂನಿಗೆ ವಿರುದ್ಧವಾಗುತ್ತದೆ. ಆಹಾರವೆಂಬ ಅತ್ಯಗತ್ಯ ಅವಶ್ಯಕತೆಯನ್ನು ಪೂರೈಸುವುದು ಸರಕಾರಗಳ ಸಾಂವಿಧಾನಿಕ ಕರ್ತವ್ಯವೆಂದು ಕೇಂದ್ರದ ಈ ಯೋಜನೆ ಹೇಳಿದರೆ ಅದಕ್ಕೆ ಪ್ರತಿಕೂಲವಾಗಿ ರಾಜ್ಯ ಸರಕಾರವೊಂದು ತರುವ ಈ ಕಾಯ್ದೆಗೆ ಕೇಂದ್ರ ಸರಕಾರ ಕಣ್ಣುಮುಚ್ಚಿ ಮೌನ ಸಮ್ಮತಿ ನೀಡುವುದೇ? ಯಾಕೆಂದರೆ ಈ ಪ್ರಸ್ತಾಪಿತ ಕರಡು 'ಇದು ಉಳಿದೆಲ್ಲ ಕಾನೂನುಗಳಿಗೆ ಅತಿರಿಕ್ತವಾದ ಕಾನೂನು' ಎನ್ನುತ್ತದೆ. ಹಾಗಾದರೆ ಇತ್ತೀಚೆಗೆ ದೆಹಲಿ ಸರಕಾರ ಕೊರೊನಾ ಕಾಲದಲ್ಲಿ ಮನೆ ಮನೆಗೆ ಆಹಾರ ಧಾನ್ಯ ಪೂರೈಕೆಗೆ ಮುಂದಾದಾಗ ಅದು ಆಹಾರ ಸುರಕ್ಷಾ ಕಾಯ್ದೆಗೆ ವಿರುದ್ಧವಾಗಿದೆ ಎಂದು ತಡೆ ಹಿಡಿದಿದ್ದು ಯಾಕೆ ಎಂಬ ಪ್ರಶ್ನೆಗೆ ಉತ್ತರ ನೀಡಲಿ ಕೇಂದ್ರ ಸರಕಾರ.

ಮುಕ್ತ ಆರ್ಥಿಕ ನೀತಿಗಳನ್ನು ಎಗ್ಗು ಸಿಗ್ಗಿಲ್ಲದೇ ಜಾರಿಗೆ ತಂದ ಸರಕಾರ ಬಹುಸಂಖ್ಯಾತ ದುಡಿಯುವ ಜನರನ್ನು ದಾರಿದ್ರ್ಯದ ಅಂಚಿಗೆ ತಳ್ಳಿದೆ. ಎರಡು ಹೊತ್ತಿನ ಊಟಕ್ಕೂ ಪರದಾಡುವ ಜನರಿಗೆ ಅವರ ಜೀವನಾಗತ್ಯ ವಸ್ತುಗಳನ್ನೂ ನಿರಾಕರಿಸುವ ಮತ್ತು ಪ್ರಜಾಪ್ರಭುತ್ವದ ಪ್ರಮುಖ ಕರ್ತವ್ಯಗಳಲ್ಲೊಂದಾದ ಚುನಾವಣೆಯಲ್ಲಿ ಸ್ಪರ್ಧೆಗೆ ಅನರ್ಹರನ್ನಾಗಿಸುವುದು, ರೇಷನ್ ಕೊಡದಿರುವುದು, ಬಡ್ತಿ ನಿರಾಕರಣೆ, ವೇತನ ಹೆಚ್ಚಳ ನಿಲ್ಲಿಸುವುದು ಇವೆಲ್ಲ ಕ್ಷುಲ್ಲಕ ರಾಜಕಾರಣವಲ್ಲದೇ ಮತ್ತೇನೂ ಅಲ್ಲ.

ಕೊರೊನ ಉಪಟಳ, ಲಾಕ್ ಡೌನ್ ಬಾಧೆಗಳಿಂದ ಸರಿಯಾದ ಕೆಲಸ ವೇತನ ಊಟ, ಪೌಷ್ಟಿಕ ಆಹಾರಗಳಿಲ್ಲದೆಯೇ ಕಂಗೆಟ್ಟ ಜನರಿಗೆ ಕನಿಷ್ಟ ಆಹಾರ ಮತ್ತಿತರ ಅಗತ್ಯವನ್ನೂ ಇಂಥಹ ಕರಾಳ ನೀತಿಗಳ ಮೂಲಕ ಜಾರಿ ತರುವುದೆಂದರೆ ಇನ್ನಷ್ಟು ಮಕ್ಕಳನ್ನು ಅಪೌಷ್ಟಿಕತೆಗೆ, ಮರಣಕ್ಕೆ ದೂಡುವುದಲ್ಲದೇ ಮತ್ತೇನೂ ಅಲ್ಲ.

ಕೋಮುವಾದೀ ಅಜೆಂಡಾ

ಇದು ಒಂದು ಕಡೆ ಎಲ್ಲ ಬಡವರ ಮೇಲಿನ ದಾಳಿಯಾದರೆ ಇನ್ನೊಂದು ಕಡೆ ಮುಸ್ಲಿಂ ಅಲ್ಪ ಸಂಖ್ಯಾತರ ಕುರಿತು ಸಂಘಿ ಗುಂಪುಗಳು ಮತ್ತು ಬಿ.ಜೆ.ಪಿ ಎಂದಿನಿಂದಲೂ ಮಾಡಿಕೊಂಡು ಬಂದಿರುವ ಅಪಪ್ರಚಾರಕ್ಕೆ ಇನ್ನಷ್ಟು ಬಲ ಕೊಡುವ ಪ್ರಯತ್ನವಿದಾಗಿದೆ. ಆದರೆ ಟಿ.ಎಫ್.ಆರ್ ಬಹಳ ಸ್ಪಷ್ಟವಾಗಿ ಹೇಳುವಂತೆ ಮುಸ್ಲಿಂ ಸಮುದಾಯದಲ್ಲಿ ಇಳಿಕೆ ಕಂಡುಬರುತ್ತಿದೆ. ಆದರೆ ಜನರ ಮನಸ್ಸಿನಲ್ಲಿ ಅದನ್ನು ಬೇರೆಯದೇ ರೀತಿಯಲ್ಲಿ ನೆಡುವ ಕೆಲಸವನ್ನು ಸಂಘೀ ಗುಂಪುಗಳು ಇನ್ನಷ್ಟು ವ್ಯಾಪಕಗೊಳಿಸಲು ಇದು ಅಸ್ತ್ರವಾಗಬಹುದು. ಯಾಕೆಂದರೆ ಆದಿತ್ಯನಾಥರ ಸರಕಾರ ಬಹುಪತ್ನಿತ್ವ ಮತ್ತು ಕೆಲವು ಸಮುದಾಯಗಳ ಕುಟುಂಬಗಳು ಹೊಂದುವ ಹೆಚ್ಚು ಮಕ್ಕಳನ್ನು ಸುತ್ತುವರೆದು ಮಾಡುವ ಟೀಕೆಗಳು ಕೇಳುತ್ತಲೇ ಇರುತ್ತವೆ. ಹಾಗಾಗಿಯೆ ಜನಸಂಖ್ಯಾ ನಿಯಂತ್ರಣದ ಹೆಸರಿನಲ್ಲಿಯೂ ಕೋಮುವಾದೀ ಅಜೆಂಡಾ ಕಣ್ಣಿಗೆ ರಾಚುತ್ತದೆ.

ಕೊನೆಯದಾಗಿ ಗಮನ ಹರಿಸಬೇಕಾದ ಸಂಗತಿ ಈಗಾಗಲೆ ವಿದ್ಯಾರ್ಹತೆ, ಶೌಚಾಲಯ ಮತ್ತಿತರ ನಿಬಂಧನೆಗಳನ್ನು ವಿಧಿಸಿ ಸ್ಥಳೀಯ ಚುನಾವಣೆಯಲ್ಲಿ ಸ್ಪರ್ಧೆ ಮಾಡದಂತೆ ಕ್ರಮ ಕೈಗೊಂಡು ಅಭಿವೃದ್ಧಿ ಸಾಧಿಸಲು ಹೊರಟ ರಾಜ್ಯಗಳಲ್ಲಿ ವ್ಯತಿರಿಕ್ತ ಪರಿಣಾಮಗಳು ಕಂಡು ಬಂದಿವೆ. ಕನಿಷ್ಟ ವಿದ್ಯಾರ್ಹತೆಯ್ಯು ನಿಗದಿಗೊಳಿಸಿ ಶಿಕ್ಷಿತರು ಪ್ರಜಾಪ್ರತಿನಿಧಿಗಳಾದರೆ ಉತ್ತಮ ಅಭಿವೃದ್ಧಿಯಾಗುತ್ತದೆ ಎಂಬ ಹುಸಿವಾದದೊಂದಿಗೆ ನಡೆಸಿದ ಚುನಾವಣೆಗಳ ಕಾರಣದಿಂದಾಗಿ ಎಷ್ಟೋ ವರ್ಷಗಳಿಂದ ನೆಲಮೂಲದಲ್ಲಿ ಕೆಲಸ ಮಾಡುತ್ತಿದ್ದ ಸಾಮಾಜಿಕ ಕಾರ್ಯಕರ್ತರು ಈ ಸಮಾಜದ ಲೋಪ ದೋಷದಿಂದ ಶಿಕ್ಷಣ ವಂಚಿತರಾದರೂ ಪಡೆದ ಲೋಕಶಿಕ್ಷಣವನ್ನು ಪರಿಗಣಿಸದೇ ಅಕ್ಷರಜ್ಞಾನವೇ ಪ್ರಮುಖ ಎಂದು ಪರಿಗಣಿಸಿದ್ದರಿಂದ ನೂರಾರು ಸ್ಥಾನಗಳು ಸ್ಪರ್ಧಾಳುಗಳೇ ಇಲ್ಲದೇ ಖಾಲಿ ಉಳಿದ ಇತಿಹಾಸವಿದೆ. ಇನ್ನು ಎಷ್ಟೋ ಜನ ಆಯ್ಕೆಗೆ ಅನರ್ಹರಾಗಿ ನಿರಾಶರಾಗಬೇಕಾಗಿಯೂ ಬಂದಿದೆ.

ಉದಾಹರಣೆಯಾಗಿ ಹರಿಯಾಣದಲ್ಲಿ ಕನಿಷ್ಟ ವಿದ್ಯಾರ್ಹತೆ, ಶೌಚಾಲಯ, ಮತ್ತು ಬ್ಯಾಂಕ್ ಸಾಲದ ಸುಸ್ತಿದಾರರಲ್ಲದವರು ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಕಲ್ಪಿಸಿ ಪಂಚಾಯತಿ ರಾಜ್ ಕಾಯ್ದೆಗೆ ತಿದ್ದುಪಡಿ ತರಲಾಯಿತು. ಇದರ ಪರಿಣಾಮವಾಗಿ 2010 ಮತ್ತು 2015ರ ಚುನಾವಣೆಗಳಲ್ಲಿ ಕಂಡು ಬಂದ ಫಲಿತಾಂಶವನ್ನು ನೋಡಬೇಕು. ಚುನಾವಣೆಯಲ್ಲಿ ಸ್ಪರ್ಧಿಸಲು ಅನುಕೂಲವಾಗಲೆಂದು ಅಗತ್ಯ ಶಿಕ್ಷಣ ಪಡೆದ ಯುವತಿಯರನ್ನು ಯಾವುದೇ ಶಿಕ್ಷಣವಿಲ್ಲದ ಯುವಕನ ಜೊತೆ ಅವಸರವಸರವಾಗಿ ಮದುವೆ ಮಾಡಿದ, ಮೊದಲ ಹೆಂಡತಿ ಇರುವಾಗಲೂ ವಿದ್ಯೆ ಕಲಿತ ಮತ್ತೊಬ್ಬ ಯುವತಿಯನ್ನು ಮದುವೆ ಮಾಡಿದ ಘಟನೆಗಳು ನಡೆದವು. ಹಾಗಿದ್ದೂ 1898 ಪಂಚಾಯತ್ ಪಂಚರ, 5 ಸರಪಂಚರ 2 ಪಂಚಾಯತ್ ಸಮಿತಿಗಳಿಗೆ ಅಭ್ಯರ್ಥಿಗಳಿಲ್ಲದಂತೆ ಖಾಲಿ ಉಳಿದವು. ಹೀಗೆ ಉಳಿದವುಗಳು ಬಹುತೇಕ ಮಹಿಳಾ ಮೀಸಲು ಮತ್ತು ದಲಿತ ಮೀಸಲು ಸ್ಥಾನಗಳಾಗಿದ್ದವು. ಹಾಗೆಯೇ 2015 ಮತ್ತು 2010 ಕ್ಕೆ ಹೋಲಿಕೆ ಮಾಡಿದಾಗ 2010 ರಲ್ಲಿ 2,90,547 ಜನರು ಸ್ಪರ್ಧೆ ಮಾಡಿದ್ದರೆ 2015 ರಲ್ಲಿ 1.70,504 ಜನ ಮಾತ್ರ ಸ್ಪರ್ಧೆ ಮಾಡಲಾಯಿತು. ಅದರಲ್ಲಿ 54.4% ಜನ ಅವಿರೋಧವಾಗಿ ಆಯ್ಕೆಯಾದರು ಮತ್ತು 19.5% ಸ್ಥಾನ ಖಾಲಿಯೇ ಉಳಿಯಿತು. ಹೀಗೆ ನೆಲದ ವಾಸ್ತವವನ್ನು ಅರ್ಥ ಮಾಡಿಕೊಳ್ಳದೇ ಮೇಲ್ಪದರದ ನೀತಿಗಳನ್ನು ಜಾರಿಗೆ ತಂದರೆ ಬಹಳ ವಿಷಯಗಳಲ್ಲಿ ವಿಫಲವಾಗುತ್ತಿರುವಂತೆ ಭಾಸವಾಗುತ್ತಿರುವ ಪ್ರಜಾಪ್ರಭುತ್ವ ವ್ಯವಸ್ಥೆ ಇನ್ನಷ್ಟು ಶಿಥಿಲಗೊಳ್ಳುತ್ತದೆ. ಇದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯ ಭಾಗವಾಗಿಯೇ ಆಯ್ಕೆಯಾಗಿ ಬಂದು ಅದರ ಬುಡಕ್ಕೇ ನೀರು ಹರಿಸುತ್ತಿರುವ ಜನರ ತಂತ್ರವೆಂದು ನಾವು ಅರ್ಥಮಾಡಿಕೊಳ್ಳಬೇಕು. ಜನ ಸಂಖ್ಯೆಯ ಸ್ಫೋಟವಾಗದಂತೆ ಕಾಪಾಡಿಕೊಳ್ಳಲು ಸರ್ವಾಂಗೀಣ ಅಭಿವೃದ್ಧಿಯಿಂದ ಸಾಧ್ಯ ಎಂಬುದು ಜನಜನಿತವಾದ ಸಂಗತಿ.

ಈ ಎಲ್ಲ ಕಾರಣಗಳು ಉದಾಹರಣೆಗಳು ನಮ್ಮ ಮುಂದಿರುವಾಗ ಚುನಾವಣಾ ತಂತ್ರವಾಗಿ ತಂದ ನೀತಿಯನ್ನು ವಿರೋಧಿಸದೇ ಬೇರೆ ದಾರಿಯಿಲ್ಲ. ಜೊತೆಗೇ ಕರ್ನಾಟಕದಲ್ಲಿ ಅಂಥಹ ಪ್ರಯತ್ನಕ್ಕೇ ಕೈ ಹಾಕದಂತೆ ಒತ್ತಡವೂ ನಿರ್ಮಾಣವಾಗಬೇಕಾದ್ದು ಅಗತ್ಯ ಮತ್ತು ಅನಿವಾರ್ಯ.ಕರ್ನಾಟಕದಲ್ಲಿಯೂ ಜನಸಂಖ್ಯಾ ನೀತಿ ಬೇಕೆನ್ನುವ ಮೂರ್ಖತನದ ವಾದದಲ್ಲಿ ಕಿಂಚಿತ್ತೂ ಹುರುಳಿಲ್ಲ:

ಕರ್ನಾಟಕದ ಎನ್.ಎಫ್.ಎಚ್.ಎಸ್. ವರದಿ ಏನು ಹೇಳಿದೆ:

ಇತ್ತೀಚೆಗೆ ತಾನೇ ಎನ್.ಎಫ್.ಎಚ್.ಎಸ್.–5 –ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5 ಹೊರಬಿದ್ದಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಆ ವರದಿ ಉಲ್ಲೇಖಿಸಿದ ಕೆಲವು ಅಂಶಗಳು ಇಲ್ಲಿನ ಬಿ.ಜೆ.ಪಿ ನಾಯಕರುಗಳ ಗಮನದಲ್ಲಿ ಇಲ್ಲ ಎಂಬುದು ಜನಸಂಖ್ಯಾ ನೀತಿಯನ್ನು ಕರ್ನಾಟಕದಲ್ಲಿಯೂ ತರಬೇಕೆನ್ನುವ ಮಾತುಗಳಿಂದ ಸಾಬೀತಾಗಿದೆ. ಕರ್ನಾಟಕದ ಟಿ.ಎಫ್.ಆರ್ 1.7% ಎಂದರೆ ಸಮತೋಲಿತ ದರ 2 ಅಥವಾ 2.1ಕ್ಕಿಂತ ಕಡಿಮೆ. ನಗರ ಪ್ರದೇಶಗಳಲ್ಲಿ ಅದು 1.5 ಇದ್ದರೆ ಗ್ರಾಮೀಣ ಪ್ರದೇಶಗಳಲ್ಲಿ 1.8 ಇದೆ. ಇದರಲ್ಲಿಯೂ ಶಿಕ್ಷಣ ಪಡೆದ ಮಹಿಳೆಯರು ಮತ್ತು ಶಿಕ್ಷಣದಿಂದ ವಂಚಿತರಾದ ಮಹಿಳೆಯರ ಮಧ್ಯೆ ಇದರಲ್ಲಿ ಕೂಡಾ ಇರುವ ವ್ಯತ್ಯಾಸಗಳು ಕುಟುಂಬದ ಗಾತ್ರ ನಿರ್ಧಾರದಲ್ಲಿ ಶಿಕ್ಷಣ ಕೂಡಾ ಮಹತ್ವದ ಪಾತ್ರ ವಹಿಸುತ್ತದೆ ಎಂಬ ಮಾತನ್ನು ದೃಢೀಕರಿಸುತ್ತದೆ. ಅದರ ಪ್ರಕಾರ 12 ವರ್ಷದ ಶಿಕ್ಷಣದ ಅವಕಾಶ ಎಂದರೆ ಪಿ.ಯು.ಸಿ ವರೆಗೆ ಓದಲು ಅವಕಾಶ ಸಿಕ್ಕವರಿಗಿಂತ 0.4% ಈ ಅವಕಾಶ ವಂಚಿತರಲ್ಲಿ ಸಂತಾನೋತ್ಪತ್ತಿ ದರ ಹೆಚ್ಚಿದೆ. ಹಾಗೆಯೇ ಮುಸ್ಲಿಂ ಮಹಿಳೆಯರಲ್ಲಿ ಹಿಂದೂ ಮಹಿಳೆಯರಿಗಿಂತ 0.4% ಹೆಚ್ಚಿದೆ ಎನ್ನುತ್ತದೆ ವರದಿ. ಎಂದರೆ ಶಿಕ್ಷಣ ಮತ್ತು ಸಾಮಾಜಿಕ ನೆಲೆಯಲ್ಲಿ ದೊರೆಯುವ ಅವಕಾಶಗಳು ಮಕ್ಕಳ ಸಂಖ್ಯೆಯನ್ನು ನಿರ್ಧರಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಇದರ ಜೊತೆಯೇ ಎನ್.ಎಫ್.ಎಚ್.ಎಸ್ ವರದಿ ಗುರುತಿಸಿಕೊಂಡಂತೆ ಸಂತಾನೋತ್ಪತ್ತಿ ದರ ಎನ್.ಎಫ್.ಎಚ್.ಎಸ್ 4 ಕ್ಕೆ ಹೋಲಿಸಿದರೆ ಎನ್.ಎಫ್.ಎಚ್.ಎಸ್ 5 ರ ಹೊತ್ತಿಗೆ 0.1% ಇಳಿಕೆಯಾಗಿದೆ.

ಇತ್ತೀಚಿನ ಬೆಳವಣಿಗೆಯಾಗಿ ಕುಟುಂಬ ನಿರ್ವಹಣೆಯ ಒತ್ತಡ ನಿಭಾಯಿಸಲಾರದೇ ಕುಟುಂಬದ ಗಾತ್ರವನ್ನು ಸೀಮಿತಗೊಳಿಸುವ ಮಾದರಿಗಳು ಹೆಚ್ಚಾಗುತ್ತಿವೆ. ಅದಕ್ಕೆ ಪೂರಕವಾದ ಮಾಹಿತಿಗಳು ಎನ್.ಎಫ್.ಎಚ್.ಎಸ್–5 ರ ಪ್ರಕಾರ 15 ರಿಂದ 49 ರ ವಯೋಮಾನದ 69% ಮಹಿಳೆಯರು ಮತ್ತು 64% ಪುರುಷರು ತಮಗೆ ಈಗಿರುವುದಕ್ಕಿಂತ ಹೆಚ್ಚು ಮಕ್ಕಳು ಬೇಡ ಎನ್ನುವ ಅಭಿಪ್ರಾಯ ಹೊಂದಿದ್ದಾರೆ. ಹಾಗೆಯೇ 82% ಮಹಿಳೆಯರು ಮತ್ತು 79% ಪುರುಷರು ಎರಡೇ ಮಕ್ಕಳು ಸಾಕೆಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಪುತ್ರ ಸಂತಾನಾಪೇಕ್ಷೆಯ ಪ್ರಮಾಣ ಹೆಚ್ಚಿದೆ ಎಂದು ಈ ವರದಿ ಗುರುತಿಸಿದೆ. 16% ಪುರುಷರು ಮತ್ತು 14% ಮಹಿಳೆಯರು ತಮಗೆ ಗಂಡು ಮಕ್ಕಳು ಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಗುವೊಂದು ಗಂಡಾದರೆ ಗರ್ಭ ನಿರೋಧಕಗಳನ್ನು ಬಳಸಲು ಮಹಿಳೆಯರು ಹೆಚ್ಚು ಗಮನ ನೀಡುತ್ತಾರೆಂದೂ ವರದಿ ಗುರುತಿಸಿದೆ. ಅದರ ಸಮೀಕ್ಷೆಯ ಪ್ರಕಾರ ಇಬ್ಬರು ಮಕ್ಕಳಲ್ಲಿ ಒಂದು ಗಂಡಾದಾಗ 86% ಮಹಿಳೆಯರು ಗರ್ಭ ನಿರೋಧಕಕ್ಕೆ ಮುಂದಾಗುತ್ತಾರೆ. ಎರಡೂ ಹೆಣ್ಣು ಮಕ್ಕಳಾದಾಗ 75% ಮಾತ್ರ ಗರ್ಭ ನಿರೋಧಕಗಳತ್ತ ಮನಸ್ಸು ಮಾಡುತ್ತಾರೆ ಎನ್ನುತ್ತದೆ ವರದಿ.

ಇದರ ಜೊತೆಯೇ ಶಿಶಿ ಮರಣ, ಮಾತೃ ಮರಣಗಳ ಕಾರಣಗಳತ್ತಲೂ ವರದಿ ಹಲವು ಅಧ್ಯಯನಗಳನ್ನು ಮಾಡಿದೆ. ಶಿಕ್ಷಣ ಪಡೆದ ಮಹಿಳೆಯರ ಸಂದರ್ಭದಲ್ಲಿ ಶಿಶು ಮರಣ 1000ಕ್ಕೆ 20 ಇದ್ದರೆ ಶಿಕ್ಷಣ ಸಿಗದ ತಾಯಿಯ ಸಂದರ್ಭದಲ್ಲಿ ಅದು 36. ಹಾಗೆಯೇ ಪ್ರಸವ ಪೂರ್ವ ಆರೈಕೆಗಾಗಿಯೇ ಹಲವಾರು ಯೋಜನೆಗಳಿರುವ ನಮ್ಮ ರಾಜ್ಯದಲ್ಲಿ ಈಗಲೂ ಕೇವಲ 71% ಮಹಿಳೆಯರಿಗೆ ಈ ಯೋಜನೆಯ ಸೌಲಭ್ಯ ದಕ್ಕಿದೆ. ಸಾಮಾನ್ಯವಾಗಿ ಗರ್ಭ ಧರಿಸಿದ ಅವಧಿಯಿಂದ ಹೆರಿಗೆಯ ಒಳಗೆ 3 ರಿಂದ 4 ಬಾರಿ ನುರಿತ ಪ್ರಸೂತಿ ಸೇವಾಕರ್ತರು ಗರ್ಭಿಣಿಯರನ್ನು ಭೇಟಿ ಮಾಡುವ ಯೋಜನೆಗಳಿವೆ. ಇದರಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ಸಂಗತಿಯನ್ನು ವರದಿ ಗುರುತಿಸಿದೆ. ಪ್ರಸವ ಪೂರ್ವ 3–4 ಭೇಟಿಯನ್ನು ಮುಸ್ಲಿಂ ಮಹಿಳೆಯರು ಹಿಂದೂ ಮತ್ತು ಕ್ರಿಶ್ಚಿಯನ್ ಮಹಿಳೆಯರಿಗಿಂತ ಕಡಿಮೆ ಪ್ರಮಾಣದಲ್ಲಿ ಪಡೆಯುತ್ತಾರೆ. ಇಂಥಹ ಸೂಕ್ಷ್ಮ ಸಂಗತಿಗಳಿಗೂ ಮತ್ತು ಮಕ್ಕಳನ್ನು ಹೆರುವ ದರಕ್ಕೂ ನೇರ ಸಂಬಂಧವಿದೆ ಎಂದು ಕಲ್ಪಿಸಿಕೊಳ್ಳದೆಯೇ ಕೇವಲ ನಾಲಿಗೆಯ ಚಪಲಕ್ಕೆ ಹೇಳಿಕೆ ಕೊಡುವ, ಮತ್ತು ಧರ್ಮಾಧಾರಿತ ದ್ವೇಷ ಬಿತ್ತಲು ಎಲ್ಲವನ್ನೂ ದುರ್ಬಳಕೆ ಮಾಡಿಕೊಳ್ಳುವ ಸಂಘಿಗಳ ಕುತಂತ್ರ ಇಲ್ಲಿಯೂ ಕಾಣಸಿಗುತ್ತಿದೆ. ಎನ್.ಎಫ್.ಎಚ್. ಎಸ್ ವರದಿಯೇ ಗುರುತಿಸಿದಂತೆ ಶಿಕ್ಷಣ, ಅರಿವು, ಜೀವನ ಮಟ್ಟ, ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು ಕುಟುಂಬದ ಗಾತ್ರವನ್ನೂ ನಿರ್ಧರಿಸುತ್ತವೆ. ಇದಕ್ಕಾಗಿ ಬಲವಂತದ ಶಿಕ್ಷಾ ಭಯದ ನೀತಿಗಳು ಹೆಚ್ಚು ಪ್ರಯೋಜನಕಾರಿಯಾಗಲಾರದು. ಈ ಕಾರಣದಿಂದ ಕೂಡಾ ಉತ್ತರ ಪ್ರದೇಶದ ಜನಸಂಖ್ಯಾ ನೀತಿ ರಾಜಕೀಯಪ್ರೇರಿತವೇ ಹೊರತೂ ಅದರಲ್ಲಿ ಯಾವ ಹುರುಳೂ ಇಲ್ಲವೆನ್ನಬಹುದು.

ಹಂಚಬೇಕಾದ್ದು ಸಂಪತ್ತು ದ್ವೇಷವಲ್ಲ:

ಇದೆಲ್ಲದರ ಜೊತೆ ನಮ್ಮ ರಾಜ್ಯದ ಬಿ.ಜೆ.ಪಿ ನಾಯಕರಿಗೆ ಹೇಳಬೇಕಾದ ಕಿವಿ ಮಾತು ಸಂಪತ್ತಿನ ಅಸಮಾನ ಹಂಚಿಕೆಯನ್ನು ನಿಯಂತ್ರಿಸಲು ಸರಕಾರ ಮುಂದಾಗದಿದ್ದರೆ ಯಾವ ಜನಸಂಖ್ಯಾ ನಿಯಂತ್ರಣದಿಂದಲೂ ಏನೂ ಸಾಧಿಸಲು ಸಾಧ್ಯವಿಲ್ಲ. ಕೊರೊನಾ ಲಾಕ್ ಡೌನ್ ಕಾಲದಲ್ಲಿ ಭಾರತದ ಅತಿ ಅಗರ್ಭ ಶ್ರೀಮಂತರ ಸಂಪತ್ತಿನಲ್ಲಿ 35% ಏರಿಕೆಯಾಗಿದೆ. ಆಕ್ಸಫಾಮ್ ವರದಿಯೊಂದು 100 ಜನ ಅಂಥಹ ಶ್ರೀಮಂತರ ಲಾಭದಿಂದ ದೇಶದ 138ಕೋಟಿ ಜನರಿಗೆ ತಲಾ 94,045 ರೂಪಾಯಿಗಳ ಚೆಕ್ ವಿತರಿಸಬಹುದೆಂದು ಹೇಳಿದೆ. ಹಾಗೆಯೇ ಕೇವಲ 11 ಜನ ಈ ಶ್ರೀಮಂತರ ಸಂಪತ್ತಿನಿಂದ ಮುಂದಿನ 10 ವರ್ಷ ಭಾರತದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಜಾರಿಯ ಅಗತ್ಯದ ಮೊತ್ತವನ್ನು ಸಂದಾಯ ಮಾಡಬಹುದೆಂದಿದೆ. ಇದು ಕಳೆದ ಮಾರ್ಚ್ ತಿಂಗಳ ಅಂಕೆಸಂಖ್ಯೆ. ಈ ಅವಧಿಯಲ್ಲಿ ಇನ್ನೂ ಹೆಚ್ಚಿರಬಹುದು. ಹಾಗಾಗಿ ಮಾನ್ಯ ಸಿ.ಟಿ. ರವಿಯವರೇ ಸಂಪತ್ತಿನ ಹಂಚಿಕೆ ಮಾಡುವುದೇ ಆದರೆ ಶ್ರೀಮಂತರ ಸೊಕ್ಕಿದ ಖಜಾನೆಗೆ ಕೈ ಹಾಕಿ. ಬಡವರ ಅನ್ನದ ತಟ್ಟೆಗಲ್ಲ. ಶಿಕ್ಷಣ, ಆರೋಗ್ಯ, ಉದ್ಯೋಗದ ಅವಕಾಶಗಳನ್ನು ಅಗತ್ಯಕ್ಕೆ ತಕ್ಕಂತೆ ಪೂರೈಸಿದರೆ ಜನ ತಮ್ಮಷ್ಟಕ್ಕೆ ತಾವೇ ಕುಟುಂಬ ಯೋಜನೆಗೆ ತಮ್ಮನ್ನು ಒಡ್ಡಿಕೊಳ್ಳುತ್ತಾರೆ. ವೈಫಲ್ಯಗಳನ್ನು ಮುಚ್ಚಿಕೊಳ್ಳುವ ಮಾರ್ಗವಾಗಿ ಜನರ ಗಮನ ಸೆಳೆಯುವ ತಂತ್ರಗಾರಿಕೆ ಬಿಟ್ಟುಬಿಡಿ. ಅದರಲ್ಲಿ ಸಮಾಜದ ಹಿತ ಅಡಗಿದೆ. ●

ಸುಧಾರಣೆಗಳು ಜನ-ಕೇಂದ್ರಿತವಾಗಬೇಕು, ಲಾಭ-ಕೇಂದ್ರಿತವಾಗಬಾರದು

ಸೀತಾರಾಮ್ ಯೆಚುರಿ



ಭಾರತದ ಆರ್ಥಿಕ ಸುಧಾರಣೆಗಳ ಸಂದರ್ಭದಲ್ಲಿ, "ನೀವು ಸುಧಾರಣೆಗಳ ಪರವೋ ಅಥವಾ ವಿರೋಧವೋ?" ಎಂದು ನಮ್ಮನ್ನು ಆಗಾಗ್ಗೆ ಕೇಳುತ್ತಾರೆ. ಸುಧಾರಣೆಗಳಿಗೆ ನಮ್ಮ ಬೆಂಬಲ ಅಥವಾ ವಿರೋಧವು, ಅವು ಜನರ ಹಿತಾಸಕ್ತಿಗಳಿಗೆ ಮತ್ತು ಅವರ ಜೀವನೋಪಾಯಗಳಿಗೆ ಪೂರಕವಾಗಿವೆಯೇ ಅಥವಾ ಇಲ್ಲವೇ, ಹಾಗೂ, ಸುಧಾರಣೆಗಳು ದೇಶದ ಆರ್ಥಿಕ ಸಾರ್ವಭೌಮತ್ವವನ್ನು ಬಲಪಡಿಸುತ್ತವೆಯೇ ಅಥವಾ ಇಲ್ಲವೇ ಎಂಬುದರ ಮೇಲೆ ಅವಲಂಬಿತವಾಗಿರುತ್ತವೆ. ಇದು ನಮ್ಮ ಸ್ಪಷ್ಟ ಅಭಿಪ್ರಾಯ ಮತ್ತು ಅದು ಮುಂದುವರಿಯುತ್ತದೆ ಕೂಡ.

ಅನುವಾದ: ಕೆ.ಎಂ. ನಾಗರಾಜ್

ಭಾರತದಲ್ಲಿ ಮೂರು ದಶಕಗಳ ಆರ್ಥಿಕ ಸುಧಾರಣೆಗಳ ನಂತರ, ಮೂರು ಹೊಸ ಕೃಷಿ ಕಾನೂನುಗಳ ವಿರುದ್ಧ ಮತ್ತು ತಮ್ಮ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಿ ನಮ್ಮ ರೈತರು ಏಳು ತಿಂಗಳಿಂದಲೂ ಸತತವಾಗಿ ನಡೆಸುತ್ತಿರುವ ಅಭೂತಪೂರ್ವ ಹೋರಾಟವನ್ನು ನಾವು ನೋಡುತ್ತಿದ್ದೇವೆ. ಈ ಹೋರಾಟವು, ಒಂದು ಶತಮಾನದ ಹಿಂದೆ ಚಂಪಾರಣ್ ರೈತರು ತಮ್ಮನ್ನು ಇಂಡಿಗೊ ಮರಗಳನ್ನು ಬೆಳೆಯುವಂತೆ ಬಲವಂತಪಡಿಸುತ್ತಿದ್ದ ಬ್ರಿಟಿಷರ ವಿರುದ್ಧ ನಡೆಸಿದ ಸತ್ಯಾಗ್ರಹವನ್ನು ನೆನಪಿಸುತ್ತದೆ.

ಈ ಸುಧಾರಣೆಗಳು ಬಡತನವನ್ನು ಹೆಚ್ಚಿಸಿವೆ, ಆರ್ಥಿಕ ಅಸಮಾನತೆಗಳ ಹೆಚ್ಚಳಕ್ಕೆ ಕಾರಣವಾಗಿವೆ ಮತ್ತು ಎಲ್ಲಾ ದೇಶಗಳಲ್ಲೂ ಬೇಡಿಕೆಯ ತೀವ್ರ ಕುಸಿತಕ್ಕೆ ಕಾರಣವಾಗಿವೆ ಎಂಬುದನ್ನು ಭಾರತದಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲಿನ ಅನುಭವಗಳು ನಮಗೆ ಹೇಳುತ್ತವೆ. ಜಾಗತಿಕ ಆರ್ಥಿಕ ಕುಸಿತವು ಎಲ್ಲ ದೇಶಗಳ ಜನ ಜೀವನದ ಮೇಲೆ ವಿನಾಶಕಾರಿ ಪರಿಣಾಮ ಬೀರಿದೆ. ಕೋವಿಡ್ ಸಾಂಕ್ರಾಮಿಕ ರೋಗವು ಆರ್ಥಿಕ ಕುಸಿತವನ್ನು ಮತ್ತಷ್ಟು ಉಲ್ಬಣಗೊಳಿಸಿದೆ. ಈ ವಿದ್ಯಮಾನವು, ಮಾರ್ಕ್ಸ್ ಒಮ್ಮೆ ಹೇಳಿದ ಮಾತುಗಳನ್ನು ನೆನಪಿಸುತ್ತದೆ: "ಬಂಡವಾಳಶಾಹಿಯು ಅದೆಂತಹ ಬೃಹತ್ ಉತ್ಪಾದನಾ ಸಾಧನಗಳನ್ನು ಮತ್ತು ವಿನಿಮಯ ಸಾಧನಗಳನ್ನು ಸೃಷ್ಟಿಸಿದೆ ಎಂದರೆ, ನರಕ ಪ್ರಪಂಚದ ಶಕ್ತಿಯನ್ನು ನಿಯಂತ್ರಿಸಲು ಅದನ್ನು ತನ್ನ ಮಂತ್ರಗಳ ಮೂಲಕ ಸೃಷ್ಟಿಸಿದ ಮಾಂತ್ರಿಕನಿಗೂ ಸಾಧ್ಯವಾಗುವುದಿಲ್ಲ ಎನ್ನುವ ರೀತಿಯಲ್ಲಿ".

ಭಾರತದಲ್ಲಿ ಜಾರಿಗೆ ತಂದ ಸುಧಾರಣೆಗಳು ನವ-ಉದಾರವಾದದ ಸಿದ್ಧಾಂತಕ್ಕೆ ಅನುಗುಣವಾಗಿವೆ ಮತ್ತು ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರಾಬಲ್ಯಕ್ಕೆ ಅಧೀನವಾಗಿವೆ. ಈ ಸುಧಾರಣೆಗಳ ಉದ್ದೇಶವೇ ಅನಿರ್ಬಂಧಿತ ಮತ್ತು ಗರಿಷ್ಠ ಲಾಭ ಗಳಿಕೆ. ಬಂಡವಾಳಶಾಹಿಯ ಪರಭಕ್ಷಕ ಕ್ರೂರ "ಮೃಗೀಯ ಹುಮ್ಮಸ್ಸಿ"ನ ಮೂಲಕ ಇದನ್ನು ಸಾಧಿಸಲಾಗುತ್ತದೆ. ಬಂಡವಾಳಗಾರರ ಭಕ್ಷಣೆಗಾಗಿ ಸಾರ್ವಜನಿಕ ಸ್ವತ್ತುಗಳು, ಖನಿಜ ಸಂಪನ್ಮೂಲಗಳು, ಸಾರ್ವಜನಿಕ ಸೌಲಭ್ಯಗಳು ಮತ್ತು ಸೇವೆಗಳನ್ನು ("ಬಳಕೆದಾರರ ಶುಲ್ಕಗಳನ್ನು"ಜನರ ಮೇಲೆ ಹೇರುವ ಕ್ರಮ) ಖಾಸಗೀಕರಿಸಲಾಗುತ್ತಿದೆ.

ಸುಧಾರಣೆಗಳು ಕಾರ್ಪೊರೇಟ್‌ಗಳಿಗೆ ಹಬ್ಬದೂಟವಾಗಿವೆ. ಕಳೆದ ಮೂವತ್ತು ವರ್ಷಗಳಲ್ಲಿ, ಶ್ರೀಮಂತರ ಮೇಲಿನ ತೆರಿಗೆಗಳು ಜಾಗತಿಕವಾಗಿ ಶೇಕಡಾ 79 ರಷ್ಟು ಇಳಿದಿವೆ. 2008ರ ಜಾಗತಿಕ ಆರ್ಥಿಕ ಕುಸಿತದ ನಂತರ, ಅನೇಕ ಮಂದಿ ಬಿಲಿಯನೇರ್‌ಗಳು ತಾವು ಕಳೆದುಕೊಂಡಿದ್ದ ಸಂಪತ್ತನ್ನು ಕೇವಲ ಮೂರು ವರ್ಷಗಳಲ್ಲಿ ಮರಳಿ ಪಡೆದಿದ್ದಾರೆ ಮತ್ತು 2018 ರ ಹೊತ್ತಿಗೆ ವೇಳೆಗೆ ಅದನ್ನು ದ್ವಿಗುಣಗೊಳಿಸಿಕೊಂಡಿದ್ದಾರೆ. ಇದು ಉತ್ಪಾದನೆಯ ಮೂಲಕ ಗಳಿಸಿದ ಸಂಪತ್ತಲ್ಲ. ಇದು ಷೇರು ಮಾರುಕಟ್ಟೆಯ ಜೂಜಾಟದ ಪ್ರಕ್ರಿಯೆಯಲ್ಲಿ ಬೆಳೆದಿದೆ. ಈ ವಿದ್ಯಮಾನವು, ಜಾಗತಿಕ ಆರ್ಥಿಕ ಹಿಂಜರಿತದ ಹೊಡೆತವು ಷೇರು ಮಾರುಕಟ್ಟೆಗಳ ಜೂಜುಕೋರತನದ ಮೇಲೆ ನಕಾರಾತ್ಮಕ ಪರಿಣಾಮ ಬೀರಿಲ್ಲ ಎಂಬುದನ್ನು ವಿವರಿಸುತ್ತದೆ. ಮತ್ತೊಂದೆಡೆ, ಆದಾಯವನ್ನು ಕಳೆದುಕೊಂಡ ವಿಶ್ವದ ಶೇಕಡಾ 80 ಮಂದಿ ತಮ್ಮ 2008ರ ಪೂರ್ವದ ಮಟ್ಟಕ್ಕೆ ಚೇತರಿಸಿಕೊಂಡಿಲ್ಲ. ಸಂಘಟಿತ ಉದ್ಯಮದ ಮೇಲಿನ ದಾಳಿಗಳು ಮತ್ತು ಕಾರ್ಮಿಕರ ಹಕ್ಕುಗಳ ಮೇಲಿನ ದಾಳಿಗಳು ಟ್ರೇಡ್ ಯೂನಿಯನ್‌ಗಳನ್ನು ದುರ್ಬಲಗೊಳಿಸಿವೆ. ಉದಾಹರಣೆಗೆ, ಅಮೇರಿಕಾದಲ್ಲಿ 1979 ರಲ್ಲಿ ನಾಲ್ಕು ಕಾರ್ಮಿಕರಲ್ಲಿ ಒಬ್ಬನನ್ನು ಯೂನಿಯನ್ ಪ್ರತಿನಿಧಿಸುತ್ತಿದ್ದರೆ, ಇಂದು ಹತ್ತರಲ್ಲಿ ಒಬ್ಬರನ್ನು ಮಾತ್ರ ಪ್ರತಿನಿಧಿಸುತ್ತಿವೆ.

ಭಾರತ: ಅಸಮಾನತೆಗಳ ಅಸಹ್ಯಕರ ಬೆಳವಣಿಗೆ

ಸುಧಾರಣೆಗಳ ಪರಿಣಾಮವಾಗಿ, ಆರ್ಥಿಕ ಅಸಮಾನತೆಗಳು ನಾಗಾಲೋಟದಲ್ಲಿ ಸಾಗಿವೆ. 'ಬೆಳಗುತ್ತಿರುವ ಭಾರತ'ವು ಸದಾ ಕಾಲವೂ 'ನರಳುತ್ತಿರುವ ಭಾರತ'ದ ಹೆಗಲ ಮೇಲೆ ಸವಾರಿ ಮಾಡಿದೆ. 'ಬೆಳಗುತ್ತಿರುವ ಭಾರತ'ದ ತೇಜಸ್ಸು 'ನರಳುತ್ತಿರುವ ಭಾರತ'ದಿಂದ ಕಿತ್ತುಕೊಂಡಷ್ಟೂ ಹೆಚ್ಚು ದೇದೀಪ್ಯಮಾನವಾಗಿ ಬೆಳಗುತ್ತದೆ.

ಭಾರತಕ್ಕೆ ಸಂಬಂಧಿಸಿದಂತೆ, ಆಕ್ಸ್‌ಫಾಮ್ ಸಂಸ್ಥೆಯ ಇತ್ತೀಚಿನ ವರದಿಯಲ್ಲಿ "ಅಸಮಾನತೆಯ ವೈರಸ್" ಎಂಬ ಶಿರೋನಾಮೆಯಡಿಯಲ್ಲಿ ಕೆಲವು ಕುತೂಹಲಕಾರಿ ಅಂಶಗಳಿವೆ: ಭಾರತದ ನೂರು ಮಂದಿ ಬಿಲಿಯನೇರ್‌ಗಳು ಮಾರ್ಚ್ 2020 ರಿಂದ ಈಚೆಗೆ ತಮ್ಮ ಸಂಪತ್ತನ್ನು 12,97,822 ಕೋಟಿ ರೂ.ಗಳಷ್ಟು ಹೆಚ್ಚಿಸಿಕೊಂಡಿದ್ದಾರೆ. ಇದನ್ನು 138 ದಶಲಕ್ಷ ಬಡ ಭಾರತೀಯ ಜನರಿಗೆ ದೇಣಿಗೆಯಾಗಿ ನೀಡಿದರೆ, ಪ್ರತಿಯೊಬ್ಬರಿಗೂ 94,045 ರೂ.ಗಳ ಚೆಕ್ ನೀಡಬಹುದು.

ಸಾಂಕ್ರಾಮಿಕದ ಅವಧಿಯಲ್ಲಿ ಮುಖೇಶ್ ಅಂಬಾನಿ ಒಂದು ಗಂಟೆಯಲ್ಲಿ ಗಳಿಸಿದ ಸಂಪತ್ತನ್ನು ಗಳಿಸಲು ಒಬ್ಬ ಕೌಶಲ್ಯರಹಿತ ಕಾರ್ಮಿಕನಿಗೆ 10,000 ವರ್ಷಗಳು ಹಿಡಿಯುತ್ತವೆ. ಅವರು ಒಂದು ಸೆಕೆಂಡಿನಲ್ಲಿ ಗಳಿಸಿದ್ದನ್ನು ಸರಿಗಟ್ಟಲು ಮೂರು ವರ್ಷಗಳು ಹಿಡಿಯುತ್ತವೆ.

ಮತ್ತೊಂದೆಡೆ, ಏಪ್ರಿಲ್ 2020ರ ತಿಂಗಳ ಪ್ರತಿ ಗಂಟೆಯಲ್ಲಿ 170,000 ಜನರು ತಮ್ಮ ಉದ್ಯೋಗವನ್ನು ಕಳೆದುಕೊಂಡಿದ್ದಾರೆ. ಭಾರತದ ಬಿಲಿಯನೇರ್‌ಗಳ ಸಂಪತ್ತು 2009 ರಿಂದ ಶೇಕಡಾ 90 ರಷ್ಟು ಹೆಚ್ಚಳವಾಗಿ ಮತ್ತು ಲಾಕ್‌ಡೌನ್ ಅವಧಿಯಲ್ಲಿ ಶೇಕಡಾ 35 ರಷ್ಟು ಹೆಚ್ಚಳವಾಗಿ, 422.9 ಬಿಲಿಯನ್ ಡಾಲರ್‌ಗೆ ಏರಿದೆ. ವಾಸ್ತವವಾಗಿ, ಸಾಂಕ್ರಾಮಿಕದ ಅವಧಿಯಲ್ಲಿ ಭಾರತದ ಅಗ್ರ 11 ಬಿಲಿಯನೇರ್‌ಗಳ ಸಂಪತ್ತಿನ ಹೆಚ್ಚಳದಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು 10 ವರ್ಷಗಳವರೆಗೆ ಅಥವಾ ಆರೋಗ್ಯ ಸಚಿವಾಲಯದ ಬಜೆಟ್‌ಅನ್ನು 10 ವರ್ಷಗಳವರೆಗೆ ನಿರ್ವಹಿಸಬಹುದಾಗಿದೆ.

ಸರ್ಕಾರದ ವೆಚ್ಚದ ಪಾಲಿನಲ್ಲಿ, ಭಾರತದ ಆರೋಗ್ಯ ಬಜೆಟ್ ವಿಶ್ವದಲ್ಲೇ ನಾಲ್ಕನೇ ಅತಿ ಕಡಿಮೆಯದು. ಸಾಂಕ್ರಾಮಿಕದ ಅವಧಿಯಲ್ಲಿ ಭಾರತದ ಅಗ್ರ 11 ಬಿಲಿಯನೇರ್‌ಗಳ ಸಂಪತ್ತಿನ ಹೆಚ್ಚಳದ ಮೇಲೆ ಕೇವಲ 1% ತೆರಿಗೆ ವಿಧಿಸಿದರೆ, ಬಡವರು ಮತ್ತು ಅಂಚಿನಲ್ಲಿರುವರಿಗೆ ಕೈಗೆಟುಕುವ ಔಷಧಿಗಳನ್ನು ಒದಗಿಸುವ ಜನ-ಔಷಧಿ ಯೋಜನೆಗೆ ಒದಗಿಸಿದ ಹಂಚಿಕೆಯನ್ನು 140 ಬಾರಿ ಒದಗಿಸಬಹುದು.

ಭಾರತದಲ್ಲಿ ಜಾರಿಯಾದ ಸುಧಾರಣೆಗಳು ಲಾಭ' ಕೇಂದ್ರಿತವಾಗಿವೆಯೇ ಹೊರತು ಜನಕೇಂದ್ರಿತವಾಗಲಿಲ್ಲ. ಈ ಸುಧಾರಣೆಗಳು ಬಂಡವಾಳಗಾರರಿಗೆ ಪ್ರಯೋಜನವಾಗಿವೆ ಮತ್ತು ಆರ್ಥಿಕ ಅಸಮಾನತೆಗಳನ್ನು ತೀವ್ರವಾಗಿ ಹೆಚ್ಚಿಸಿವೆ. ಪ್ರಧಾನಿ ಮೋದಿ ಅವರು ಬಂಡವಾಳಗಾರರನ್ನು ಸಂಪತ್ತಿನ ಸೃಷ್ಟಿಕರ್ತರು ಎಂದು ಬಣ್ಣಿಸುತ್ತಾರೆ ಮತ್ತು ಅವರನ್ನು ಗೌರವಿಸುವಂತೆ ನಮ್ಮನ್ನು ಆಗ್ರಹಿಸುತ್ತಾರೆ. ವಾಸ್ತವವಾಗಿ, ಸಂಪತ್ತು ಎಂದರೆ, ದುಡಿಯುವ ಜನರು ಉತ್ಪಾದಿಸುವ ಮೌಲ್ಯದ ನಗದೀಕರಣವಲ್ಲದೆ ಬೇರೇನೂ ಅಲ್ಲ. ಆದ್ದರಿಂದ, ಈ ಮೌಲ್ಯ ಸೃಷ್ಟಿಕರ್ತರನ್ನು ನಾವು ಗೌರವಿಸಬೇಕು ವಿನಃ ಬಂಡವಾಳಗಾರರನ್ನಲ್ಲ.

ಬಡತನ: ವಿಪರೀತ ಹೆಚ್ಚಳ

ಸ್ವಾತಂತ್ರ್ಯಾನಂತರ ಅನುಸರಿಸುತ್ತಿದ್ದ ಮೂಲ ಪೌಷ್ಟಿಕಾಂಶದ ಮಾದರಿಯ ಮೂಲಕ ಬಡತನವನ್ನು ಅಳೆಯುವ ಪದ್ಧತಿಯನ್ನು ಮೋದಿ ಸರ್ಕಾರ ಕೈಬಿಟ್ಟಿದೆ. ಈ ಹಿಂದೆ ನಿಗದಿಪಡಿಸಿದ ನಿಯಮಗಳ ಪ್ರಕಾರ, ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ 2,200 ಕ್ಯಾಲೊರಿಗಳಿಗಿಂತ ಕಡಿಮೆ ಮತ್ತು ನಗರ ಭಾರತದಲ್ಲಿ 2,100 ಕ್ಯಾಲೊರಿಗಳಿಗಿಂತ ಕಡಿಮೆ ಪ್ರಮಾಣದ ಆಹಾರ ಸೇವಿಸುವ ವ್ಯಕ್ತಿಗಳನ್ನು ಬಡವರು ಎಂದು ಪರಿಗಣಿಸಲಾಗುತ್ತಿತ್ತು. ಈ ಮಾದರಿಯ ಆಧಾರದ ಮೇಲೆ 1993–94ರಲ್ಲಿ ನಡೆಸಿದ ಎನ್.ಎಸ್.ಎಸ್ ಸಮೀಕ್ಷೆಯು ಗ್ರಾಮೀಣ ಪ್ರದೇಶದಲ್ಲಿ ಶೇಕಡಾ 58 ಮತ್ತು ನಗರ ಭಾರತದಲ್ಲಿ ಶೇಕಡಾ 57ರಷ್ಟು ಜನರು ಈ ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ತೋರಿಸಿತು. ಮುಂದಿನ ಇದೇ ರೀತಿಯ 2011–12ರ ಎನ್.ಎಸ್.ಎಸ್ ಸಮೀಕ್ಷೆಯು ಈ ಶೇಕಡಾವಾರು ಪ್ರಮಾಣವನ್ನು ಕ್ರಮವಾಗಿ 68 ಮತ್ತು 65 ಇತ್ತು ಎಂದು ತೋರಿಸಿತು. ನಂತರದ ಸಮೀಕ್ಷೆಯನ್ನು 2017–18 ರಲ್ಲಿ ನಡೆಸಲಾಯಿತು. ಆದರೆ, ಈ ಸಮೀಕ್ಷೆಯ ಫಲಿತಾಂಶವನ್ನು/ವರದಿಯನ್ನು ಮೋದಿ ಸರ್ಕಾರ ಬಚ್ಚಿಟ್ಟಿತು, ಸತ್ಯವನ್ನು ಮರೆಮಾಚಲು. ಈ ಒಂದು ಕೃತ್ಯವು ಎನ್.ಎಸ್.ಎಸ್ ಗಳಿಸಿದ್ದ ವಿಶ್ವ-ವಿಖ್ಯಾತಿಯನ್ನು ನಾಶಪಡಿಸಿದೆ. ಆದಾಗ್ಯೂ, ಸೋರಿಕೆಯಾದ ದತ್ತಾಂಶದ ಪ್ರಕಾರ, ಗ್ರಾಮೀಣ ಭಾರತದಲ್ಲಿ ತಲಾ ನೈಜ ಬಳಕೆ ವೆಚ್ಚದಲ್ಲಿ (ಕೇವಲ ಆಹಾರ ಸೇವನೆ ಮಾತ್ರವಲ್ಲ) ಶೇಕಡಾ ಒಂಬತ್ತರಷ್ಟು ಕುಸಿತವಾಗಿದೆ. ಸಾಂಕ್ರಾಮಿಕವು ಅಪ್ಪಳಿಸುವ ಮೊದಲೇ ಗ್ರಾಮೀಣ ಮತ್ತು ನಗರ ಭಾರತಗಳೆರಡರಲ್ಲೂ ಬಡತನವು ಅಭೂತಪೂರ್ವ ಪ್ರಮಾಣದಲ್ಲಿ ಹೆಚ್ಚಿಗೆಯಾಗಿತ್ತು ಎಂಬುದು ಸ್ಪಷ್ಟವಾಗಿದೆ. ಆನಂತರದ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ.

ಕೋವಿಡ್ ಸಾಂಕ್ರಾಮಿಕವು ನಮ್ಮ ಆರೋಗ್ಯ ರಕ್ಷಣಾ ವ್ಯವಸ್ಥೆಯು ಜನರ ಜೀವವನ್ನು ರಕ್ಷಿಸುವಲ್ಲಿ ಸಂಪೂರ್ಣವಾಗಿ ಅಸಮರ್ಪಕವಾಗಿದೆ ಎಂಬುದನ್ನು ಬಟಾ ಬಯಲು ಮಾಡಿದೆ. ಈಗ ನಮ್ಮನ್ನು ಕಾಡುತ್ತಿರುವ ಆರ್ಥಿಕ ಹಿಂಜರಿತವು ಜನರ ಜೀವನೋಪಾಯದ ಮೇಲೆ ಪರಿಣಾಮ ಬೀರುತ್ತಿದೆ. ಜಾಗತಿಕ ನವ-ಉದಾರವಾದಿ ಪಥದ ಭಾಗವಾಗಿರುವ ಈ ಆರ್ಥಿಕ ಹಿಂಜರಿತದಲ್ಲಿ ಮಿತವ್ಯಯ ಕ್ರಮಗಳಿಂದ ಹಿಡಿದು ವೇತನ ಕಡಿತ, ಉದ್ಯೋಗ ನಾಶ, ಕೆಲಸದಿಂದ ವಜಾ ಮತ್ತು ಮುಖ್ಯವಾಗಿ, 2016ರ ನೋಟು ಅಮಾನ್ಯೀಕರಣದಿಂದಾದ ಕಿರು ಉತ್ಪಾದನೆಯ ನಾಶದವರೆಗೆ ಸಾಧ್ಯವಿರುವ ಎಲ್ಲಾ ರೀತಿಯಲ್ಲಿ ಜನರ ಶೋಷಣೆಯನ್ನು ತೀವ್ರಗೊಳಿಸುವ ಮೂಲಕ ಲಾಭವನ್ನು ಗರಿಷ್ಠಗೊಳಿಸಲಾಗಿದೆ. ಭಾರತದ ಕೃಷಿಯನ್ನು, ಗುತ್ತಿಗೆ ಕೃಷಿಯ ಮೂಲಕ, ಕಾರ್ಪೊರೇಟ್ ಲೂಟಿಗೆ ಈಗ ತೆರೆದಿಡಲಾಗಿದೆ. ಪರಿಣಾಮವಾಗಿ, ಆಹಾರದ ಕೊರತೆ ಮತ್ತು ಬೆಲೆ ಏರಿಕೆಗಳು ಈ ವಿದ್ಯಮಾನವನ್ನು ಅನುಸರಿಸುತ್ತವೆ.

ಜಾಗತಿಕ ಹಸಿವಿನ ಸೂಚ್ಯಂಕದ ಪ್ರಕಾರ, ವಿಂಗಡಣೆಯಡಿಯಲ್ಲಿ ಭಾರತವು "ಗಂಭೀರ" ಎಂಬ ಸ್ಥಾನ ಪಡೆದಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರ ಪ್ರಕಾರ, ಮಕ್ಕಳಲ್ಲಿ ಅಪೌಷ್ಟಿಕತೆ ಮತ್ತು ಶಿಶು ಮರಣದ ಪ್ರಮಾಣವು ಆತಂಕಕಾರಿ ಮಟ್ಟವನ್ನು ತಲುಪಿದೆ. ಪ್ಯೂ ರಿಸರ್ಚ್ ಸೆಂಟರ್‌ನ ಅಂದಾಜಿನ ಪ್ರಕಾರ, ಕಳೆದ ಒಂದು ವರ್ಷದಲ್ಲಿ, ಭಾರತದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರ ಸಂಖ್ಯೆಯು 60 ರಿಂದ 134 ದಶಲಕ್ಷಕ್ಕೆ ಏರಿದೆ ಮತ್ತು ನಮ್ಮ ಮಧ್ಯಮ ವರ್ಗದ 59.3% ಜನರು ಬಡತನಕ್ಕೆ ಜಾರಿದ್ದಾರೆ.

ಕೋಮುವಾದಿ-ಕಾರ್ಪೊರೇಟ್ ನಂಟು

2014ರಿಂದ ಕೋಮುವಾದ ಮತ್ತು ಕಾರ್ಪೊರೇಟ್‌ಗಳ ನಡುವೆ ಹೊರಹೊಮ್ಮಿದ ನಂಟಸ್ತನವು ಒಂದು ಭ್ರಷ್ಟ-ಸ್ವಾರ್ಥಸಾಧಕ ಕೂಟವಾಗಿದೆ. ಸಾರ್ವಜನಿಕ ವಲಯ, ಸಾರ್ವಜನಿಕ ಉಪಯೋಗ-ಸೇವಾ ಸಂಸ್ಥೆಗಳು ಮತ್ತು ಖನಿಜ ಸಂಪನ್ಮೂಲಗಳ ಖಾಸಗೀಕರಣದ ಮೂಲಕ ರಾಷ್ಟ್ರದ ಸ್ವತ್ತುಗಳನ್ನು ಲೂಟಿ ಹೊಡೆಯಲು ಕಾರ್ಪೊರೇಟ್‌ಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಲಾಭವನ್ನು ಅವು ಗರಿಷ್ಠ ಪ್ರಮಾಣದಲ್ಲಿ ಬಾಚಿಕೊಳ್ಳುತ್ತಿವೆ. ಈ ಕ್ರಮವು ಬಂಟ-ಬಂಡವಾಳಶಾಹಿಯ (crony capitalism) ಮತ್ತು ರಾಜಕೀಯ ಭ್ರಷ್ಟಾಚಾರದ ಬೆಳವಣಿಗೆಗೆ ಕಾರಣವಾಗಿದೆ. ಇದರೊಂದಿಗೆ ಜನರ ಪ್ರಜಾಪ್ರಭುತ್ವ

ಪುಟ 14 ನೋಡಿ



ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ, ಬಿಸಿನೆಸ್ ಇಂಡಿಯ



ಜಮ್ಮು ಮತ್ತು ಕಾಶ್ಮೀರ: ಕ್ಷೇತ್ರ ಮರುವಿಂಗಡಣೆ ಸಮುದಾಯಗಳು ಮತ್ತು ಪ್ರದೇಶಗಳ ನಡುವಿನ ಕಂದರವನ್ನು ಮುಚ್ಚಲು ನೆರವಾಗಬೇಕೇ ಹೊರತು ಹೆಚ್ಚಿಸಲು ಅಲ್ಲ-ಸಿಪಿಐ(ಎಂ) ನಿಯೋಗ

ಸಿಪಿಐ(ಎಂ)ನ ಜಮ್ಮು ಮತ್ತು ಕಾಶ್ಮೀರ ಘಟಕದ ನಿಯೋಗವೊಂದು ಜುಲೈ 6 ರಂದು ಕ್ಷೇತ್ರ ಮರುವಿಂಗಡಣಾ ಆಯೋಗವನ್ನು ಭೇಟಿ ಮಾಡಿ ಈ ಕುರಿತಂತೆ ಪಕ್ಷದ ವಿಚಾರಗಳನ್ನು ಮುಂದಿಟ್ಟಿತು. ಕಾರ್ಯದರ್ಶಿ ಗುಲಾಮ್ ನಭಿ ಮಲಿಕ್ ನಿಯೋಗದ ನೇತೃತ್ವ ವಹಿಸಿದ್ದರು.

ಆಗಸ್ಟ್ 5, 2019 ರಂದ ನಡೆದುದನ್ನು, ಅಂದರೆ ರಾಜ್ಯದ ವಿಶೇಷ ಸ್ಥಾನಮಾನದ ರದ್ದತಿ ಮತ್ತು ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯ್ದೆಯ ಅಡಿಯಲ್ಲಿ ಒಂದು ಚಾರಿತ್ರಿಕ ರಾಜ್ಯವನ್ನು ಕೆಳದರ್ಜೆಗಿಳಿಸಿ ವಿಭಜಿಸಿದ ಘಟನೆಯನ್ನು ಸಿಪಿಐ(ಎಂ) ಒಪ್ಪುವುದಿಲ್ಲ ಎಂಬುದನ್ನು ಸಿಪಿಐ(ಎಂ) ನಿಯೋಗ ಆಯೋಗದ ಎದುರು ಪುನರುಚ್ಚರಿಸಿತು.

ಈ ನಿರ್ಧಾರಗಳು ಜಮ್ಮು, ಕಾಶ್ಮೀರ ಮತ್ತು ಲಡಾಖ್ ಈ ಮೂರೂ ಪ್ರದೇಶಗಳಲ್ಲಿ ಜನಗಳ ವಿಶ್ವಾಸಕ್ಕೆ ಘಾಸಿಯುಂಟು ಮಾಡಿವೆ. ಕ್ಷೇತ್ರ ಮರುವಿಂಗಡಣೆಯ ಬಗ್ಗೆ ಪಕ್ಷದ ವಿರೋಧವೇನೂ ಇಲ್ಲ. ಆದರೆ ಇದನ್ನು ದೇಶದ ಇತರ ಭಾಗಗಳ ಜತೆಗೆ ಮಾಡಬೇಕು.

ಕ್ಷೇತ್ರ ಮರುವಿಂಗಡೆಯನ್ನು 2026ರ ವರೆಗೆ ಮಾಡಬಾರದು, 2026ರ ನಂತರದ ಮೊದಲ ಜನಗಣತಿ ಆಧಾರದ ಮೇಲೆ ಮರುವಿಂಗಡಣೆ ನಡೆಸಬೇಕು ಎಂಬ ಅಖಿಲ ಭಾರತ ನಿರ್ಧಾರಕ್ಕೆ ಅನುಗುಣವಾಗಿ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಕೂಡ 2002ರಲ್ಲಿ ಕ್ಷೇತ್ರ ಮರುವಿಂಗಡೆಯ ಕೆಲಸವನ್ನು 2026 ರ ವರೆಗೆ ಮಾಡಬಾರದು ಎಂದು ನಿರ್ಧರಿಸಿತು.

ವಾಸ್ತವ ಸಂಗತಿಯೆಂದರೆ, ಜನಗಳ ನಡುವೆ ಬಹಳಷ್ಟು ಅವಿಶ್ವಾಸ ಇದೆ, ಊಹಾಪೋಹಗಳನ್ನು ಹರಡುವ ಹವ್ಯಾಸ ಈ ಪ್ರದೇಶವನ್ನು ಆವರಿಸಿದೆ. ದುರದೃಷ್ಟವಶಾತ್, ಕಳೆದ ಕೆಲವು ವರ್ಷಗಳಿಂದ ಪಟ್ಟಭದ್ರ ಹಿತಾಸಕ್ತಿಗಳು ಇಲ್ಲಿ ವಿವಿಧ ಸಮುದಾಯಗಳ ನಡುವೆ ಕಂದರ ಹುಟ್ಟು ಹಾಕುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ 2011 ರ ಜನಗಣತಿ ಕ್ಷೇತ್ರ ಮರುವಿಂಗಡಣೆ ಕೆಲಸಕ್ಕೆ ಒಂದು ಚೌಕಟ್ಟನ್ನು ಒದಗಿಸುತ್ತದೆ. ಈ ಕೆಲಸವನ್ನು ಮಾಡುವಾಗ ಜಮ್ಮು ಮತ್ತು ಕಾಶ್ಮೀರದ ಸೂಕ್ಷ್ಮ ಭಾವನೆಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಅದು ವಿವಿಧ ಸಮುದಾಯಗಳು ಮತ್ತು ಪ್ರದೇಶಗಳ ನಡುವಿನ ಕಂದರವನ್ನು ಮುಚ್ಚಲು ನೆರವಾಗಬೇಕೇ ಹೊರತು ಹೆಚ್ಚಿಸಲು ಅಲ್ಲ. ಹೀಗಾಗಬೇಕಾದರೆ ಈ ಕ್ಷೇತ್ರ ಮರುವಿಂಗಡಣೆ ಮಾಡುತ್ತಿರುವುದು ಕೆಲವು ವಿಭಾಗಗಳ ಪ್ರಯೋಜನಕ್ಕಾಗಿ ಎಂಬ ಭಾವನೆಯನ್ನು ದೂರ ಮಾಡಬೇಕು ಎಂದು ನಿಯೋಗ ಹೇಳಿತು.

ಯಾವುದೇ ಚುನಾವಣಾ ಕೆಲಸ ಜನಗಳ ನಡುವೆ ವಿಶ್ವಾಸವನ್ನು ಮೂಡಿಸಬೇಕು. ಆದ್ದರಿಂದ ವಿಧಾನ ಸಭಾ ಚುನಾವಣೆಗಳನ್ನು ಜಮ್ಮು ಮತ್ತು ಕಾಶ್ಮೀರದ ಪೂರ್ಣ ರಾಜ್ಯದ ಸ್ಥಾನವನ್ನು ಮತ್ತೆ ನೆಲೆಗೊಳಿಸಿದ ಮೇಲೆಯೇ ಮಾಡಲು ಸಾಧ್ಯ, ಈ ಪ್ರಕ್ರಿಯೆ ಮುಕ್ತ ಮತ್ತು ನ್ಯಾಯಯುತ ಎಂದು ಅನಿಸಬೇಕಾದರೆ, ಪೂರ್ಣ ರಾಜ್ಯ ಸ್ಥಾನಮಾನ ಅತ್ಯಗತ್ಯ ಎಂಬುದನ್ನು ನಿಯೋಗ ಒತ್ತಿ ಹೇಳಿತು.

ಆಯೋಗ ತನ್ನ ವರದಿಯನ್ನು ಸಾರ್ವಜನಿಕ ಚರ್ಚೆಗೆ ಮಂಡಿಸುತ್ತದೆ. ಇದರಲ್ಲಿ ಯಾವ್ಯಾವ ಸಲಹೆ-ಸೂಚನೆಗಳು ಬರುತ್ತಾವೋ ಅವನ್ನೆಲ್ಲ ಪರಿಶೀಲಿಸಿದ ನಂತರವೇ ವರದಿಯನ್ನು ಅಂತಿಮಗೊಳಿಸಲಾಗುವುದು ಎಂದು ಆಯೋಗದ ಸದಸ್ಯರು ಸಿಪಿಐ(ಎಂ) ನಿಯೋಗಕ್ಕೆ ಆಶ್ವಾಸನೆ ನೀಡಿದರು.

ಜಮ್ಮು ಮತ್ತು ಕಾಶ್ಮೀರ ಜನತಾ ಮೈತ್ರಿಕೂಟದ ಇತರ ಸದಸ್ಯ ಪಕ್ಷಗಳಲ್ಲಿ, ಮೆಹಬೂಬ ಮುಫ್ತಿ ನೇತೃತ್ವದ ಪಿಡಿಪಿ ಬಿಟ್ಟು ಬೇರೆಲ್ಲ ಪಕ್ಷಗಳು ನಿಯೋಗವನ್ನು ಭೇಟಿ ಮಾಡಿ ತಮ್ಮ ಅಭಿಪ್ರಾಯಗಳನ್ನು ಸಲ್ಲಿಸಿದ್ದಾರೆ.

ಆಯೋಗ ಜಮ್ಮು ಮತ್ತು ಕಾಶ್ಮೀರಕ್ಕೆ 4 ದಿನಗಳ ಭೇಟಿಯ ನಂತರ ದಿಲ್ಲಿಗೆ ಮರಳಿದೆ. ಮಾರ್ಚ್ 2022ರೊಳಗೆ ಅದು ತನ್ನ ವರದಿಯನ್ನು ಸಲ್ಲಿಸುವುದಾಗಿ ಹೇಳಲಾಗಿದೆ.

ಸುಧಾರಣೆಗಳು ಜನ-ಕೇಂದ್ರಿತವಾಗಬೇಕು....

ಪುಟ 13 ರಿಂದ

ಹಕ್ಕುಗಳು, ನಾಗರಿಕ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಮೇಲೆ ನಡೆಸಿದ ದಾಳಿಗಳೂ ಸೇರಿವೆ. ಸರ್ಕಾರದ ಟೀಕೆಯನ್ನು ದೇಶದ್ರೋಹವೆಂದೂ ಮತ್ತು ಭಿನ್ನಮತೀಯರನ್ನು ರಾಷ್ಟ್ರ ವಿರೋಧಿಗಳೆಂದೂ ಹಣೆಪಟ್ಟಿ ಹಚ್ಚಲಾಗುತ್ತಿದೆ. ಯು.ಎ.ಪಿ.ಎ.ಯಂತಹ ಕಠಿಣ ಕಾನೂನುಗಳ ಅಡಿಯಲ್ಲಿ ಅವರನ್ನು ಮನಸೊ ಇಚ್ಛೆಯಾಗಿ ಬಂಧಿಸಲಾಗುತ್ತದೆ. ಇದು ಭಾರತದ ಸಂವಿಧಾನವು ಜನರಿಗೆ ಕೊಟ್ಟ ಖಾತ್ರಿ-ಭರವಸೆಗಳನ್ನು ಒಳಗೊಳಗೆ ಕೊರೆದುಹಾಕುತ್ತದೆ.

ಈ ವಿದ್ಯಮಾನಗಳಿಂದಾಗಿ ಭಾರತವನ್ನು ಒಂದು "ಚುನಾವಣಾ ನಿರಂಕುಶಪ್ರಭುತ್ವ" ಎಂದು ವಿಶ್ವವು ಗುರುತಿಸಿದೆ. ಜಾಗತಿಕ ಆರ್ಥಿಕ ಸ್ವಾತಂತ್ರ್ಯ ಸೂಚ್ಯಂಕವು ಹದಗೆಟ್ಟು, ಹಿಂದಿನ ವರ್ಷ 79ನೇ ಶ್ರೇಯಾಂಕದಲ್ಲಿದ್ದ ಭಾರತವನ್ನು ಇನ್ನೂ ಕೆಳಕ್ಕೆ, 105ನೇ ಸ್ಥಾನಕ್ಕೆ ತಳ್ಳಿದೆ. ಮಾನವ ಸ್ವಾತಂತ್ರ್ಯ ಸೂಚ್ಯಂಕವು ಭಾರತವನ್ನು 94ನೇ ಶ್ರೇಯಾಂಕದಿಂದ 111ನೇ ಸ್ಥಾನಕ್ಕೆ ಕೆಳಗಿಳಿಸಿದೆ. ವಿಶ್ವ ಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಂಕವು ಕಳೆದ ವರ್ಷದ 129ನೇ ಶ್ರೇಯಾಂಕದಿಂದ 131ನೇ ಸ್ಥಾನಕ್ಕೆ ನಮ್ಮನ್ನು ತಳ್ಳಿದೆ.

ನಮ್ಮ ಬಹು ದೊಡ್ಡ ಸಂಖ್ಯೆಯ ಜನರಿಗೆ ಹೆಚ್ಚುತ್ತಿರುವ ಸಂಕಷ್ಟಗಳ ಜೊತೆಗೆ, ಬೆಳೆಯುತ್ತಿರುವ ಈ ಸರ್ವಾಧಿಕಾರಶಾಹಿಯು "ಆಡಳಿತದೊಂದಿಗೆ ಕಾರ್ಪೊರೇಟ್‌ಗಳ ಸಮ್ಮಿಳನ" ಎಂಬ ಮುಸೊಲಿನಿಯ ಫ್ಯಾಸಿಸಂನ ಅಶುಭ ವ್ಯಾಖ್ಯಾನಕ್ಕೆ ಹತ್ತಿರವಾಗಿದೆ. ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ನವ-ಉದಾರವಾದಿ ಸುಧಾರಣೆಗಳ ದಿವಾಳಿತನವನ್ನು ಜಾಗತಿಕವಾಗಿ ಹೆಚ್ಚು ಹೆಚ್ಚಾಗಿ ಗುರುತಿಸಲಾಗುತ್ತಿದೆ. ಆತಂಕಕಾರಿಯಾಗಿ ಬೆಳೆಯುತ್ತಿರುವ ಅಸಮಾನತೆಗಳನ್ನು ಸಮೀಕ್ಷೆ ಮಾಡಿದ 'ದಿ ಎಕನಾಮಿಸ್ಟ್' ಪತ್ರಿಕೆಯ ಲೇಖನ "ಅಸಮಾನತೆಯು ತಲುಪಿರುವ ಹಂತವು ಎಂಥಹದ್ದು ಎಂದರೆ, ಬೆಳವಣಿಗೆಗೆ ಅದು ಅದಕ್ಷವೂ ಮತ್ತು ಕೆಟ್ಟದ್ದೂ ಆಗಬಹುದು" ಎಂಬ ತೀರ್ಮಾನಕ್ಕೆ ಬಂದಿದೆ.

ನವ-ಉದಾರವಾದಿ ಸುಧಾರಣೆಗಳ ದಿವಾಳಿತನ

ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗ್ಲಿಟ್ಜ್ ತನ್ನ 'ಅಸಮಾನತೆಗೆ ತೆರುವ ಬೆಲೆ' (The Price of Inequality) ಎಂಬ ಪುಸ್ತಕದಲ್ಲಿ, ಮೇಲ್ತುದಿಯ 1% ಮತ್ತು ಉಳಿದ 99% ಜನರ ಬಗ್ಗೆ ಹೀಗೆ ಹೇಳುತ್ತಾರೆ: "ನಮ್ಮ ಆರ್ಥಿಕ ಬೆಳವಣಿಗೆಯನ್ನು ಸರಿಯಾಗಿ ಅಳೆದರೆ, ನಮ್ಮ ಸಮಾಜವು ಆಳವಾಗಿ ವಿಭಜಿತವಾಗಿಯೇ ಉಳಿದರೆ ಸಾಧಿಸಬಹುದಾದುದಕ್ಕಿಂತ ಅದು ಬಹಳ ಹೆಚ್ಚಾಗಿರುತ್ತದೆ".

ಮುಂದುವರಿದ ಎಲ್ಲಾ ದೇಶಗಳೂ ಪ್ರಭುತ್ವವು ಬೃಹತ್ ವೆಚ್ಚಗಳನ್ನು ಮಾಡುವ ಉತ್ತೇಜಕ ಪ್ಯಾಕೇಜ್‌ಗಳನ್ನು ಘೋಷಿಸಿವೆ. ಇದು ನವ-ಉದಾರೀಕರಣಕ್ಕೆ ಅನಿಷ್ಟಕರವಾಗಿದೆ. ಈ ಉತ್ತೇಜಕ ಪ್ಯಾಕೇಜ್‌ಗಳು ದೇಶೀಯ ಬೇಡಿಕೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ಚೇತರಿಸುವ ಗುರಿ ಹೊಂದಿವೆ. ಬ್ರಿಟನ್ನಿನ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್, "ನಾನು ಒಬ್ಬ ಕಮ್ಯುನಿಸ್ಟ್ ಅಲ್ಲ, ಆದರೆ..." ಎಂದು ಹೇಳುವ ಮೂಲಕ ತಮ್ಮ ಭಾಷಣವನ್ನು ಆರಂಭಿಸಿ, ತಮ್ಮ ಸರ್ಕಾರವು ಖರ್ಚು-ವೆಚ್ಚಗಳನ್ನು ಹೆಚ್ಚಿಸುವುದನ್ನು ಪ್ರತಿಪಾದಿಸಿದರು.

ಆದಾಗ್ಯೂ, ಮೋದಿ ಸರ್ಕಾರವು ತನ್ನ ಆಪ್ತರು ಪಡೆದ ಬೃಹತ್ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡಿದ ಸಂದರ್ಭದಲ್ಲೂ ಸಹ, ಸರ್ಕಾರದ ಖರ್ಚು-ವೆಚ್ಚಗಳನ್ನು ಹೆಚ್ಚಿಸಲು ಹಿಂಜರಿಯುತ್ತಾರೆ. ಪೆಟ್ರೋ ದರಗಳನ್ನು ಅನುದಿನವೂ ಏರಿಸಿದ ಪರಿಣಾಮವಾಗಿ ಉಂಟಾಗುವ ಹಣದುಬ್ಬರದ ಹೆಣಭಾರವನ್ನೂ ಜನರ ಮೇಲೆ ಹೇರುತ್ತದೆ. ಬೆಲೆ ಏರಿಕೆಯ ಪರಿಣಾಮವಾಗಿ ಆಂತರಿಕ ಬೇಡಿಕೆ ಕುಗ್ಗುತ್ತದೆ ಮತ್ತು ಆರ್ಥಿಕ ಹಿಂಜರಿತವು ಆಳಗೊಳ್ಳುತ್ತದೆ.

ಈ ರೀತಿಯ ಸುಧಾರಣಾ ದಿಕ್ಪಥವನ್ನು ಒಂದು ಗಂಭೀರ ವಿಮರ್ಶೆಗೆ ಒಳಪಡಿಸಬೇಕಾಗುತ್ತದೆ ಮತ್ತು ನಮ್ಮ ಆದ್ಯತೆಗಳನ್ನು ಮರುರೂಪಿಸಿಕೊಳ್ಳಬೇಕಾಗುತ್ತದೆ: ಕೃಷಿಯ ಬಲ ವರ್ಧನೆ, ಆಹಾರ ಭದ್ರತೆ, ಆರೋಗ್ಯ ಮತ್ತು ಶಿಕ್ಷಣ ವಲಯಗಳಲ್ಲಿ ಹೂಡಿಕೆಯನ್ನು ಹೆಚ್ಚಿಸುವುದು, ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ಆಂತರಿಕ ಬೇಡಿಕೆಯನ್ನು ಹೆಚ್ಚಿಸುವ ಸಲುವಾಗಿ ಅಗತ್ಯ ಆರ್ಥಿಕ ಮತ್ತು ಸಾಮಾಜಿಕ ಮೂಲಸೌಕರ್ಯಗಳ ನಿರ್ಮಾಣಕ್ಕಾಗಿ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸುವುದು-ಆರ್ಥಿಕ ಪುನರುಜ್ಜೀವನಕ್ಕೆ ಇದೊಂದೇ ಮಾರ್ಗ. ಸೂಕ್ತ ತಂತ್ರಜ್ಞಾನ ಯಾವುದು ಎಂಬುದನ್ನು ನಿರ್ಧರಿಸುವಾಗ ಪರಿಸರ ಕಾಳಜಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ನಮ್ಮ ಸಾಮಾಜಿಕ ಸಾಮರಸ್ಯವನ್ನು ಕೆಡಿಸುವ ಎಲ್ಲಾ ವಿಭಜಕ ಶಕ್ತಿಗಳು ಮತ್ತು ಪ್ರವೃತ್ತಿಗಳನ್ನೂ ಸೋಲಿಸಬೇಕು. ನಮ್ಮ ಸಮಾಜವನ್ನು ಅಮಾನುಷಗೊಳಿಸುವ ಅಂಧಶ್ರದ್ಧೆ ಮತ್ತು ಅತಾರ್ಕಿಕತೆಯ ವಿರುದ್ಧ ನಾವು ಹೋರಾಡಬೇಕು. ಇಂತಹ ಜನ-ಕೇಂದ್ರಿತ ಸುಧಾರಣೆಗಳು ಭಾರತಕ್ಕೆ ಇಂದು ಬೇಕಾಗಿವೆ.

ಇಂತಹ ಸುಧಾರಣೆಗಳನ್ನು ಸಾಕಾರಗೊಳಿಸುವ ಉದ್ದೇಶಕ್ಕಾಗಿ ಬೇಕಾಗುವ ಶಕ್ತಿ-ಕೂಟವೆಂದರೆ, ಜನರ ಹೋರಾಟಗಳೇ. ಸಂಕಷ್ಟಗಳನ್ನು ಜನರ ಮೇಲೆ ಹೊರಿಸುತ್ತಿರುವ ಭಾರತದ ಆಳುವ ವರ್ಗಗಳು ಅನುಸರಿಸುತ್ತಿರುವ ದಿಕ್ಪಥವನ್ನು ಸುಧಾರಣೆಗಳ ಪರ್ಯಾಯ ದಿಕ್ಪಥವನ್ನು ಅಂತರ್ಗತವಾಗಿಸಿಕೊಂಡ ಜನಪ್ರಿಯ ಚಳುವಳಿಗಳು ಮಾತ್ರ ತಿರುಗುಮುರುಗು ಮಾಡಬಲ್ಲವು. ನಾವೀಗ ಸಾಗುತ್ತಿರುವ ಹಾದಿಯನ್ನು ಬದಲಾಯಿಸಿಕೊಳ್ಳಲು ಪ್ರಸಕ್ತ ಸುಧಾರಣೆಗಳಿಗೆ ಮೂರು ದಶಕಗಳು ಸಂದ ಈ ಸಂದರ್ಭವೇ ಸೂಕ್ತ.

ಜಾಗತಿಕ ಬಂಡವಾಳವಾದದ ತೀವ್ರ ಆರ್ಥಿಕ ಬಿಕ್ಕಟ್ಟು

ಪುಟ 11 ರಿಂದ

ಹಾಗಾದರೆ, ದೇಶದ ಹೆಚ್ಚು ಹೆಗ್ಗಳಿಕೆಗೆ ಒಳಗಾದ ಆರ್ಥಿಕ ಬೆಳವಣಿಗೆಯಲ್ಲಿ ಉತ್ಕರ್ಷದಿಂದ ನಿಜವಾಗಿಯೂ ಲಾಭ ಪಡೆದವರು ಯಾರು? "ಮಧ್ಯಮ ವರ್ಗ ಮತ್ತು ಶ್ರೀಮಂತರು 16.2 ಕೋಟಿಯಿಂದ 25.3 ಕೋಟಿಗೆ ಮತ್ತು ನವ ಶ್ರೀಮಂತರು 9.1 ಕೋಟಿಗೆ ಏರಿದ್ದಾರೆ. ಮಧ್ಯಮ ವರ್ಗವು ಶೇಕಡ 15.5 ರಿಂದ 19.3 ಕ್ಕೆ ಏರಿತು ಆದರೆ ತೀವ್ರ ಬಡವರು ಸಹ 27.4 ಕೋಟಿಯಿಂದ 23.7 ಕೋಟಿಗೆ ಏರಿಕೆ ಹೊಂದಿದ್ದಾರೆ. ಅವರಲ್ಲಿ, ನಿಖರವಾಗಿ ಹೇಳುವುದಾದರೆ, 4.3 ಕೋಟಿ ಜನರ ತಲಾ ಬಳಕೆ ರೂ. 9 ರಿಂದ ರೂ. 12 ಕ್ಕೆ ಏರಿದೆ. ಶ್ರೀಮಂತರು ತಮ್ಮ ಬಳಕೆಯನ್ನು ಮರೆಮಾಡಲು ಒಲವು ತೋರುತ್ತಾರೆ. ಆದ್ದರಿಂದ ನೀವು ಅದಕ್ಕೆ ಕಾರಣವಾಗಿದ್ದರೆ, ವರದಿಯು ಪ್ರತಿಬಿಂಬಿಸುವುದಕ್ಕಿಂತ ಅವರು ನಿಜವಾಗಿಯೂ ಹೆಚ್ಚು ಶ್ರೀಮಂತವಾಗಿದ್ದಾರೆ. ಶ್ರೀಮಂತ ಮತ್ತು ಬಡವರ ನಡುವಿನ ಅಂತರವು ಇನ್ನೂ ವಿಸ್ತಾರವಾಗಿದೆ ಎಂಬ ಅಂಶವನ್ನು ಇದು ಮತ್ತೆ ಪ್ರತಿಬಿಂಬಿಸುತ್ತದೆ" ಎಂದು ಸೇನ್‌ಗುಪ್ತಾ ವಿವರಿಸಿದ್ದಾರೆ.

"ತಲಾ ಬಳಕೆ ದಿನಕ್ಕೆ ರೂ. 9 ಕ್ಕಿಂತ ಕಡಿಮೆಯಿದ್ದರೆ ಒಬ್ಬನನ್ನು ಸಂಪೂರ್ಣವಾಗಿ ಬಡವರು ಎಂದು ವರ್ಗೀಕರಿಸಲಾಗಿದೆ. ಅಂದರೆ, ತಲಾ ಬಳಕೆ ದಿನಕ್ಕೆ ರೂ 13 ಆಗಿದ್ದರೆ, ವ್ಯಕ್ತಿಯು ಬಡತನ ರೇಖೆಗಿಂತ ಮೇಲಿರುತ್ತಾನೆ! ಆದ್ದರಿಂದ, ಬಡತನದ ವ್ಯಾಖ್ಯಾನಗಳು ಅರ್ಥಮಾಡಿಕೊಳ್ಳುವುದು ಕೆಲವೊಮ್ಮೆ ಕಷ್ಟಕರವಾಗಿರುತ್ತದೆ. ಆರ್ಥಿಕ ಸುಧಾರಣೆಗಳ ಸಮರ್ಥನೆಯು ಟ್ರಿಕಲ್-ಡೌನ್ ಪರಿಣಾಮ ಎಂದು ಭಾವಿಸಲಾಗಿತ್ತು ಆದರೆ ಪ್ರಯತ್ನದ ಪರಿಸ್ಥಿತಿಗಳಲ್ಲಿ ವಾಸಿಸುವವರಿಗೆ 10 ವರ್ಷಗಳ ಆರ್ಥಿಕ ಸುಧಾರಣೆಗಳು ಸ್ವಲ್ಪವೂ ವ್ಯತ್ಯಾಸವನ್ನುಂಟು ಮಾಡಿಲ್ಲ ಎಂದು ತೋರುತ್ತದೆ. ಸುಧಾರಕರು ಎಂದಿಗೂ ಹೇಗೆ ಜನಪ್ರಿಯ ಮತಗಳನ್ನು ಗೆಲ್ಲಲು ಸಾಧ್ಯವಿದೆ ಎನ್ನುವುದೇ ಆಶ್ಚರ್ಯ "ಯುಪಿಎ ಸರ್ಕಾರದ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮವು ಎಲ್ಲಾ ಕಾರ್ಮಿಕರ, ವಿಶೇಷವಾಗಿ, ನಮ್ಮ ಕಾರ್ಯಪಡೆಯ ಶೇಕಡಾ 93 ರಷ್ಟಿದ್ದ ಅಸಂಘಟಿತ ವಲಯದ, ಕಾರ್ಮಿಕರ, ಕಲ್ಯಾಣ ಮತ್ತು ಯೋಗಕ್ಷೇಮವನ್ನು ಖಾತರಿಪಡಿಸುವ ತನ್ನ ಬದ್ಧತೆಯನ್ನು ದೃಢವಾಗಿ ಪ್ರತಿಜ್ಞೆ ಮಾಡಿತ್ತು. ನೇಕಾರರು, ಕೈಮಗ್ಗ ಕಾರ್ಮಿಕರು, ಮೀನುಗಾರರು ಮತ್ತು ಮೀನುಗಾರ ಮಹಿಳೆಯರು, ನೀರಾ ಇಳಿಸುವವರು, ಚರ್ಮದ ಕೆಲಸಗಾರರು, ತೋಟ ಕಾರ್ಮಿಕರು, ಬೀಡಿ ಕಾರ್ಮಿಕರು ಮುಂತಾದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಆರೋಗ್ಯ, ವಿಮೆ ಮತ್ತು ಇತರ ಕ್ಷೇತ್ರಗಳನ್ನು ವಿಸ್ತರಿಸಲಾಗುವುದು ಎಂದಿತ್ತು, ಆದರೆ ಅಂತಿಮವಾಗಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಹಾಗೆ ಕಾರ್ಯನಿರ್ವಹಿಸಲು ವಿಫಲವಾಯಿತು.

ಬಡತನದ ಭಯಾನಕ ಚಿತ್ರದ ವಾಸ್ತವತೆ ಇಲ್ಲಿದೆ: ಅರ್ಜುನ್ ಸೇನ್‌ಗುಪ್ತಾ ವರದಿ ಪ್ರಕಾರ "ಭಾರತದಲ್ಲಿ 83.6 ಕೋಟಿ ಜನರ ತಲಾ ಬಳಕೆ ದಿನಕ್ಕೆ ರೂ. 20.ಕ್ಕಿಂತ ಕಡಿಮೆ."

ಜುಲೈ 2005 ಮತ್ತು ಜೂನ್ 2006 ರ ರಾಷ್ಟ್ರೀಯ ಮಾದರಿ ಸಮೀಕ್ಷೆಯ 62 ನೇ ವರದಿಯು ಮತ್ತಷ್ಟು ಶೋಚನೀಯ ಚಿತ್ರವನ್ನು ಬಹಿರಂಗಪಡಿಸಿತು. ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಪುರುಷರು ಮತ್ತು ಮಹಿಳೆಯರು ತಮ್ಮ ಆದಾಯದ 53% ಅನ್ನು ಆಹಾರ ಪದಾರ್ಥಗಳು ಮತ್ತು ತರಕಾರಿಗಳಿಗಾಗಿ ಖರ್ಚು ಮಾಡುತ್ತಾರೆ ಎಂದು ಅದು ಹೇಳಿತು. "74% ಗ್ರಾಮೀಣ ಜನರು ಇಂಧನಕ್ಕಾಗಿ ಕಾಡಿನ, ವಿಶೇಷವಾಗಿ ಅರಣ್ಯ ಕಾಡುಗಳಲ್ಲಿ ಅವರು ಸಂಗ್ರಹಿಸಿದ ಕಟ್ಟಿಗೆಯ ಮೇಲೆ, ಅವಲಂಬಿತರಾಗಿದ್ದಾರೆ. ಮತ್ತು 42% ಕುಟುಂಬಗಳು ರಾತ್ರಿಗಳಲ್ಲಿ ಬೆಳಕಿಗಾಗಿ ಸೀಮೆಎಣ್ಣೆಯನ್ನು ಅವಲಂಬಿಸಿವೆ. ಪ್ರತಿ 5 ಭಾರತೀಯರಲ್ಲಿ ಒಬ್ಬರು ದಿನಕ್ಕೆ 12 ರೂ.ಗಳನ್ನು ಸಹ ಖರ್ಚು ಮಾಡಲು ಸಾಧ್ಯವಿಲ್ಲ" ಎಂದು ವರದಿ ಹೇಳಿತು.

ಮೇಲಿನ ಮೂರು ಸರ್ಕಾರಿ ಪ್ರಾಯೋಜಿತ ವರದಿಗಳು 1990-91 ರಲ್ಲಿ ಪ್ರಾರಂಭವಾದ ನವ-ಉದಾರವಾದಿ ಜಾಗತೀಕರಣದ ನಂತರದಲ್ಲಿ ಬಡವರ ದುಃಖದ ತೀವ್ರ ಭಯಾನಕತೆಯನ್ನು ಸಮರ್ಪಕವಾಗಿ ಚಿತ್ರಿಸುತ್ತವೆ. ಭಾರತದಲ್ಲಿ 83.6 ಕೋಟಿ ಜನರು ದಿನಕ್ಕೆ 20/- ಕ್ಕಿಂತ ಕಡಿಮೆ ತಲಾ ಬಳಕೆಯಲ್ಲಿ ವಾಸಿಸುತ್ತಿದ್ದಾರೆ, ಉನ್ನತ ಮಧ್ಯಮ ವರ್ಗ ಮತ್ತು ಶ್ರೀಮಂತರು 1.6.2 ಕೋಟಿಯಿಂದ 2.53 ಕೋಟಿಗೆ ಮತ್ತು ಅತೀ-ಶ್ರೀಮಂತರು 9.1 ಕೋಟಿಗೆ ಏರಿದರು.

ಇದು ಐಎಂಎಫ್-ವಿಶ್ವಬ್ಯಾಂಕ್ ಆದೇಶಿಸಿದ ನವ-ಉದಾರವಾದಿ ಜಾಗತೀಕರಣದ ಅಂತಿಮ ಫಲಿತಾಂಶವಾಗಿದೆ, ಇದು ತನ್ನ ಹಿಂದಿನ ಎನ್‌ಡಿಎ ಸರ್ಕಾರದಂತೆಯೇ ಯು.ಪಿ.ಎ. ಸರ್ಕಾರದ ಅಚ್ಚುಮೆಚ್ಚಿನ ಆರ್ಥಿಕ ಕಾರ್ಯಸೂಚಿಯಾಗಿತ್ತು. ಇದು ಯು.ಪಿ.ಎ. ಸರ್ಕಾರ ಮತ್ತು ಹೆಚ್ಚಿನ ರಾಜ್ಯ ಸರ್ಕಾರಗಳು ಸಂಘಟಿತ ವಲಯದ ಸಾಮಾನ್ಯ ಮಧ್ಯಮ ವರ್ಗದವರಲ್ಲಿ ಈ ಬಡತನವನ್ನು ಹರಡಲು, ಸರ್ಕಾರಿ ವಲಯದ ನೌಕರರು ಮತ್ತು ಶಿಕ್ಷಕರ ಶಾಸನಬದ್ಧ ಪಿಂಚಣಿ ವ್ಯವಸ್ಥೆಯನ್ನು ಕಸಿದುಕೊಳ್ಳುವ ಮತ್ತು ನಿರುದ್ಯೋಗಿಗಳ ಸಂಖ್ಯೆಯ ಮೂಲಕ ಬಡತನದ ಪ್ರಮಾಣವನ್ನು ಹೆಚ್ಚಿಸುವ ಅವರ ಹತಾಶ ಪ್ರಯತ್ನದಲ್ಲಿ ಕಂಡುಬಂದಿತು.

ಏಂಗೆಲ್ಸ್ 200 ಮಾಲಿಕೆಯ ಅನಾವರಣ–ಎರಡು ಪುಸ್ತಕಗಳ ಬಿಡುಗಡೆ

ಫ್ರೆಡೆರಿಕ್ ಏಂಗೆಲ್ಸ್ –ಜೀವನ ಚಿತ್ರಣ (ಪುಸ್ತಕದ ಕುರಿತು ಅಭಿಪ್ರಾಯಗಳು)

ಮಾರ್ಕ್ಸ್, ಏಂಗೆಲ್ಸ್ ಮತ್ತು ಲೆನಿನ್ ಮುಂತಾದ ಅಸಾಧಾರಣ ವ್ಯಕ್ತಿಗಳ ಬದುಕಿನಲ್ಲಿ ಮೂರು ಅಂಶಗಳು ಬಹಳ ಮುಖ್ಯವಾಗುತ್ತವೆ. ಒಂದು, ಚಿಂತನೆಯ ಕ್ಷೇತ್ರಕ್ಕೆ ಅವರ ಕೊಡುಗೆಗಳು. ಎರಡನೆಯದು, ಅವರು ಎಂತಹ ಸವಾಲುಗಳನ್ನು ಎದುರಿಸಿ ಹೋರಾಟಗಳನ್ನು ಸಂಘಟನೆಗಳನ್ನು ಕಟ್ಟಿದರು ಎಂಬುದು. ಮೂರನೆಯದು, ಖಂಡಿತವಾಗಿ ದೈವಾಂಶ ಸಂಭೂತರಲ್ಲದ ಅವರು ನಮ್ಮಂತೆಯೇ ನೋವು–ನಲಿವು, ಸೋಲು–ಗೆಲುವು, ರೋಗ–ರುಜಿನ, ಆಪ್ತೇಷ್ಟರ ಮರಣ–ಜನನ ಎಲ್ಲವನ್ನೂ ಅನುಭವಿಸಿದರು; ಆದರೆ ಸಂಕಲ್ಪ, ಪರಿಶ್ರಮ, ವಿಶಾಲ ಹೃದಯ, ಸಂವೇದನಾಶೀಲತೆಗಳನ್ನು ಬೆಳೆಸಿಕೊಂಡು, ನಮಗೆ ಮಾದರಿಯಾದರು ಎಂಬುದು. ಒಂದು ಜೀವನ ಚರಿತ್ರೆ ಇದೆಲ್ಲವನ್ನೂ ನಮಗೆ ಕಟ್ಟಿಕೊಡಬೇಕು.

ಡಾ. ಜಿ. ರಾಮಕೃಷ್ಣ ಅವರ ಫ್ರೆಡೆರಿಕ್ ಏಂಗೆಲ್ಸ್ ಪುಸ್ತಕವು ಇದೆಲ್ಲವನ್ನೂ ಪೂರೈಸುತ್ತದೆ ಮಾತ್ರವಲ್ಲ, ಅತ್ಯಂತ ಸರಳ ಹಾಗೂ ಹೃದಯಂಗಮ ಶೈಲಿಯಲ್ಲಿ ಕೈಗೆತ್ತಿಕೊಂಡ ಕಾರ್ಯವನ್ನು ನಿರ್ವಹಿಸಿದೆ ಎಂಬ ಕಾರಣದಿಂದ ಬಹಳ ಮಹತ್ವದ್ದಾಗಿದೆ. ಏಂಗೆಲ್ಸ್ ಅವರ ಅತ್ಯಂತ ಮುಂದುವರೆದ ಚಿಂತನೆಗಳನ್ನು ಪರಿಕಲ್ಪನೆಗಳನ್ನು ಒಳಗೊಂಡ ಅಭಿಜಾತ ಕೃತಿಗಳನ್ನು ಹೊಸಬರಿಗೂ ಗ್ರಹಿಸಲಾಗುವಂತೆ ಚಿಕ್ಕದಾಗಿ ಪರಿಚಯಿಸಿರುವುದು ಇದರ ಇನ್ನೊಂದು ಹೆಗ್ಗಳಿಕೆ.

ಏಂಗೆಲ್ಸ್ ಮಾತ್ರವಲ್ಲ, ಮಾರ್ಕ್ಸ್‌ವಾದದ ಜೀವನ ಚರಿತ್ರೆ ಕೂಡಾ

ಏಂಗೆಲ್ಸ್ ಕುರಿತು ಹಲವಾರು ಜೀವನ ಚರಿತ್ರೆಗಳು ಬಂದಿವೆ. ಆದರೆ ಜಿ.ಆರ್. ಅವರ 'ಏಂಗೆಲ್ಸ್' ಬರೀ ಜೀವನ ಚರಿತ್ರೆಯಾಗುವುದರ ಬದಲು ಅದು ಮಾರ್ಕ್ಸ್‌ವಾದದ ಚರಿತ್ರೆಯೂ ಆಗಿದೆ. ಮಾರ್ಕ್ಸ್‌ವಾದ ಎತ್ತುವ ಹಲವು ತಕರಾರುಗಳನ್ನೂ ಎದುರಿಸುತ್ತದೆ. ಅಷ್ಟೇ ಅಲ್ಲ, ಭಾರತದ ಪರಿಸ್ಥಿತಿಗೂ ಪ್ರಸ್ತುತವಾಗುತ್ತದೆ. ಏಂಗೆಲ್ಸ್ ಬಾಲ್ಯ, ತಂದೆಯೊಂದಿಗಿನ ವಿರಸ, ಅಧ್ಯಯನ, ಮಾರ್ಕ್ಸ್‌ನೊಂದಿಗಿನ ಒಡನಾಟ, ಕಾವ್ಯ ರಚನೆಯ ಪ್ರಯತ್ನ, ಸ್ವ–ಇಚ್ಛೆಯಿಂದ ಮಿಲಿಟರಿ ಸೇವೆ – ಹೀಗೆ ಏಂಗೆಲ್ಸ್ ಬದುಕಿನ ಒಂದೊಂದೇ ಆಯಾಮ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಏಂಗೆಲ್ಸ್ ಸ್ವಯಂ ಅನುಭವಿ, ವಿದ್ವಾಂಸ, ವೈಜ್ಞಾನಿಕ ವಿಶ್ಲೇಷಕ, ತನ್ನ ಪ್ರತಿಭೆಯನ್ನು ಸ್ವತಂತ್ರ ಅಧ್ಯಯನ–ಬರವಣಿಗೆಗಳಿಗೆ ಇನ್ನೂ ಹೆಚ್ಚಾಗಿ ಮೀಸಲಿಡಬಹುದಿತ್ತು. ತನ್ನ ವಿದ್ವತ್ತನ್ನು ಮಾರ್ಕ್ಸ್‌ರ ಅಧ್ಯಯನ, ಸಂಶೋಧನೆ ಮತ್ತು ಪ್ರಕಟಣೆಗಳಿಗೆ ಪೂರಕವಾಗಿ ಮಾತ್ರ ಮಾಡದೆ, ಯಥೇಚ್ಛವಾಗಿ ತನ್ನದೇ ಆದ ಪ್ರಣಾಲಿಕೆಯನ್ನು ಬೆಳೆಸಬಹುದಿತ್ತು. ಆದರೆ ಅವರ ಹೆಚ್ಚಿನ ಉದ್ಗ್ರಂಥಗಳು, ಒಂದರ್ಥದಲ್ಲಿ ಮಾರ್ಕ್ಸ್ ಕೃತಿಗೆ ಪೂರಕವಾಗಿ ಬಂದಿವೆ. ಅವರು ಮಾರ್ಕ್ಸ್ ನೊಡಗೂಡಿ ರಚಿಸಿದ 'ಪವಿತ್ರ ಕುಟುಂಬ', 'ಜರ್ಮನಿಯ ಸೈದ್ಧಾಂತಿಕ ತತ್ವ', 'ಕಮ್ಯುನಿಸ್ಟ್ ಪ್ರಣಾಲಿಕೆ', 'ಪ್ರಕೃತಿಯಲ್ಲಿ ಗತಿತಾರ್ಕಿಕತೆ', ಮುಂತಾದವುಗಳು ಏಂಗೆಲ್ಸ್ ನ ಬದುಕಿನ ಮುಖ್ಯ ಘಟನೆಯಾದ ಮಾರ್ಕ್ಸ್ ನ ಸಖ್ಯದಿಂದ ರಚಿತವಾದವು. ಇಂತಹ ಮೇರು ವ್ಯಕ್ತಿಯನ್ನು ಕನ್ನಡಕ್ಕೆ ಪರಿಚಯ ಮಾಡಿಕೊಟ್ಟಿರುವ ಜಿ.ಆರ್. ಅಭಿನಂದನಾರ್ಹರು.

–ಟಿ.ಎಸ್. ವೇಣುಗೋಪಾಲ್

ಜರ್ಮನ್ ಸಿದ್ಧಾಂತ: ಭಾವನಾವಾದದ ಖಂಡನೆ, ಭೌತವಾದದ ಮಂಡನೆ

ಈ ಗ್ರಂಥ ಪ್ರಮುಖವಾಗಿ ಆಗ ಜರ್ಮನ್ ತತ್ವಶಾಸ್ತ್ರದಲ್ಲಿ ಪ್ರಬಲವಾಗಿದ್ದ ಹೆಗೆಲ್ ಅವರ ಮತ್ತು ಯುವ–ಹೆಗೆಲಿಯನ್ನರು ಎಂದು ಕರೆಯಲಾಗುವ ಅವರ ಪ್ರಮುಖ ಶಿಷ್ಯರ ಭಾವನಾವಾದಿ ಲೋಕದೃಷ್ಟಿಯನ್ನೂ ಮತ್ತು ಅದಕ್ಕೆ ಪ್ರತಿಯಾಗಿ ಫಾಯರ್‌ಬಾಖ್ ಎಂಬ ಇನ್ನೊಬ್ಬ ಯುವ–ಹೆಗೆಲಿಯನ್ ಮಂಡಿಸುವ ಜಡಭೌತವಾದಿ ಲೋಕದೃಷ್ಟಿಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುವ ಕಟು ವಿಮರ್ಶೆ. ಈ ಖಂಡನೆಯ ಜೊತೆಗೆ ಮತ್ತು ಅದಕ್ಕೆ ಪ್ರತಿಯಾಗಿ ಮಾರ್ಕ್ಸ್–ಏಂಗೆಲ್ಸ್ ದುಡಿಯುವ ಜನರ ಲೋಕದೃಷ್ಟಿಯಾಗಬೇಕಾದ ಚಾರಿತ್ರಿಕ ಮತ್ತು ಗತಿತಾರ್ಕಿಕ ಭೌತವಾದವನ್ನು ಸಹ ಪ್ರಬಲವಾಗಿ ಮಂಡಿಸುತ್ತಾರೆ.

19ನೆಯ ಶತಮಾನದ ಮಧ್ಯಭಾಗದಲ್ಲಿ ಜರ್ಮನ್ ತತ್ವಶಾಸ್ತ್ರದಲ್ಲಿ ಪ್ರಬಲವಾಗಿದ್ದ ಲೋಕದೃಷ್ಟಿಯನ್ನು ಖಂಡಿಸುವ ಈ ಕೃತಿಯನ್ನು, ಅದರ ಪರಿಚಯವೂ ಇಲ್ಲದ ಇಂದಿನ ಕನ್ನಡದ ಓದುಗರು ಯಾಕೆ ಓದಬೇಕು ಎಂಬ ಸಾಮಾನ್ಯ ಪ್ರಶ್ನೆ ಏಳುತ್ತದೆ. ಜಗತ್ತಿನ ಇತರ ನಾಗರಿಕತೆಗಳಂತೆ ಭಾರತದಲ್ಲೂ ಭಾವನಾವಾದಿ ತತ್ವಶಾಸ್ತ್ರ ಪ್ರಧಾನವಾಗಿ ಜನಮಾನಸವನ್ನು ಆವರಿಸಿದೆ. ಇಲ್ಲಿ ವಿಮರ್ಶೆಗೆ ಒಳಗಾಗಿರುವ ಭಾವನಾವಾದಿ ಜರ್ಮನ್ ತತ್ವಶಾಸ್ತ್ರದ ಹಲವು ತರ್ಕ–ವಾದಗಳು, ಅಂಶಗಳು, ಭಾರತದ ಮತ್ತು ಕರ್ನಾಟಕದಲ್ಲಿ ಈಗಲೂ ಪ್ರಬಲವಾಗಿರುವ ಭಾವನಾವಾದಿ ತತ್ವಶಾಸ್ತ್ರಗಳಲ್ಲೂ, ಹಲವು ವೇಷ–ಮುಖವಾಡಗಳಲ್ಲಿ ಅವತಾರಗಳಲ್ಲಿ ಕಾಣಿಸಿಕೊಳ್ಳುತ್ತವೆ. ಅದಲ್ಲದೆ ದುಡಿಯುವ ಜನರ ಲೋಕದೃಷ್ಟಿಯಾಗಿರುವವು ಅಥವಾ ತೀರಾ ಹತ್ತಿರವಾದವು ಎಂದು ಹೇಳಲಾಗುವ (ಬೌದ್ಧ, ಜೈನ, ಬಸವತತ್ವ ಮೊದಲಾದ) ತತ್ವಶಾಸ್ತ್ರೀಯ ಸೆಲೆಗಳಲ್ಲೂ ಇವು ಕಾಣಿಸಿಕೊಳ್ಳುತ್ತವೆ. ಅದೇ ರೀತಿ ದುಡಿಯುವ ಜನರಿಗೆ ತಮ್ಮ ಲೋಕದೃಷ್ಟಿಯಾದ ಚಾರಿತ್ರಿಕ ಮತ್ತು ಗತಿತಾರ್ಕಿಕ ಭೌತವಾದವು ವಿಕಾಸವಾದ ರೀತಿಯ ಮತ್ತು ಕಾಲಘಟ್ಟದ ಪರಿಚಯವೂ ಅಗತ್ಯ. ಅವುಗಳನ್ನು 'ಜರ್ಮನ್ ಸಿದ್ಧಾಂತ'ದ ಬೆಳಕಿನಲ್ಲಿ (ಮತ್ತು ಕತ್ತಲೆಯಲ್ಲಿ!?) ಅರಿತುಕೊಳ್ಳುವುದು ಕರ್ನಾಟಕದ ದುಡಿಯುವ ಜನರಿಗೆ ಅಗತ್ಯ.

ಭಾರತದ ಮತ್ತು ಕರ್ನಾಟಕದ ಇಂದಿನ ಸಂದರ್ಭದಲ್ಲಿ 'ಜರ್ಮನ್ ಸಿದ್ಧಾಂತ'ದ ಪ್ರಸ್ತುತತೆಯನ್ನು ಅನುವಾದಕ ವಿ.ಎನ್.ಲಕ್ಷ್ಮೀನಾರಾಯಣ ಅವರು ತಮ್ಮ ಪ್ರಸ್ತಾವನೆಯಲ್ಲಿ ವಿವರವಾಗಿ ಒತ್ತಿ ಹೇಳಿದ್ದಾರೆ. ಜೊತೆಗೆ ನಾಡಿನ ಪ್ರಮುಖ ವಿದ್ವಾಂಸರೂ ಚಿಂತಕರೂ ಆದ ಕೆ.ವಿ.ನಾರಾಯಣ, ಎಚ್.ಎಸ್.ರಾಘವೇಂದ್ರ ರಾವ್, ರಾಜೇಂದ್ರ ಚೆನ್ನಿ ಮತ್ತು ಓ.ಎಲ್.ನಾಗಭೂಷಣಸ್ವಾಮಿ ಅವರು 'ಜರ್ಮನ್ ಸಿದ್ಧಾಂತ'ವನ್ನು ಇಂದು ಹೇಗೆ ಮತ್ತು ಏಕೆ ಓದಬೇಕು ಎಂಬುದನ್ನು ಹಲವು ಆಯಾಮಗಳಿಂದ ತಮ್ಮ ಬರಹಗಳಲ್ಲಿ ವಿಶದಪಡಿಸಿದ್ದಾರೆ.

ಮಾರ್ಕ್ಸ್–ಏಂಗೆಲ್ಸ್ ಅವರ ಮೂಲಕೃತಿ 'ಜರ್ಮನ್ ಸಿದ್ಧಾಂತ' 700ಕ್ಕೂ ಹೆಚ್ಚು ಪುಟಗಳ ಬೃಹತ್ ಗ್ರಂಥವಾಗಿದ್ದು, ಭಾರತ ಮತ್ತು ಕರ್ನಾಟಕದ ಸಂದರ್ಭದಲ್ಲಿ ಇಂದು ಪ್ರಸ್ತುತವಾಗುವ ಅಂಶಗಳನ್ನು ಮಾತ್ರ ಇಲ್ಲಿ ತೆಗೆದು ಆಯ್ದುಕೊಳ್ಳಲಾಗಿದೆ. ಜರ್ಮನ್ ಮತ್ತು ಯಾವುದೇ ಭಾವನಾವಾದೀ ಮತ್ತು ಜಡಭೌತವಾದೀ ತತ್ವಶಾಸ್ತ್ರದ ಸಾಮಾನ್ಯ ಅಂಶಗಳ ವಿಮರ್ಶೆ ಹಾಗೂ ಚಾರಿತ್ರಿಕ ಮತ್ತು ಗತಿತಾರ್ಕಿಕ ಭೌತವಾದದ ಮಂಡನೆ ಮಾಡುವ ಅಂಶಗಳನ್ನು ಮಾತ್ರ ಇಲ್ಲಿ ಅನುವಾದಿಸಲಾಗಿದೆ. ಈಗ ಅಪ್ರಸ್ತುತವಾಗಿರುವ ಕೆಲವು ಜರ್ಮನ್ ತತ್ವಶಾಸ್ತ್ರಜ್ಞರ. ಸಮಾಜವಾದಿಗಳ ವಿಮರ್ಶೆಗಳನ್ನು ಕೈಬಿಡಲಾಗಿದೆ.

ಪ್ರಮುಖ ಜಾಗತಿಕ ಮೂಲಕೃತಿಗಳ ಅನುವಾದವನ್ನು ಕನ್ನಡದಲ್ಲಿ ಪ್ರಸ್ತುತ ಪಡಿಸುವಾಗ ಆ ಕೃತಿಯ ಸಮಕಾಲೀನ ಓದನ್ನು ಓದಿನ ಪ್ರವೇಶವನ್ನು ವಿವಿಧ ಕ್ಷೇತ್ರಗಳ ನಾಡಿನ ಪರಿಣತರು ಮತ್ತು ಚಿಂತಕರ ಮೂಲಕ ಮಾಡಿಸುವುದು ಅತ್ಯಂತ ಅಪೇಕ್ಷಣೀಯ. ಇಂತಹ ಪ್ರಯತ್ನವನ್ನು ಈ ಮಾಲಿಕೆಯಲ್ಲಿ ಮಾಡಲಾಗುತ್ತಿದೆ. ಇಂದಿನ, ಭಾರತದ, ಕರ್ನಾಟಕದ ಸಂದರ್ಭದಲ್ಲಿ ಈ ಕೃತಿಯ ಪ್ರಸ್ತುತತೆಯನ್ನು ಗುರುತಿಸುವುದು ಅ ಮಾತ್ರವಲ್ಲದೆ, ಕೃತಿಗೆ ಸಂಬಂಧಿಸಿದ ಜ್ಞಾನಶಾಖೆಗಳಲ್ಲಿ ಆದ ಬೆಳವಣಿಗೆಗಳ ಬೆಳಕಿನಲ್ಲಿ ಅದರ ಮರುಓದು ಮತ್ತು ಅದನ್ನು ಭಾರತ ಮತ್ತು ಕರ್ನಾಟಕದ ನೆಲದಲ್ಲಿ ಬೆಳೆದ ತತ್ವಶಾಸ್ತ್ರೀಯ ಸಿದ್ಧಾಂತಗಳಿಗೆ ಅನ್ವಯಿಸುವ ಪ್ರಯತ್ನವನ್ನೂ ಇಲ್ಲಿ ಮಾಡಲಾಗಿದೆ. ಅನುವಾದಕರಾದ ವಿ.ಎನ್.ಲಕ್ಷ್ಮೀನಾರಾಯಣ ಅವರಲ್ಲದೆ, ಕೆ.ವಿ.ನಾರಾಯಣ, ಎಚ್.ಎಸ್.ರಾಘವೇಂದ್ರ ರಾವ್, ರಾಜೇಂದ್ರ ಚೆನ್ನಿ ಮತ್ತು ಓ.ಎಲ್. ನಾಗಭೂಷಣಸ್ವಾಮಿ ಅವರು ಈ ಸಂಬಂಧ ಬರೆದ ತಮ್ಮ ಬರಹಗಳಲ್ಲಿ ಈ ಗ್ರಂಥದ ಹಲವು ಆಯಾಮಗಳನ್ನು ಗುರುತಿಸಿ ಪರಿಚಯಿಸಿದ್ದಾರೆ.

ಭಾರತದ ಮತ್ತು ಕರ್ನಾಟಕದಲ್ಲಿ ಪ್ರಭಾವಶಾಲಿಯಾಗಿರುವ ವಿವಿಧ ಭಾವನಾವಾದಿ ಮತ್ತು ಭೌತವಾದಿ ತತ್ವಶಾಸ್ತ್ರಗಳ ವಿವರವಾದ ನಿರ್ದಿಷ್ಟ ಅಧ್ಯಯನಗಳು ನಡೆದಿಲ್ಲವೆಂದಲ್ಲ. ಆದರೆ ದುಡಿಯುವ ಜನರ ಚಾರಿತ್ರಿಕ ಮತ್ತು ಗತಿತಾರ್ಕಿಕ ಭೌತವಾದದ ಲೋಕದೃಷ್ಟಿಯಿಂದ ನಡೆದಿಲ್ಲ. ಅದೇ ರೀತಿ ಪ್ರಭಾವಶಾಲಿಯಾಗಿರುವ ಪ್ರಗತಿಪರ ಎನ್ನಲಾಗುವ ಸಿದ್ಧಾಂತಗಳ ವಿವರವಾದ ನಿರ್ದಿಷ್ಟ ಅಧ್ಯಯನ ಮತ್ತು ವಿಮರ್ಶೆ ಸಹ ನಡೆದಿಲ್ಲ. ಈ ಕೃತಿಯ ಅಧ್ಯಯನ, ಪ್ರಸಾರ ಈ ಎಲ್ಲ ತತ್ವಶಾಸ್ತ್ರಗಳ, ಸಿದ್ಧಾಂತಗಳ ಅಧ್ಯಯನ. ವಿಮರ್ಶೆಗಳಿಗೆ ಹಾದಿ ಮಾಡಿಕೊಟ್ಟರೆ ಈ ಶ್ರಮ ಸಾರ್ಥಕವಾದೀತು.

ಪ್ಯಾನಾಪ್ಟಿಕನ್ ಎಂಬ ಡಿಜಿಟಲ್ ಬಂಡವಾಳಶಾಹಿ ವ್ಯವಸ್ಥೆ.... ಪುಟ 6 ರಿಂದ

ರಂಧ್ರವೊಂದನ್ನು ರಚಿಸಿ ಅದೇ ಗೋಡೆಯ ಹಾಲ್‌ನ ಭಾಗದಲ್ಲಿ ಷೋಕೇಸ್ ನಿರ್ಮಿಸಿಕೊಳ್ಳುತ್ತಾರೆ. ಅಡುಗೆ ಮನೆಯಲ್ಲಿರುವವರಿಗೆ ರಂಧ್ರದ ಬಿಲ್ಲೆಯನ್ನು ಸರಿಸಿದರೆ ಹಾಲ್‌ನಲ್ಲಿರುವ ಜನರು ಕಾಣಿಸುತ್ತಾರೆ. ಹಾಲ್‌ನಲ್ಲಿ ಇರುವ ಜನರಿಗೆ ಅಡುಗೆಮನೆಯಲ್ಲಿ ಇರುವವರು ತಮ್ಮನ್ನು ಗಮನಿಸುತ್ತಿದ್ದಾರೆಂಬುದು ತಿಳಿಯುವುದಿಲ್ಲ.

ಒಬ್ಬ ಕೇಡಿಯೋ, ಕಳ್ಳಸಾಗಾಣಿಕೆದಾರನೋ, ಸಮಾಜಘಾತುಕ ವ್ಯಕ್ತಿಯೋ ಖಳನಾಯಕ ಅಥವಾ ಪ್ರತಿನಾಯಕನಾಗಿರುವ ಸಿನೆಮಾಗಳಲ್ಲಿ ಗೋಡೆಯ ಯಾವುದೋ ಚಿತ್ರಪಟವನ್ನು ಸರಿಸಿದರೆ ಒಂದು ಕಳ್ಳಬಾಗಿಲು, ಮತ್ಯಾವುದೋ ಗುಂಡಿಯನ್ನು ಒತ್ತಿದರೆ ನೆಲಮಾಳಿಗೆಗೆ ಕಳ್ಳದಾರಿ ತೋರಿಸುವ ಬಾಗಿಲುಗಳು ತೆರೆದುಕೊಳ್ಳುತ್ತವೆ. ಅದು ಅವನ ಆತ್ಮರಕ್ಷಣೆಗೆ. ದುಷ್ಟವ್ಯಕ್ತಿಗೂ ಆತ್ಮರಕ್ಷಣೆಯ ಹಕ್ಕು ಇದೆಯಲ್ಲವೆ!

ಇನ್ನೊಬ್ಬರ ಮಾತುಗಳನ್ನು ಕದ್ದು ಕೇಳಿಸಿಕೊಳ್ಳುವುದು ಅನೈತಿಕ. ಆದರೆ ಗೂಢಚಾರರು ಹಾಗೆ ಮಾಡಿದರೆ ಅನೈತಿಕವಾದರೂ, ಅಪರಾಧವಲ್ಲ. ಪರಮ ಪತಿವ್ರತೆಯಾದ ಸೀತೆಯ ಬಗ್ಗೆ ಒಡಕು ಮಾತಾಡಿದ ಸಂಗತಿಯು ಆದರ್ಶ ಪ್ರಜಾಪರಿಪಾಲಕನೆಂಬ ಖ್ಯಾತಿ ಪಡೆದ ಶ್ರೀರಾಮಚಂದ್ರನಿಗೆ ಗೊತ್ತಾಗಿದ್ದೇ ಒಬ್ಬ ಗೂಢಚಾರನ ಮೂಲಕ. ಸರ್ಕಾರವೇ ತಾನು ಆಳುವ 'ಜನರ ಹಿತದೃಷ್ಟಿಯಿಂದ', ಅವರ 'ಕ್ಷೇಮಕ್ಕಾಗಿ' ತನ್ನನ್ನು ಅಧಿಕಾರದಲ್ಲಿ ಕೂಡಿಸಿದ ಜನರ ಮಾತುಗಳನ್ನು ಕದ್ದಾಲಿಸಬಹುದು, ಸಂಗ್ರಹಿಸಬಹುದು. ಈ ಡಿಜಿಟಲ್ ಸತ್ಯ ಎನ್.ಎಸ್.ಎ ದ ಉದ್ಯೋಗಿಯಾದ ಸ್ನೋಡೆನ್ ಬಯಲು ಮಾಡುವ ತನಕ ಯಾರಿಗೂ ಗೊತ್ತಿರಲಿಲ್ಲ. ಈಗಲೂ ಇಂಥದ್ದು ತುಂಬಾ ಜನರಿಗೆ ಗೊತ್ತಿಲ್ಲ.


ಭಾರತವನ್ನು ಈಗ ಸಂಘಪರಿವಾರದ ಜನರಿರುವ, ಫ್ಯಾಸೀ ಧೋರಣೆಯ ಸರ್ಕಾರ ಆಳುತ್ತಿದೆ. ಡಿಜಿಟಲ್ ವ್ಯಾಪಾರದ ಜಾಗತಿಕ ಬಂಡವಳಿಗರು ಅದರ ಬೆನ್ನಿಗಿದ್ದಾರೆ. ಲಾಠಿ ಹಿಡಿದು ತಿರುಗಿಸಿದರೆ ಬುಲೆಟ್ ಕೂಡ ಒಳಗೆ ಬರುವುದಿಲ್ಲವೆಂದು ನಂಬುತ್ತಾ, ಕೋಮುದ್ವೇಷ–ಸುಳ್ಳು ವದಂತಿಗಳನ್ನು ಹರಡುತ್ತಿದ್ದ ಬಡ ಕುಟುಂಬಗಳ ಸ್ವಯಂಸೇವಕರು ಇಂದು ಜಾಗತಿಕ ಬಂಡವಾಳದ ಫಲಾನುಭವಿಗಳಾಗಿ ಲ್ಯಾಪ್‌ಟಾಪ್/ಸ್ಮಾರ್ಟ್‌ಫೋನ್ ಹಿಡಿದು ಮೊದಲು ಮಾಡುತ್ತಿದ್ದ ಕೆಲಸಗಳನ್ನೇ ಇನ್ನೂ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ. ಡಿಜಿಟಲೀಕರಣದ ಬಂಡವಾಳಶಾಹಿ ಆಳ್ವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುವ, ಸಂವಹನದ ಸಾಧನಗಳಾಗಿ ಮಾರುಕಟ್ಟೆಯನ್ನು ಪ್ರವೇಶಿಸಿದ ಕಂಪ್ಯೂಟರ್, ಸೆಲ್‌ಫೋನ್, ಅಂತರ್ಜಾಲ ಕೊಂಡಿಗಳು, ಸ್ಮಾರ್ಟ್‌ಫೋನ್ ಕ್ಯಾಮರಾ, ಸಾಮಾಜಿಕ ಜಾಲತಾಣಗಳು ಮುಂತಾದ ಎಲ್ಲಾ ಡಿಜಿಟಲ್ ಸಾಧನಗಳೂ ಇಂದು ಜನರ ವೈಯಕ್ತಿಕ ಮಾಹಿತಿ, ಕುಟುಂಬದ ಸದಸ್ಯರು, ಸ್ನೇಹಿತರು, ಬೇಕು–ಬೇಡಗಳು, ಆಹಾರ, ಬಟ್ಟೆ–ಬರೆ, ರುಚಿ–ಅಭಿರುಚಿಗೆ ಸಂಬಂಧಿಸಿದ ಅವರ ವಿವಿಧ ಆಯ್ಕೆಗಳು, ರಾಜಕೀಯ ಒಲವು, ಮುಂತಾದುವೆಲ್ಲವನ್ನೂ ವ್ಯವಸ್ಥಿತವಾಗಿ ಕಲೆಹಾಕುವ ಸರ್ವೇಕ್ಷಣೆಯ ಸಾಧನಗಳಾಗಿ ಬಳಕೆಯಾಗುತ್ತಿವೆ. ಬಳಕೆದಾರರ ವೈಯಕ್ತಿಕ ಮಾಹಿತಿ ಈಗ ಮಾರಾಟ ಮಾಡಬಹುದಾದ ಲಾಭದಾಯಕ ಸರಕಾಗಿದೆ.

ಕಳ್ಳರು ಗೋಡೆಗೆ ಕನ್ನ ಕೊರೆದು ಕಳ್ಳತನ ಮಾಡುತಿದ್ದ ಕಾಲವೊಂದಿತ್ತು. ಡಿಜಿಟಲ್ ಸಾಧನಗಳನ್ನು ಬಳಸಿ ಯಾರದೋ ಬ್ಯಾಂಕಿನಲ್ಲಿನ ಹಣವನ್ನು ಮತ್ಯಾರೋ ಕದಿಯಲು ಸಾಧ್ಯ ಎಂಬುದು ಈಗ ಹಳೆಯ ಮಾತು. ಕದಿಯುವುದು ಮಾತ್ರವಲ್ಲ, ಯಾರೋ ಮತ್ಯಾರದೋ ಕಂಪ್ಯೂಟರಿನೊಳಕ್ಕೆ ಡಿಜಿಟಲ್ ಮಾರ್ಗದಲ್ಲಿ ಕದ್ದು ಪ್ರವೇಶಿಸಿ ಆತಂಕಕಾರಿ ದಾಖಲೆಗಳನ್ನು ಹಾಕಬಹುದು. ಇದು ನಮಗಾಗದವರು ನಮ್ಮ ಮನೆಯೊಳಕ್ಕೆ ಕದ್ದು ಪ್ರವೇಶಿಸಿ ಗಂಧದ ತುಂಡನ್ನೋ, ಗಾಂಜಾ ಸೊಪ್ಪನ್ನೋ ಇರಿಸಿ ನಮ್ಮ ವಿರುದ್ಧ ಪೋಲೀಸರಿಗೆ ಮಾಹಿತಿ ಸಿಗುವಂತೆ ಮಾಡಿದ ಹಾಗೆ. ನಿಸ್ವಾರ್ಥ, ಸುಶಿಕ್ಷಿತ ವೃದ್ಧ, ಸಮಾಜಸೇವಕರ ಕಂಪ್ಯೂಟರಿನಲ್ಲಿ ಯಾರೋ ದುಷ್ಟ ಡಿಜಿಟಲ್ ಸೇವಕರು 'ವಿಧ್ವಂಸಕ' ದಾಖಲೆಗಳನ್ನು ಕದ್ದು ಇರಿಸಿ ಅವರನ್ನು ಜೈಲಿನಲ್ಲಿ ಕೊಳೆಯುವಂತೆ, ಸಾಯುವಂತೆ ಮಾಡುವ ವಿಧ್ವಂಸಕ ಡಿಜಿಟಲ್ ತಂತ್ರಜ್ಞಾನ ಈಗ ಮೂರು ವರ್ಷ ಹಳೆಯದು. ಆ'ವಿಧ್ವಂಸಕ ದಾಖಲೆ'ಗಳು ಆ ಸಮಾಜಸೇವಕರ ಕಂಪ್ಯೂಟರಿನಲ್ಲಿ ಇವೆ ಎಂದು ಅವರನ್ನು ಬಂಧಿಸಿದ ಪೋಲೀಸರಿಗೆ ಹೇಗೆ ತಿಳಿಯಿತು? ಈ ಪ್ರಶ್ನೆಗೆ ಉತ್ತರ ಬಹುಶಃ ಡಿಜಿಟಲ್ ಸರ್ವೇಕ್ಷಣೆಯ ಸಾಧ್ಯತೆಗಳಲ್ಲಿ ದೊರೆಯಬಹುದು.

ಇದನ್ನೆಲ್ಲಾ ತಿಳಿದುಕೊಂಡು ನಾವು ಮಾಡುವುದೇನಿದೆ? ಇದಕ್ಕೆ ಉತ್ತರ ಇಷ್ಟೆ. ಈ ಎಲ್ಲಾ ವಿವರಗಳ ಸಾರ ಸರ್ವಸ್ವವನ್ನು ಎರಡು ಮಾತುಗಳಲ್ಲಿ ಹೇಳಬಹುದು. ಇದು ಜಾಗತಿಕ ಬಂಡವಾಳವು ಜನಸಾಮಾನ್ಯರೊಂದಿಗೆ ಅವರ ಹಿತಾಸಕ್ತಿಗಳಿಗೆ ವಿರುದ್ಧವೇ ನಡೆಸುತ್ತಿರುವ ಉತ್ಪಾದನೆ ಮತ್ತು ವ್ಯಾಪಾರದ ಸಂಬಂಧಗಳು. ಜೊತೆಗೆ ಬಂಡವಾಳಶಾಹೀ ಮಾರುಕಟ್ಟೆಯು ಹುಟ್ಟಿಸಿದವರನ್ನೇ ಮೆಟ್ಟಿ ನಿಲ್ಲುವ ಪಿಶಾಚಿಯಂತೆ ಬಂಡವಳಿಗರನ್ನೂ ಆಳುತ್ತಿದೆ. ಪ್ರತಿಭಟನೆಗಳಿಂದ, ಆಗ್ರಹಗಳಿಂದ ಅಥವಾ ಇಂದಿನ ಸರ್ಕಾರಗಳಿಗೆ ಶಾಪಹಾಕುವುದರಿಂದ ಈ ವ್ಯವಸ್ಥೆಯನ್ನು ಬದಲಾಯಿಸುವುದು ಎಂದಿಗೂ ಸಾಧ್ಯವಿಲ್ಲ. ಬಂಡವಾಳದ ಬಂಡವಾಳ ನಿಂತಿರುವುದು ಜನಸಾಮಾನ್ಯರು ಬಂಡವಳಿಗರಿಗೆ ಮುಫತ್ತಾಗಿ ದುಡಿದು ಕೊಡುತ್ತಿರುವ ಹೆಚ್ಚುವರಿ ಮೌಲ್ಯದ ಮೇಲೆ. ಜನರಿಗೆ ಹುಟ್ಟಿನಿಂದಲೇ ಅಂಟಿಕೊಂಡು ಬಂದಿರುವ ಜಾತಿ ಎಂಬ ಶ್ರಮ ವಿಭಜನೆಯ ಮೇಲೆ. ಜನಸಾಮಾನ್ಯರು ಸಂಘಟಿತರಾಗಿ ಸಮಾಜವಾದೀ ಸರ್ಕಾರವನ್ನು ಅಧಿಕಾರಕ್ಕೆ ತಂದಾಗ ಮಾತ್ರ ಇವನ್ನು ಬದಲಾಯಿಸುವುದು ಸಾಧ್ಯ. ಚುನಾವಣೆ ಬಂದಾಗ ರಾಜ್ಯಾಧಿಕಾರಕ್ಕೆ ಪ್ರಯತ್ನಿಸುವುದಲ್ಲ. ಅದು ಬರುವ ಮೊದಲೇ ಸಮಾಜವಾದೀ ಅರಿವನ್ನು ಬೆಳೆಸಿಕೊಂಡು ಸಿದ್ಧರಾಗುವುದು. ■

JANASHAKTHI KANNADA VARA PATRIKE July 19-25, 2021 Price: Rs. 10/- Date of Publication: 16 July 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಏಂಗೆಲ್ಸ್ 200 ಮಾಲಿಕೆಯ ಅನಾವರಣ–ಎರಡು ಪುಸ್ತಕಗಳ ಬಿಡುಗಡೆ



ಜರ್ಮನ್ ತತ್ವಶಾಸ್ತ್ರಜ್ಞ, ಇತಿಹಾಸಕಾರ, ರಾಜಕೀಯ ಶಾಸ್ತ್ರಜ್ಞ, ಪತ್ರಕರ್ತ ಮತ್ತು ಕ್ರಾಂತಿಕಾರಿ ಸಮಾಜವಾದಿ – ಈ ಎಲ್ಲವೂ ಆಗಿದ್ದ ಫ್ರೆಡೆರಿಕ್ ಏಂಗೆಲ್ಸ್ ಹುಟ್ಟಿದ್ದು, ನವೆಂಬರ್ 28, 1820ರಂದು. 2020ರ ನವೆಂಬರ್ 28ಕ್ಕೆ ಅವರಿಗೆ 200 ವರ್ಷ. ನವೆಂಬರ್ 2020 ರಿಂದ ನವೆಂಬರ್ 2021ರ ಅವಧಿಯನ್ನು ಏಂಗೆಲ್ಸ್ ಜನ್ಮ ದ್ವಿಶತಮಾನೋತ್ಸವವಾಗಿ ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಮಾರ್ಕ್ಸ ವಾದ ಎಂದು ಕರೆಯಲಾಗುತ್ತಿರುವ ವಿಶಿಷ್ಟ ಲೋಕದೃಷ್ಟಿಯನ್ನು ಬೆಳೆಸುವಲ್ಲಿ ಮಾರ್ಕ್ಸ್ ರ ಜತೆ ಏಂಗೆಲ್ಸ್ ಅವರ ಪಾತ್ರ ಹೆಚ್ಚು ಕಡಿಮೆ ಸಮಾನವಾಗಿತ್ತು.

ಏಂಗೆಲ್ಸ್ ಅವರ ಜನ್ಮ ದ್ವಿಶತಮಾನೋತ್ಸವವನ್ನು ಮಾರ್ಕ್ಸ್‌ವಾದದ ಲೋಕದೃಷ್ಟಿಯ ಆಧಾರಸ್ತಂಭಗಳು ಎನಿಸಿಕೊಂಡಿರುವ ಅವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲು ನಾಡಿನ ಪ್ರಗತಿಪರ ಪುಸ್ತಕಗಳ ಪ್ರಕಾಶನ ಸಂಸ್ಥೆಗಳಾದ (ಈ ಹಿಂದೆ ಮಾರ್ಕ್ಸ್200–ಕ್ಯಾಪಿಟಲ್ 150 ಯೋಜನೆಯನ್ನು ಸಫಲವಾಗಿ ಪೂರ್ಣಗೊಳಿಸಿದ) ನವಕರ್ನಾಟಕ ಮತ್ತು ಕ್ರಿಯಾ ಮಾಧ್ಯಮಗಳು ಜಂಟಿಯಾಗಿ ಯೋಜಿಸಿವೆ.

ಈ ಮಾಲಿಕೆ ಯಲ್ಲಿ ಮೊದಲ ಎರಡು ಪುಸ್ತಕ ಗಳು ಸಿದ್ಧವಾಗಿದ್ದು ಜುಲೈ 20 ಮತ್ತು 21ರಂದು ಆನ್–ಲೈನ್ (ಝೂಮ್) ನಲ್ಲಿ ಬಿಡುಗಡೆಯಾಗುತ್ತಿವೆ. ಈ ಎರಡು ಕಾರ್ಯಕ್ರಮಗಳು ಜನಶಕ್ತಿ ಮೀಡಿಯಾ ಫೇಸ್ ಬುಕ್ ಮತ್ತು ಯೂಟ್ಯೂಬ್ ತಾಣಗಳಲ್ಲಿ ಲೈವ್ ಆಗಿ ಪ್ರಸಾರವಾಗಲಿವೆ.


ಈ ಎರಡು ಪುಸ್ತಕಗಳ ಕಿರುಪರಿಚಯ ಮತ್ತು ಮುಖಪುಟದ ಚಿತ್ರಗಳು ಇಲ್ಲಿವೆ.

ಜುಲೈ 20 ರಂದು ಹಿರಿಯ ಮಾರ್ಕ್ಸ್‌ವಾದಿ ವಿದ್ವಾಂಸರಾದ ಪ್ರೊ. ಕೆ.ಕೆ.ತೆಕ್ಕೆಡೆತ್, 'ಫ್ರೆಡೆರಿಕ್ ಎಂಗೆಲ್ಸ್' ಪುಸ್ತಕ ಬಿಡುಗಡೆ ಮಾಡಿ "ವೈಜ್ಞಾನಿಕ ಸಮಾಜವಾದಕ್ಕೆ ಏಂಗೆಲ್ಸ್ ಕೊಡುಗೆ" ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಜುಲೈ 21ರಂದು "ಜರ್ಮನ್ ಸಿದ್ಧಾಂತ'ದ ಪುಸ್ತಕ ಬಿಡುಗಡೆ ಮಾಡಿ ಪ್ರೊ.ರಾಜೇಂದ್ರ ಚೆನ್ನಿ ಅವರು 'ಕರ್ನಾಟಕದ ಬೌದ್ಧಿಕ ಪರಂಪರೆ ಮತ್ತು ಸಂಕಥನಗಳಲ್ಲಿ ಭಾವನಾವಾದದ ಪ್ರಭಾವ' ದ ಕುರಿತು ಸಂವಾದದ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ಪುಸ್ತಕ ಬಿಡುಗಡೆ ಕಾರ್ಯಕ್ರಮದ ವಿವರವಾದ ಆಹ್ವಾನ ಪತ್ರಿಕೆ ಇಲ್ಲಿದೆ.

ಜೊತೆಗೆ ರೂ. 1800 ಬೆಲೆಯ 6 ಪುಸ್ತಕಗಳ ಸೆಟ್ ಖರೀದಿಗೆ ರೂ. 1200 ವಿಶೇಷ ಪ್ರಕಟಣಾ–ಪೂರ್ವ ರಿಯಾಯಿತಿ ಕೂಪನು ಖರೀದಿಸುವ ಮೂಲಕ ಪಡೆಯಬಹುದು. ಈ ರಿಯಾಯಿತಿ ಕೂಪನುಗಳೂ ಪುಸ್ತಕಗಳೊಂದಿಗ ಬಿಡುಗಡೆಯಾಗಲಿವೆ. ಇವನ್ನು ಮಾಲಿಕೆಯ ಕೊನೆಯ ಪುಸ್ತಕದ ಬಿಡುಗಡೆ ದಿನಾಂಕದವರೆಗೆ ಖರೀದಿಸಬಹುದು.

ಇಲ್ಲಿ ಕೊಡಲಾಗಿರುವ ಪ್ರಕಟಣಾ–ಪೂರ್ವ ರಿಯಾಯಿತಿ ಕೂಪನಿನ ಹಿಂಭಾಗದ ಚಿತ್ರ ಇದರ ವಿವರಗಳನ್ನು ಕೊಡುತ್ತದೆ.







JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**